ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಫೆಬ್ರವರಿ 21 ಶುಕ್ರವಾರ 2025

ಸಂಪುಟ: 45 | ಸಂಚಿಕೆ: 304 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಡಾ ನಿವೇಶನ ಹಂಚಿಕೆ ಹಗರಣ
ಸಿಎಂ ಸಿದ್ದರಾಮಯ್ಯ ಈಗ ಗೆದ್ದರಾಮಯ್ಯ

- ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಭಾಮೈದ ಮಲ್ಲಿಕಾರ್ಜುನಸ್ವಾಮಿ, ಭೂಮಿ ಮಾಲೀಕ ದೇವರಾಜ್‌ಗೆ ಲೋಕಾಯುಕ್ತ ಕ್ಲೀನ್‌ಚಿಟ್
- 27 ಸಂಪುಟ; 11 ಸಾವಿರ ಪುಟಗಳ ತನಿಖಾ ವರದಿ ವಿಶೇಷ ಜನಪ್ರತಿನಿಧಿ ನ್ಯಾಯಾಲಯಕ್ಕೆ ಸಲ್ಲಿಸಿದ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್
- ಸಿಎಂ ಸಿದ್ದರಾಮಯ್ಯ ಮೇಲಿನ ಆರೋಪಗಳೆಲ್ಲವೂ ಸುಳ್ಳು
- ಅಧಿಕಾರಿಗಳ ಎಡವಟ್ಟಿನಿಂದ ಆದ ಮಹಾಲೋಪ ಅಷ್ಟೆ!





ಬೆಂಗಳೂರು, ಫೆ.20(ಕೆಎಂಶಿ)– ಮುಡಾ ಹಗರಣದಲ್ಲಿ ನ್ಯಾಯಾಲಯಕ್ಕೆ ಲೋಕಾಯುಕ್ತ ಬಿ–ರಿಪೋರ್ಟ್ ಸಲ್ಲಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಭಾಮೈದ ಮಲ್ಲಿಕಾರ್ಜುನಸ್ವಾಮಿ, ಜಮೀನು ಮಾಲೀಕ ದೇವರಾಜು ಅವರಿಗೆ ಕ್ಲೀನ್‌ಚಿಟ್ ನೀಡಿದೆ.

ಸಿದ್ದರಾಮಯ್ಯ ಕುಟುಂಬ 14 ಬಿಡಿ ನಿವೇಶನಗಳನ್ನು ಪಡೆದಿರುವುದಕ್ಕೆ ಸಂಬಂಧಿಸಿದಂತೆ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್, 27 ಸಂಪುಟಗಳನ್ನು ಒಳಗೊಂಡ 11,000 ಪುಟಗಳ ತನಿಖಾ ವರದಿಯನ್ನು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಸಲ್ಲಿಸಿದರು. ಎಂಟು ಸಾವಿರ ಪುಟಗಳ ವರದಿ, 3000 ಡಾಕ್ಯೂಮೆಂಟರಿಗಳನ್ನು ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರಿಗೆ ಸಲ್ಲಿಸಿದರು. ಸಾಕ್ಷ್ಯಾಧಾರಗಳ ಕೊರತೆ ಹಿನ್ನೆಲೆಯಲ್ಲಿ ಪ್ರಮುಖ ನಾಲ್ವರು ಆರೋಪಿಗಳ ಪಾತ್ರವಿಲ್ಲ ಎಂಬುದು ಕಂಡುಬಂದಿದೆ. ಜೊತೆಗೆ ಇವರು ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬುದಕ್ಕೆ ಯಾವುದೇ ಸಾಕ್ಷಿಗಳಿಲ್ಲ ಎಂದು ವರದಿಯಲ್ಲಿ ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ 50 ಜನರ ಹೇಳಿಕೆಗಳನ್ನು ದಾಖಲಿಸಿದ್ದು, ತನಿಖಾ ಸಂದರ್ಭದಲ್ಲಿ ಪ್ರಮುಖ ಆರೋಪಿಗಳ ಪಾತ್ರ ಇಲ್ಲ ಹಾಗೂ ಸಾಕ್ಷಿಗಳೂ ಇಲ್ಲ, ಹಾಗಾಗಿ ಅವರನ್ನು ಬಿಟ್ಟು ತನಿಖೆ ಮುಂದುವರೆಸುವುದಾಗಿ ಹೇಳಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಮಾಡಿರುವ ಆರೋಪಗಳೆಲ್ಲವೂ ■6ನೇ ಪುಟಕ್ಕೆ

ಬಿಜೆಪಿ ಹಾಗೂ ಜೆಡಿಎಸ್‌ನವರು ಬೆಂಗಳೂರಿನಿಂದ ಮೈಸೂರುವರೆಗೆ ಪಾದಯಾತ್ರೆ ಮಾಡಿದಾಗಲೇ, ನಾನು ಏನು ಹೇಳಬೇಕೋ ಹೇಳಿದ್ದೆ. ಇದು ರಾಜಕೀಯ ಪ್ರೇರಿತ ಆರೋಪ. ಯಾವ ದಾಖಲೆಯಲ್ಲೂ ಸಿದ್ದರಾಮಯ್ಯ ಅವರ ಸಹಿ ಇಲ್ಲದಿರುವಾಗ, ಅವರ ಪಾತ್ರ ಹೇಗೆ ಬರುತ್ತದೆ. ಆಸ್ತಿ ಕಳೆದುಕೊಂಡವರು ಪರಿಹಾರ ಕೇಳುವುದು ಸಹಜ. ನಾವು, ನೀವು ಕೂಡ ಕೇಳುತ್ತೇವೆ. ಮುಡಾದವರು ಕೊಟ್ಟಿದ್ದಾರೆ. ನಮಗೆ ಇಂತಹುದೇ ಜಾಗದಲ್ಲಿ ನಿವೇಶನ ನೀಡಿ ಎಂದು ಅವರು ಎಲ್ಲಿಯೂ ಕೇಳಿಲ್ಲ. ಆದರೂ ಅನಗತ್ಯ ಗೊಂದಲ ಬೇಡ ಎಂದು ಅವರು ಈ ನಿವೇಶನಗಳನ್ನು ವಾಪಸ್ ನೀಡಿದ್ದಾರೆ. ಯಾವುದೇ ಪ್ರಕರಣ ದಾಖಲಿಸುವಾಗ ಅದಕ್ಕೆ ಪೂರಕವಾದ ದಾಖಲೆ ಬೇಕು. ಲೋಕಾಯುಕ್ತ ಸಂಸ್ಥೆ ತನ್ನ ಕರ್ತವ್ಯ ಮಾಡಿದೆ. ಬಿಜೆಪಿಯವರು ತಮ್ಮ ಹೋರಾಟ ಮಾಡಿಕೊಳ್ಳಲಿ. ದೆಹಲಿಯಿಂದ ವಕೀಲರನ್ನು ಕರೆಸಿ ವಾದ ಮಂಡಿಸಲು ನಮಗೆ ಗೊತ್ತಿಲ್ಲವೇ? ಇದು ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಕುತಂತ್ರ. ಇದು ಹೆಚ್ಚು ದಿನ ನಡೆಯುವುದಿಲ್ಲ. –ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ



ಹೆಚ್‌ಎಂಗೆ ಬ್ರೇಕ್!

ಬೆಂಗಳೂರು, ಫೆ.20– ಸರ್ಕಾರಿ ಶಾಲೆಗಳಲ್ಲಿ ಮಾಹಿತಿ ನೀಡದೇ ಮುಖ್ಯ ಶಿಕ್ಷಕರು (ಹೆಚ್‌ಎಂ) ಬೇಕಾಬಿಟ್ಟಿ ಸಭೆ–ಸಮಾರಂಭಗಳಿಗೆ ಹೋಗುವುದಕ್ಕೆ ಶಿಕ್ಷಣ ಇಲಾಖೆ ಬ್ರೇಕ್ ಹಾಕಿದೆ. ಶಾಲಾ ಸಮಯದಲ್ಲಿ ಇನ್ನು ಮುಂದೆ ಮುಖ್ಯ ಶಿಕ್ಷಕರು ಸಭೆ, ಸಮಾರಂಭಗಳಿಗೆ ಹೋಗುವಂತಿಲ್ಲ. ಈ ಸಂಬಂಧ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಇನ್ನು ಮುಂದೆ ಸಭೆ, ಸಮಾರಂಭಗಳಿಗೆ ಹೋಗುವ ಮುನ್ನ ಮುಖ್ಯ ಶಿಕ್ಷಕರು ಮಾಹಿತಿಯನ್ನು ಕಡ್ಡಾಯವಾಗಿ ನೀಡಬೇಕು. ಮಾಹಿತಿ, ಆಹ್ವಾನ ಪತ್ರಿಕೆ, ಸಭಾ ಸೂಚನೆ ಪತ್ರವನ್ನು ಕಡ್ಡಾಯವಾಗಿ ನಮೂದಿಸಿ ಹೋಗಬೇಕು ಎಂದು ರಾಜ್ಯದ ಎಲ್ಲಾ ಸರ್ಕಾರಿ ಶಾಲಾ ಮುಖ್ಯ ಶಿಕ್ಷಕರಿಗೆ ಆದೇಶ ಹೊರಡಿಸಿದೆ.

ಕರಿಮೆಣಸಿಗೆ ಜಿಎಸ್‌ಟಿ ರದ್ದು



ಮಡಿಕೇರಿ, ಫೆ.20–ಕೇಂದ್ರ ಸರ್ಕಾರ ಕರಿಮೆಣಸಿಗೆ ವಿಧಿಸಿದ್ದ ಜಿಎಸ್‌ಟಿಯನ್ನು (ಸರಕು ಮತ್ತು ಸೇವಾ ತೆರಿಗೆ) ಸಂಪೂರ್ಣ ತೆಗೆದುಹಾಕಿದ್ದು, ಕೊಡಗಿನ ಬೆಳೆಗಾರರು ಹರ್ಷ ವ್ಯಕ್ತಪಡಿಸಿದ್ದಾರೆ. ಕೊಡಗಿನ ಗೋಣಿಕೊಪ್ಪ ಬೆಳೆಗಾರರೊಬ್ಬರಿಗೆ 1 ಕೋಟಿ ರೂ. ಜಿಎಸ್‌ಟಿ ಕಟ್ಟುವಂತೆ ನೋಟಿಸ್ ಬಂದಿತ್ತು. ಬಳಿಕ ಅವರು ಕರ್ನಾಟಕ ಕಾಫಿ ಬೆಳೆಗಾರರ ಸಂಘ, ಕರ್ನಾಟಕ ಬೆಳೆಗಾರರ ಸಂಘ, ಕೊಡಗು ಪ್ಲಾಂಟರ್ಸ್ ಅಸೋಸಿಯೇಷನ್ ನಿಯೋಗದೊಂದಿಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಸಂಪರ್ಕಿಸಿ ಮನವಿ ಸಲ್ಲಿಸಿದ್ದರು. ಈ ಸಂಬಂಧ ಯದುವೀರ್ ಅವರು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಗಮನ ಸೆಳೆದಿದ್ದರು. ಅದರಂತೆ ಈಗ ಕರಿಮೆಣಸು ಬೆಳೆಗಾರರಿಗೆ ಕೇಂದ್ರ ಶುಭ ಸುದ್ದಿ ನೀಡಿದೆ. ಕರಿಮೆಣಸು ಬೆಳೆಗೆ ಜಿಎಸ್‌ಟಿ ರದ್ದು ಮಾಡಿ ಆದೇಶ ಹೊರಡಿಸಿದೆ. ಈ ಹಿನ್ನೆಲೆ ವಿವಿಧ ಬೆಳೆಗಾರ ಸಂಘಟನೆಗಳು ಸಂಸದ ಯದುವೀರ್ ಒಡೆಯರ್ ಅವರಿಗೆ ಧನ್ಯವಾದ ಸಲ್ಲಿಸಿವೆ.

ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯತ್ರಿ ವರ್ಗಾವಣೆ


ಕೆ.ಎಂ.ಗಾಯತ್ರಿ


ಎಸ್.ಯುಕೇಶ್

ಮೈಸೂರು, ಫೆ.20– ಮೈಸೂರು ಜಿಲ್ಲಾ ಪಂಚಾಯಿತಿ ಸಿಇಓ ಕೆ.ಎಂ.ಗಾಯತ್ರಿ ವರ್ಗಾವಣೆಗೊಂಡಿದ್ದಾರೆ.

ಇವರನ್ನು ರಾಷ್ಟ್ರೀಯ ಜೀವನೋಪಾಯ ಮಿಷನ್(ಎನ್‌ಎಲ್‌ಎಂ)ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ (ಕಾರ್ಯಾಚರಣೆ)ಯಾಗಿ ವರ್ಗಾವಣೆಗೊಳಿಸಲಾಗಿದ್ದು, ಡಿಪಿಎಆರ್ (ಸೇವೆಗಳು) ಉಪ ಕಾರ್ಯದರ್ಶಿಯಾಗಿದ್ದ ಎಸ್.ಯುಕೇಶ್ ಕುಮಾರ್ ಅವರನ್ನು ಮೈಸೂರು ಜಿಪಂ ಸಿಇಓ ಆಗಿ ನಿಯೋಜಿಸಲಾಗಿದೆ. ಇವರನ್ನೊಳಗೊಂಡಂತೆ ಹತ್ತು ಮಂದಿ ಐಎಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ರಾಜ್ಯ ಸರ್ಕಾರ ಗುರುವಾರ ಆದೇಶಿಸಿದೆ.

ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರ ಆವರಣ ಅಭಿವೃದ್ಧಿಗೆ 20 ಕೋಟಿ ಬಿಡುಗಡೆ



ಬೆಂಗಳೂರು, ಫೆ.20(ಕೆಎಂಶಿ)– ಮೈಸೂರಿನಲ್ಲಿನ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣ ಅಭಿವೃದ್ಧಿಗೆ ರಾಜ್ಯ ಸಚಿವ ಸಂಪುಟ 20 ಕೋಟಿ ರೂ. ಬಿಡುಗಡೆಗೆ ಅನುಮೋದನೆ ನೀಡಿದೆ. ಅರಮನೆ ನಗರವನ್ನು ಪ್ರವಾಸಿ ಕೇಂದ್ರವಾಗಿ ಮತ್ತಷ್ಟು ಅಭಿವೃದ್ಧಿಪಡಿಸುವ ಮತ್ತು ಅಂತಾರಾಷ್ಟ್ರೀಯ ಮಟ್ಟದ ವಸ್ತುಪ್ರದರ್ಶನಕ್ಕೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಕಳೆದ ಕೆಲವು ದಿನಗಳ ಹಿಂದಷ್ಟೇ ನಗರದ ಕೇಂದ್ರ ಭಾಗದಲ್ಲಿದ್ದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಗ್ರಾಮಾಂತರ ಬಸ್ ನಿಲ್ದಾಣವನ್ನು ಹೊರವಲಯಕ್ಕೆ ಸ್ಥಳಾಂತರಿಸಲು ಸಂಪುಟ ಅನುಮತಿ ■6ನೇ ಪುಟಕ್ಕೆ

ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ
ವಿವಾದಿತ ಪೋಸ್ಟ್ ಹಾಕಿದ್ದ ಸತೀಶ್ ಗಡಿಪಾರಿಗೆ ಪೊಲೀಸರ ಪ್ರಕ್ರಿಯೆ ಆರಂಭ



ಮೈಸೂರು, ಫೆ.20(ಬಿಎಲ್‌ಯು)– ವಾಟ್ಸಾಪ್ ಸ್ಟೇಟಸ್‌ನಲ್ಲಿ ವಿವಾದಿತ ಪೋಸ್ಟ್ ಹಾಕಿ ಉದಯಗಿರಿ ಪೊಲೀಸ್ ಠಾಣೆ ಬಳಿ ಗಲಾಟೆಗೆ ಕಾರಣನಾಗಿದ್ದ ಸತೀಶ್ ಅಲಿಯಾಸ್ ಪಾಂಡುರಂಗನನ್ನು ಗಡಿಪಾರು ಮಾಡಲು ಪೊಲೀಸರು ಪ್ರಕ್ರಿಯೆ ಆರಂಭಿಸಿದ್ದಾರೆ. ಉದಯಗಿರಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಕೆ.ಎನ್.ಸುಧಾಕರ್, ಕರ್ನಾಟಕ ಪೊಲೀಸ್ ಆ್ಯಕ್ಟ್ ಅಧಿನಿಯಮ ■6ನೇ ಪುಟಕ್ಕೆ

ಪ್ರಚೋದನಾಕಾರಿ ಭಾಷಣ: ಮೌಲ್ವಿ ಬಂಧನ

ಮೈಸೂರು: ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದ ಪ್ರಕರಣದಲ್ಲಿ ಪ್ರಚೋದನಾಕಾರಿ ಭಾಷಣ ಮಾಡಿದ್ದ ಮೌಲ್ವಿಯನ್ನು ಪೊಲೀಸರು ಬಂಧಿಸಿದ್ದಾರೆ. ಉದಯಗಿರಿ ವಾಸಿ ಮುಫ್ತಿ ಮುಷ್ತಾಕ್ ಮಕ್ಬೂಲಿ ಬಂಧಿತ ಆರೋಪಿಯಾಗಿದ್ದು, ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದ ಪ್ರಕರಣದಲ್ಲಿ ಇವರು ಮಾಡಿದ ಪ್ರಚೋದನಾಕಾರಿ ಭಾಷಣ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು ಘಟನೆ ಬಳಿಕ ಇವರು ತಲೆ ಮರೆಸಿಕೊಂಡಿದ್ದರು. ಇಂದು ಮೌಲ್ವಿಯನ್ನು ಬಂಧಿಸಿದ ಉದಯಗಿರಿ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಸಿಎಂ ಸಿದ್ದರಾಮಯ್ಯ ಭವಿಷ್ಯ, ಅದೃಷ್ಟ ಎರಡೂ ಗಟ್ಟಿಯಾಗಿದೆ
ಶಾಸಕ ಜಿ.ಟಿ.ದೇವೇಗೌಡರ ಅಭಿಪ್ರಾಯ

- ಲೋಕಾಯುಕ್ತರ ವರದಿ ನಿಷ್ಪಕ್ಷಪಾತವಾಗಿದೆ
- ಬರೀ ಆರೋಪಕ್ಕೆ ರಾಜೀನಾಮೆ ಕೇಳುವುದು ಸರಿಯಲ್ಲ
- ನಿವೇಶನ ಪಡೆದ ನನಗೂ, ನನ್ನ ಅಕ್ಕನ ಮಗನಿಗೂ ಸಂಬಂಧವಿಲ್ಲ


ಶಾಸಕ ಜಿ.ಟಿ.ದೇವೇಗೌಡರು

ಮೈಸೂರು, ಫೆ.20(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭವಿಷ್ಯ ಹಾಗೂ ಅದೃಷ್ಟ ಎರಡೂ ಗಟ್ಟಿಯಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ತಮ್ಮ ನಿವಾಸದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ಸಂಬಂಧ ಲೋಕಾಯುಕ್ತರು ಕ್ಲೀನ್‌ಚಿಟ್ ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಜಿ.ಟಿ.ದೇವೇಗೌಡರು, ಮತ್ತೊಮ್ಮೆ ಸಿದ್ದರಾಮಯ್ಯ ಪರ ಬ್ಯಾಟ್ ಬೀಸಿದರು.

ಸಿದ್ದರಾಮಯ್ಯ ಅವರಂತಹ ಅದೃಷ್ಟ ರಾಜಕಾರಣಿ ಇನ್ನೊಬ್ಬರಿಲ್ಲ. 1983ರಲ್ಲಿ ಸಿದ್ದರಾಮಯ್ಯ ಅದೃಷ್ಟದಿಂದ ಶಾಸಕರಾದರು. ಅಂದು ಸಿದ್ದರಾಮಯ್ಯ ಅವರ ರಾಜಕೀಯ ಭವಿಷ್ಯ ಗಟ್ಟಿಯಾಗಿತ್ತು. ಇಂದು ಹಾಗೂ ಭವಿಷ್ಯದಲ್ಲಿ ಕೂಡ ಸಿದ್ದರಾಮಯ್ಯ ರಾಜಕೀಯ ಭವಿಷ್ಯ ಗಟ್ಟಿಯಾಗಿರುತ್ತದೆ ಎಂದು ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು. ಮುಡಾ ಪ್ರಕರಣ ಸಂಬಂಧ ಒಂದು ಪತ್ರದ ಆಧಾರದ ಮೇಲೆ ದೂರು ನೀಡಿದ್ದಾರೆ. ಆದರೆ ಒಂದು ಎಫ್‌ಐಆರ್ ದಾಖಲಾದ ಕೂಡಲೇ ಅಧಿಕಾರದಲ್ಲಿ ಇರುವವರನ್ನು ರಾಜೀನಾಮೆ ಕೊಡಿ ಎಂದು ಕೇಳುವುದೇ ತಪ್ಪು ಎಂದು ತಿಳಿಸಿದರು. ಸಿದ್ದರಾಮಯ್ಯಗೂ, ಭಾಮೈದ ಮಲ್ಲಿಕಾರ್ಜುನ ಸ್ವಾಮಿಗೂ ವ್ಯವಹಾರ ಕುರಿತಂತೆ ಯಾವುದೇ ಸಂಬಂಧವಿಲ್ಲ. ಈತ ಸಿದ್ದರಾಮಯ್ಯ ಭಾಮೈದ ಎಂಬ ಕಾರಣಕ್ಕೆ ದೊಡ್ಡ ವಿವಾದ ಸೃಷ್ಟಿಸಿದ್ದಾರೆ. ಮಲ್ಲಿಕಾರ್ಜುನಸ್ವಾಮಿ ರಿಯಲ್ ಎಸ್ಟೇಟ್ ಉದ್ಯಮಿಯೂ ಅಲ್ಲ. ಇದರಿಂದ ಈ ಪ್ರಕರಣದ ಆರೋಪಕ್ಕೆ ಯಾವುದೇ ಸಾಕ್ಷಿ ಇಲ್ಲ ಎಂದು ಲೋಕಾಯುಕ್ತರು ಹೇಳಿದ್ದಾರೆ ಎಂದು ಸ್ಪಷ್ಟಪಡಿಸಿದರು. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುವ ಅಗತ್ಯ ಇಲ್ಲ ■6ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್ ಸಿಎಂ ಆಗಲು ಸಿದ್ದರಾಮಯ್ಯ ಬೆಂಬಲ ಬೇಕೇಬೇಕು

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲು ಸಿದ್ದರಾಮಯ್ಯ ಬೆಂಬಲ ಬೇಕೇಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು. ಒಂದಲ್ಲಾ ಒಂದು ದಿನ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗೆ ಆಗುತ್ತಾರೆ. ಆದರೆ ಯಾವಾಗ ಎಂದು ನನಗೆ ಗೊತ್ತಿಲ್ಲ ಎಂದು ಹೇಳಿದರು. ಕೇವಲ 10 ಶಾಸಕರ ಬೆಂಬಲದಿಂದ ಯಾರೂ ಕೂಡ ಮುಖ್ಯಮಂತ್ರಿ ಆಗಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟ ಜಿ.ಟಿ.ದೇವೇಗೌಡರು, ಕಾಂಗ್ರೆಸ್ ಸರ್ಕಾರ ಬಿದ್ದು ಹೋಗುತ್ತದೆ, ಸಿದ್ದರಾಮಯ್ಯ ರಾಜೀನಾಮೆ ನೀಡುತ್ತಾರೆ ಎಂಬ ಭವಿಷ್ಯದ ಮಾತುಗಳನ್ನು ಕೇಳಿ ಕೇಳಿ ಜನರಿಗೂ ಬೇಜಾರಾಗಿದೆ ಎಂದರು.

ಕರ್ನಾಟಕದ ಆರ್ಥಿಕ ಪರಿಸ್ಥಿತಿ ದುಸ್ಥಿತಿ

ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ



ಬೆಂಗಳೂರು,ಫೆ.20(ಕೆಎಂಶಿ)– ಬೊಕ್ಕಸ ಬರಿದಾಗಿಲ್ಲ, ರಾಜ್ಯದ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ ಎಂಬುದಾಗಿ ಸುಳ್ಳು ಹೇಳುತ್ತಲೇ ಇರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ, ಗುತ್ತಿಗೆದಾರರ 64,000 ಕೋಟಿ ರೂ. ಬಿಲ್ ಬಾಕಿ ಉಳಿಸಿ ಕೊಂಡಿದೆ ಎಂದು ವಿಧಾನಸಭೆಯ ವಿರೋಧ' ಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ಟೀಕಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ಬಳಿ ರಸ್ತೆಗಳ ಗುಂಡಿಗೆ ಒಂದು ಬುಟ್ಟಿ ಮಣ್ಣು ಹಾಕಲೂ ದುಡ್ಡಿಲ್ಲ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತು ಅಕ್ಷರಶಃ ನಿಜ ಎಂದಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಅಭಿವೃದ್ಧಿ ಕಾರ್ಯಗಳೇ ಆಗಿಲ್ಲ, ಕಳೆದ 20 ತಿಂಗಳಲ್ಲಿ ಒಂದೇ ಒಂದು ಹೊಸ ಕಾಮಗಾರಿಗೂ ಗುದ್ದಲಿ ಪೂಜೆ ನಡೆದಿಲ್ಲ. ಗುತ್ತಿಗೆದಾರರ ಬಿಲ್ ಬಾಕಿ ಪಾವತಿ ಮಾಡದಿದ್ದರೆ ಜಾರಿಯಲ್ಲಿರುವ ಕಾಮಗಾರಿಗಳೂ ನಿಲ್ಲುತ್ತವೆ. ಅಲ್ಲದೆ, ಸರ್ಕಾರದ ಮೇಲೆ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗುತ್ತವೆ. ಸಿದ್ದರಾಮಯ್ಯ ಅಧಿಕಾರದ ದುರಾಸೆಗೆ ಕರ್ನಾಟಕದ ಆರ್ಥಿಕ ಪರಿಸ್ಥಿತಿಯನ್ನು ದುಸ್ಥಿತಿಗೆ ತಂದಿಟ್ಟಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಳುಗೆಡವಿ 16 ಬಜೆಟ್ ಮಂಡಿಸುವ ದಾಖಲೆ ಬರೆದರೇನು, ಎರಡೆರಡು ಬಾರಿ ಮುಖ್ಯಮಂತ್ರಿ ಆದರೇನು, ಕರ್ನಾಟಕ ಕಂಡ ಅತ್ಯಂತ ಅಸಮರ್ಥ ಮುಖ್ಯಮಂತ್ರಿ ಎಂದೇ ನಿಮ್ಮನ್ನು ಇತಿಹಾಸ ನೆನಪಿಡಲಿದೆ ಎಂದು ವ್ಯಂಗ್ಯವಾಡಿದ್ದಾರೆ.

ಕೆಎಎಸ್ ಗೆಜೆಟೆಡ್ ಪ್ರೊಬೇಷನರ್ ನೇಮಕಾತಿ ಪ್ರಕ್ರಿಯೆಗೆ ಕೆಎಸ್‌ಎಟಿ ತಡೆ



ಬೆಂಗಳೂರು, ಫೆ.20– 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ 384 ಗ್ರೂಪ್–ಎ ಮತ್ತು ಗ್ರೂಪ್–ಬಿ ವೃಂದದ ಹುದ್ದೆಗಳಿಗಾಗಿ ಕೆಪಿಎಸ್‌ಸಿ ಎರಡು ಬಾರಿ ನಡೆಸಿದ ಪೂರ್ವ ಭಾವಿ ಪರೀಕ್ಷೆಯಲ್ಲಿ ಭಾರೀ ಎಡವಟ್ಟು, ಲೋಪ ದೋಷಗಳಿದ್ದರೂ ಅದನ್ನು ಸರಿಪಡಿಸದೆ ನೇಮಕಾತಿ ಪ್ರಕ್ರಿಯೆ ಮುಂದುವರೆಸದಂತೆ ಕರ್ನಾಟಕ ರಾಜ್ಯ ಆಡಳಿತ ಮಂಡಳಿ ಮಧ್ಯಂತರ ತಡೆ ನೀಡಿದೆ.

ಆಗಸ್ಟ್ 2024, ಡಿಸೆಂಬರ್ 29 ಎರಡು ಬಾರಿ ಪರೀಕ್ಷೆ ನಡೆಸಿದರೂ ಸಹ ಪ್ರಶ್ನೆಪತ್ರಿಕೆ ಭಾಷಾಂತರದಲ್ಲಿ ಎಡವಟ್ಟು ಕಾರಣ ಗ್ರಾಮೀಣ ಮತ್ತು ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ ಎಂದು ಆರೋಪಿಸಲಾಗಿದೆ. ಈ ಕುರಿತು ಹಲವು ಕನ್ನಡ ಪರ ಸಂಘಟನೆಗಳು ಹಾಗೂ ಪ್ರತಿಪಕ್ಷ ಬಿಜೆಪಿ ಕೂಡಾ ಪ್ರತಿಭಟನೆ ವ್ಯಕ್ತಪಡಿಸುತ್ತಿವೆ.

ಆದರೆ, ಇದ್ಯಾವುದಕ್ಕೂ ಗಮನ ಕೊಡದ ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:15ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಪ್ರಕಟಿಸಿತ್ತು. ಅಲ್ಲದೇ, ಜನವರಿ 29 ರಂದು ಮುಖ್ಯ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿತ್ತು.

ಈ ಸಂಬಂಧ ಡಿ. ಪವಿತ್ರಾ ಮತ್ತಿತರ 51 ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ಕೆಎಸ್‌ಎಟಿ ನ್ಯಾಯಾಂಗ ಸದಸ್ಯ ಎಸ್. ವೈ. ವಟವಟಿ ಮತ್ತು ಆಡಳಿತ ಸದಸ್ಯೆ ಅಮಿತಾ ಪ್ರಸಾದ್ ಅವರಿದ್ದ ಪೀಠ, ಈ ಕುರಿತು ಆದೇಶಿಸಿದ್ದು, ಮುಂದಿನ ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿದೆ.

ಈ ಹಿಂದಿನ ದೋಷಗಳನ್ನು ಸರಿಪಡಿಸದೆ ಮುಖ್ಯ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ಹೇಗೆ ಅಧಿಸೂಚನೆ ಹೊರಡಿಸಿದೆ ಎಂದು ಪ್ರಶ್ನಿಸಿರುವ ಪೀಠ, ಆಯೋಗ ಜನವರಿ 29ರಂದು ಹೊರಡಿಸಿದ್ದ ಮುಖ್ಯ ಪರೀಕ್ಷೆ ಅಧಿಸೂಚನೆಯನ್ನು ಮುಂದಿನ ವಿಚಾರಣೆವರೆಗೆ ಅಮಾನತ್ತಿನಲ್ಲಿ ಇರಿಸುವಂತೆ ಆದೇಶಿಸಿದೆ. ಪ್ರಶ್ನೆಪತ್ರಿಕೆ ಭಾಷಾಂತರದಲ್ಲಿ ದೋಷಗಳಾಗಿದ್ದು, ಈ ವಿಚಾರವನ್ನು ಬಗೆಹರಿಸುವಂತೆ ತಜ್ಞರ ಸಮಿತಿ ನೀಡಿರುವ ವರದಿಯಲ್ಲಿ ಸಲಹೆ ನೀಡಲಾಗಿದೆ ಎಂಬ ಅಂಶವನ್ನು ಪೀಠ ಉಲ್ಲೇಖಿಸಿದೆ.

ಯುದ್ಧ ಸ್ಮಾರಕದ ಸ್ಲ್ಯಾಬ್‌ಗಳಿಗೆ ಪಾಲಿಶ್ ಕಾರ್ಯ ಆರಂಭ

●15 ದಿನದಲ್ಲೇ ಅಂತಿಮ ರೂಪ ●ಶೀಘ್ರದಲ್ಲೇ ಸ್ಮಾರಕ ಕಾಮಗಾರಿ ಪೂರ್ಣ

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಫೆ.20–ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪದ ಎನ್‌ಸಿಸಿ ಕವಾಯತು ಮೈದಾನದಲ್ಲಿ ಆಮೆಗತಿಯಲ್ಲಿ ಸಾಗುತ್ತಿದ್ದ 'ಯುದ್ಧ ಸ್ಮಾರಕ' ಕಾಮಗಾರಿ ಈಗ ಚುರುಕಾಗಿದ್ದು, ಸ್ಮಾರಕಕ್ಕೆ ಬಳಸುವ ಬೃಹತ್ ಗಾತ್ರದ ಕಪ್ಪುಶಿಲೆಯ ಸ್ಲ್ಯಾಬ್‌ಗಳಿಗೆ ಪಾಲಿಶ್ ಕಾರ್ಯ ಬಿರುಸುಗೊಂಡಿದೆ.

ಹುಣಸೂರು(ವಿನೋಬಾ) ರಸ್ತೆಗೆ ಹೊಂದಿಕೊಂಡಂತೆ ಹಳೆ ಜಿಲ್ಲಾಧಿಕಾರಿ ಕಚೇರಿ ಪಕ್ಕದ ಮೈದಾನದಲ್ಲಿ ಈ ಯುದ್ಧ ಸ್ಮಾರಕ ನಿರ್ಮಾಣ ಕಾರ್ಯ ನಡೆಯುತ್ತಿದ್ದ ಕಾಮಗಾರಿ, ಕೆಲ ಸಮಯ ನನೆಗುದಿಗೆ ಬಿದ್ದಿತ್ತು. ಈಗಾಗಲೇ ಸ್ಮಾರಕದ ಸ್ಲ್ಯಾಬ್‌ಗಳ ಜೋಡಣೆಗೆ ಅಗತ್ಯವಾದ ಆಕಾರದಲ್ಲಿ ಕೆತ್ತಲಾಗಿದ್ದು, ಅವುಗಳನ್ನು ಒಂದರ ಮೇಲೊಂದು ಜೋಡಣೆ ಮಾಡಲಾಗಿದೆ.

ಸ್ಮಾರಕ ಬೇಸ್ಮೆಂಟ್ ಪಕ್ಕದ ಮೈದಾನದಲ್ಲಿ ಸ್ಮಾರಕದ ಸ್ಲ್ಯಾಬ್‌ಗಳನ್ನು ಜೋಡಣೆ ಮಾಡಲಾಗಿದೆ. ಇದೀಗ ಆ ಸ್ಲ್ಯಾಬ್‌ಗಳಿಗೆ ಪಾಲಿಶ್ ಮಾಡುವ ಕಾರ್ಯ ಆರಂಭಿಸಲಾಗಿದೆ. ಇದರಿಂದ ಸ್ಮಾರಕದ ಸ್ಲ್ಯಾಬ್‌ಗಳು ಸ್ಮಾರಕಕ್ಕೆ ಬೇಕಾದ ಹೊಳಪಿನಿಂದ ಕಂಗೊಳಿಸಲಾರಂಭಿಸಿದೆ. ಕಳೆದ 3–4 ದಿನಗಳಿಂದ ಪಾಲಿಶ್ ಮಾಡುವ ಕಾರ್ಯ ಆರಂಭವಾಗಿದ್ದು, ಹಂತ ಹಂತವಾಗಿ ಸ್ಲ್ಯಾಬ್‌ಗೆ ಪಾಲಿಶ್ ಮಾಡಲಾಗುತ್ತಿದೆ. ಎರಡು ಬಾರಿ ಪಾಲಿಶ್ ಮಾಡಿದ ನಂತರ ಆ ಸ್ಲ್ಯಾಬ್‌ಗಳನ್ನು ಕ್ರೇನ್ ಸಹಾಯದಿಂದ ಕೆಳಗಿಳಿಸಿ, ಮತ್ತೆ ಬೇಸ್ಮೆಂಟ್ ಮೇಲೆ ಮತ್ತೆ ಜೋಡಣೆ ಮಾಡಲಾಗುತ್ತದೆ. ಆ ನಂತರ ಮತ್ತೆ ಪಾಲಿಶ್ ಮಾಡಲಾಗುತ್ತದೆ. ಕಲ್ಲು ಕೆತ್ತನೆಯಲ್ಲಿ ನೈಪುಣ್ಯತೆ ಹೊಂದಿರುವ ತಮಿಳುನಾಡು ಮೂಲದ ಆರು ಮಂದಿ ಪಾಲಿಶ್ ಕಾರ್ಯದಲ್ಲಿ ತೊಡಗಿದ್ದು, ಇನ್ನು 15 ದಿನದಲ್ಲಿ ಯುದ್ಧ ಸ್ಮಾರಕ ಅಂತಿಮ ಹಂತಕ್ಕೆ ತಲುಪಲಿದೆ.

ಸ್ಮಾರಕದಲ್ಲಿ ಭಾರತೀಯ ಸೇನೆಯ ಲೋಗೋ: ಯುದ್ಧ ಸ್ಮಾರಕದ ಮೇಲಿನ ಕೊನೆಯ ಸ್ಲ್ಯಾಬ್‌ನಲ್ಲಿ ಭಾರತೀಯ ಸೇನೆಯ ಚಿಹ್ನೆ(ಲೋಗೋ)ಯನ್ನು ಕೆತ್ತನೆ ಮಾಡಲಾಗುತ್ತದೆ. ನಾಲ್ಕು ದಿಕ್ಕಿನಲ್ಲೂ ಸೇನೆ ಪ್ರತಿನಿಧಿಸುವ ಚಿಹ್ನೆ ಕೆತ್ತನೆ ಮಾಡಲಾಗುತ್ತದೆ. ಭೂಸೇನೆ, ವಾಯುಸೇನೆ, ನೌಕಾದಳ ಹಾಗೂ ಅರೆಸೇನೆಯ ಚಿಹ್ನೆಗಳು ಸ್ಮಾರಕದ ಮೇಲಿನ ಸ್ಲ್ಯಾಬ್‌ನಲ್ಲಿ ಕೆತ್ತನೆ ಮಾಡಲಾಗುತ್ತದೆ. ಚಿನ್ನದ ಬಣ್ಣದಲ್ಲಿ ಅಕ್ಷರ ಹಾಗೂ ಲೋಗೋ ಕೆತ್ತನೆ ಮಾಡಲಾಗುತ್ತದೆ.

ಪಾರಂಪರಿಕ ಶೈಲಿಯ ಬೇಸ್ಮೆಂಟ್: ಯುದ್ಧ ಸ್ಮಾರಕ ನಿರ್ಮಾಣದ ಬೇಸ್ಮೆಂಟ್ ಅನ್ನು ಪಾರಂಪರಿಕ ವೃತ್ತದ ಶೈಲಿಯಲ್ಲಿ ನಿರ್ಮಿಸಲಾಗಿದೆ. ವೃತ್ತಾಕಾರದಲ್ಲಿದ್ದರೂ ನಾಲ್ಕು ದಿಕ್ಕಲ್ಲೂ ಮೆಟ್ಟಿಲು ನಿರ್ಮಿಸಲಾಗಿದೆ. ಅಲ್ಲದೆ ಅದರ ಪಕ್ಕದಲ್ಲಿ ಯುದ್ಧ ಟ್ಯಾಂಕರ್, ಯುದ್ಧ ವಿಮಾನ, ನೌಕೆ, ಗನ್ ಸೇರಿದಂತೆ ಯುದ್ಧದಲ್ಲಿ ಬಳಸುವ ಪರಿಕರಗಳನ್ನು ಪ್ರದರ್ಶನಕ್ಕಿಡಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಬಳಸಲ್ಪಟ್ಟ ಯುದ್ಧ ಪರಿಕರ ನೀಡಲು ಸೇನೆ ಸಮ್ಮತಿ ಸೂಚಿಸಿದೆ. ಈ ಸಂಬಂಧ ನಿವೃತ್ತ ಸೇನಾಧಿಕಾರಿ, ಸ್ಥಳ ನಿರೀಕ್ಷೆಯಲ್ಲಿರುವ ಹಿರಿಯ ಕೆಎಎಸ್ ಅಧಿಕಾರಿ ಸಿ.ಎಲ್.ಆನಂದ್ ಅವರು ಈಗಾಗಲೇ ಪತ್ರ ವ್ಯವಹಾರ ನಡೆಸಿದ್ದು, ಸ್ಮಾರಕ ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ಬಳಸಲ್ಪಟ್ಟ ಯುದ್ಧ ಟ್ಯಾಂಕರ್, ಗನ್ ಹಾಗೂ ಇನ್ನಿತರ ಯುದ್ಧ ಪರಿಕರಗಳು ಮೈಸೂರು ತಲುಪಲಿವೆ.

ಮೇಲುಸ್ತುವಾರಿಯಲ್ಲಿ ಪಾಲಿಶ್: ಮಂಗಳೂರು ಪಾಲಿಕೆ ಆಯುಕ್ತರಾಗಿದ್ದ ಸಿ.ಎಲ್.ಆನಂದ್ ಅವರನ್ನು ಸರ್ಕಾರ ವರ್ಗಾವಣೆ ಮಾಡಿದ್ದು, ಇದುವರೆಗೆ ಯಾವುದೇ ಹುದ್ದೆ ನೀಡಿಲ್ಲ. ಈ ಹಿನ್ನೆಲೆಯಲ್ಲಿ ಕಳೆದ 15 ದಿನದಿಂದ ಮೈಸೂರಲ್ಲಿಯೇ ಇರುವ ಸಿ.ಎಲ್.ಆನಂದ್ ಅವರು ಯುದ್ಧ ಸ್ಮಾರಕ ನಿರ್ಮಾಣದ ಕಾರ್ಯದ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಪ್ರತಿದಿನ ಸ್ಮಾರಕದ ಸ್ಥಳಕ್ಕೆ ಬಂದು ಪಾಲಿಶ್ ಮಾಡುವ ಕಾರ್ಯ ವೀಕ್ಷಿಸಿ, ಸಲಹೆ–ಸೂಚನೆ ನೀಡುತ್ತಿದ್ದಾರೆ.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪದ ಕವಾಯತು ಮೈದಾನದಲ್ಲಿ ಯುದ್ಧ ಸ್ಮಾರಕಕ್ಕೆ ಜೋಡಣೆ ಮಾಡಿರುವ ಬೃಹತ್ ಗಾತ್ರದ ಸ್ಲ್ಯಾಬ್‌ಗಳಿಗೆ ಪಾಲಿಶ್ ಮಾಡುತ್ತಿರುವುದನ್ನು ಹಿರಿಯ ಅಧಿಕಾರಿ ಸಿ.ಎಲ್.ಆನಂದ್ ಪರಿಶೀಲಿಸುತ್ತಿರುವುದು.

> "ಮೈಸೂರಲ್ಲಿ ಆದಷ್ಟು ಬೇಗ ಯುದ್ಧ ಸ್ಮಾರಕದ ಕಾಮಗಾರಿ ಪೂರ್ಣಗೊಳಿಸಬೇಕು ಎಂಬುದು ನಮ್ಮ ಆಸೆ. ಸ್ಮಾರಕದ ಮೇಲೆ ಪಂಚಲೋಹದ ಎಂಬ್ಲಮ್ ಜೋಡಣೆ ಮಾಡಲಾಗುತ್ತದೆ. ಅದರ ನಿರ್ಮಾಣ ಕಾರ್ಯವೂ ನಡೆಯುತ್ತಿದೆ. ಈಗಾಗಲೇ ಚಾಮರಾಜನಗರದ ಕ್ವಾರೆಯಿಂದ ಕೊಡುಗೆಯಾಗಿ ಪಡೆದ ಕೋಟ್ಯಾಂತರ ರೂ. ಬೆಲೆಬಾಳುವ ಉತ್ಕೃಷ್ಟ ಶಿಲೆಯನ್ನು ಸ್ಮಾರಕಕ್ಕೆ ಬೇಕಾದ ಆಕಾರದಲ್ಲಿ ಕತ್ತರಿಸಲಾಗಿದ್ದು, ಇದೀಗ ಜೋಡಣೆ ಮಾಡಿ ಪಾಲಿಶ್ ಮಾಡಲಾಗುತ್ತಿದೆ. ಬೇಸ್ಮೆಂಟ್ ಸುತ್ತಲೂ ಜೋಡಣೆ ಮಾಡಲು ಹಾಸನದಿಂದ ಹಸಿರು ಶಿಲೆ ಸ್ಲ್ಯಾಬ್‌ಗಳನ್ನು ತಂದಿಡಲಾಗಿದೆ. ಸ್ಮಾರಕ ನಿರ್ಮಾಣದ ಬಳಿಕ ಸುತ್ತಲೂ ಗಿಡ–ಮರ ನೆಟ್ಟು ರೂಪು ನೀಡುವುದಕ್ಕೂ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. –ಸಿ.ಎಲ್.ಆನಂದ್, ಹಿರಿಯ ಕೆಎಎಸ್ ಅಧಿಕಾರಿ

ದತ್ತಿಗಳು ಜ್ಞಾನ ಹಂಚುವ ಬುತ್ತಿಗಳು

ಮೈಸೂರು ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಭಿಮತ



ಸಾಹಿತಿ ಎನ್.ವಿ.ರಮೇಶ್ ಅವರನ್ನು ಗೌರವಿಸಲಾಯಿತು.

ಮೈಸೂರು, ಫೆ.20– ಸಾಹಿತ್ಯ ಪರಿಷತ್ತಿನ ವತಿಯಿಂದ ಇಡೀ ನಾಡಿನಾದ್ಯಂತ ದತ್ತಿ ಕಾರ್ಯಕ್ರಮಗಳು ಜರುಗುತ್ತಿದ್ದು, ಹಲವಾರು ವಿಷಯಗಳ ವಿನಿಮಯವಾಗುತ್ತಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಭಿಪ್ರಾಯಪಟ್ಟರು.

ವಾಗ್ದೇವಿನಗರದಲ್ಲಿ ಪ್ರೊ.ಚಂದ್ರಶೇಖರ ಪಾಟೀಲ್‌ರ ಪ್ರವಾಸಕ್ಕೆ ಸಂಬಂಧಿಸಿದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದತ್ತಿಗಳು ಜ್ಞಾನವನ್ನು ಎಲ್ಲೆಡೆ ಹಂಚುವ ಬುತ್ತಿಯಂತೆ ಕಾರ್ಯನಿರ್ವಹಿಸುತ್ತದೆ ಎಂದರಲ್ಲದೆ, ಪ್ರವಾಸವು ನಮ್ಮ ಉತ್ಸಾಹವನ್ನು ಇಮ್ಮಡಿಗೊಳಿಸಿದೆ. ಪ್ರತಿಯೊಬ್ಬರೂ ಪ್ರವಾಸವನ್ನು ಮಾಡಿ ಅನುಭವವನ್ನು ವೃದ್ಧಿಸಿಕೊಳ್ಳಲು ಮುಂದಾಗಬೇಕೆಂದರು.

ಸಾಹಿತಿ ಸುಮತಿ ಸುಬ್ರಹ್ಮಣ್ಯ ಮಾತನಾಡಿ, ಅಂದಿನ ಪೌರಾಣಿಕ ಕಾಲದಿಂದ ಇಂದಿನ ದಿನಮಾನದವರೆಗೂ ಪ್ರತಿಯೊಬ್ಬರ ಜೀವನದಲ್ಲೂ ಪ್ರವಾಸದಿಂದ ಮನಸ್ಸು ಉಲ್ಲಾಸಗೊಳ್ಳುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸದ್ವಿದ್ಯಾ ಆಂಗ್ಲೋ ಸಂಸ್ಕೃತ ಶಾಲೆಯ ಮುಖ್ಯೋಪಾಧ್ಯಾಯಿನಿ ಸುಮಾ ಪಂಚವಳ್ಳಿ, ಪ್ರಯಾಸದಿಂದ ಪ್ರವಾಸವನ್ನು ಮಾಡದೆ ಎಲ್ಲವನ್ನೂ ಪೂರ್ವ ನಿಯೋಜಿತವಾಗಿ ರೂಪಿಸಿಕೊಳ್ಳುವಂತೆ ತಿಳಿಸಿದರು.

ಇದೇ ಸಂದರ್ಭದಲ್ಲಿ 20ಕ್ಕೂ ಹೆಚ್ಚು ಪ್ರವಾಸ ಸಾಹಿತ್ಯವನ್ನು ರಚಿಸಿರುವ ಸಾಹಿತಿ ಎನ್.ವಿ.ರಮೇಶ್ ಅವರನ್ನು ಗೌರವಿಸಲಾಯಿತು. ಮುಖ್ಯ ಅತಿಥಿಗಳಾಗಿ ಗಡಿನಾಡು ಕನ್ನಡ ಭವನದ ಮೈಸೂರು ಜಿಲ್ಲಾಧ್ಯಕ್ಷೆ ಅಮೀನಾ ಬೇಗಂ ಕಾಲೇಖಾನ್ ಭಾಗವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಮನಲತಾ ಮೋಹನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಬಸವಲಿಂಗಸ್ವಾಮಿ ಪ್ರಾರ್ಥಿಸಿದರು.

ಮಹಿಳೆ ನಾಪತ್ತೆ



ಮೈಸೂರು,ಫೆ.20–ಮಹಿಳೆಯೋರ್ವರು ಕಾಣೆಯಾಗಿರುವ ಬಗ್ಗೆ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಶ್ರೀಮತಿ ಸಿ.ಸವಿತಾ (47) ಕಾಣೆಯಾದವರು. ಇವರು ಫೆ.8ರಂದು ಬೆಳಗ್ಗೆ 10 ಗಂಟೆ ಸಮಯದಲ್ಲಿ ರಾಮಕೃಷ್ಣನಗರದ ಹೆಚ್ ಬ್ಲಾಕ್‌ನಲ್ಲಿರುವ ಮನೆಯಿಂದ ತನ್ನ ಮೊಬೈಲ್ ಫೋನ್ ಅನ್ನು ಮನೆಯಲ್ಲಿ ಬಿಟ್ಟು ಹೋರ ಹೋಗಿದ್ದು, ಇದುವರೆವಿಗೂ ವಾಪಸ್ ಮನೆಗೆ ಬಂದಿರುವುದಿಲ್ಲ. ಅವರು ಮಾನಸಿಕ ರೋಗಿಯಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರನ್ನು ಹುಡುಕಿಕೊಡುವಂತೆ ಪತಿ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821–2418324, ಮೊ.9480802247 ಸಂಪರ್ಕಿಸಲು ಕೋರಲಾಗಿದೆ.

ನಿಧನ



ಕೆ.ಎಸ್.ಶೇಷಾದ್ರಿ

ಮೈಸೂರು, ಫೆ.20– ಮೈಸೂರು ಜೆ.ಪಿ.ನಗರದ 'ಸಿ' ಬ್ಲಾಕ್ (ನಂ.16) ನಿವಾಸಿ ಕೆ.ಎಸ್.ಶೇಷಾದ್ರಿ (77) ಅವರು ಹೃದಯಾಘಾತದಿಂದ ಇಂದು ಬೆಳಗ್ಗೆ ನಿಧನರಾದರು. ಇವರು ಪತ್ನಿ ಪದ್ಮಜಾ, ಪುತ್ರಿಯರಾದ ಚೈತನ್ಯ ಮತ್ತು ಸ್ಫೂರ್ತಿ, ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೇಮಂತ್



ಮೈಸೂರು ಆಲನಹಳ್ಳಿ ಗಿರಿನಗರ ನಿವಾಸಿ ಎಟಿ ಅಂಡ್ ಎಸ್ ಉದ್ಯೋಗಿ ಹೇಮಂತ್ (37) ಬುಧವಾರ ರಾತ್ರಿ 8 ಗಂಟೆಗೆ ಹೃದಯಾಘಾತದಿಂದ ನಿಧನರಾದರು. ಇವರು ತಂದೆ ಕೆಎಸ್‌ಆರ್‌ಟಿಸಿ ಹೇಮಣ್ಣ, ತಾಯಿ, ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ವಿವಿಯ ವಿವಿಧ ಕ್ರೀಡಾ ಸ್ಪರ್ಧೆಗಳ ವಿಜೇತರಿಗೆ ಅಭಿನಂದನೆ...



ಅಖಿಲ ಭಾರತ ಅಂತರ ವಿವಿಯ 2023–24ನೇ ಸಾಲಿನ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ, ಪದಕ ಗಳಿಸಿದ ಮೈಸೂರು ವಿವಿಯ 75 ಕ್ರೀಡಾ ವಿದ್ಯಾರ್ಥಿಗಳನ್ನು ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್.ರೇಖಾ ಅಭಿನಂದಿಸಿ, ಬಹುಮಾನ ವಿತರಿಸಿದರು. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಕ್ರೀಡಾಪಟುಗಳು, ವಿವಿಧ ತಂಡಗಳ ತರಬೇತುದಾರರು, ತಂಡದ ವ್ಯವಸ್ಥಾಪಕರು ಇದ್ದರು.

ಶ್ರೀ ಚಾಮುಂಡೇಶ್ವರಿ ದೇವಸ್ಥಾನದ 34ನೇ ವರ್ಷದ ವಾರ್ಷಿಕೋತ್ಸವ



ಮೈಸೂರು, ಫೆ.20–ಮೈಸೂರಿನ ಹೆಬ್ಬಾಳಿನ ಎಸ್‌ಬಿಐ ರಸ್ತೆಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ 34ನೇ ವರ್ಷದ ವಾರ್ಷಿಕೋತ್ಸವ ಮತ್ತು ಪಲ್ಲಕ್ಕಿ ಉತ್ಸವ ಫೆ.22, 23ರಂದು ನಡೆಯಲಿದೆ. ಫೆ.22ರಂದು ಸಂಜೆ 6.30ಕ್ಕೆ ಕಳಸ ಸ್ಥಾಪನೆ, ಗಣಪತಿ ಪೂಜೆ, ದುರ್ಗಾಪೂಜೆ, ಗಣಪತಿ ನವಗ್ರಹ, ಮಹಾಮೃತ್ಯುಂಜಯ ಸಹಿತ ದುರ್ಗಾಹೋಮ ಸೇರಿದಂತೆ ರಾತ್ರಿ 10 ಗಂಟೆವರೆಗೆ ವಿವಿಧ ಧಾರ್ಮಿಕ ಕೈಂಕರ್ಯ ನೆರವೇರಲಿದೆ. ಫೆ.23ರಂದು ಬೆಳಗ್ಗೆ 6.30ಕ್ಕೆ ಅಮ್ಮನವರಿಗೆ ಕುಂಭಾಭಿಷೇಕ, ಅಲಂಕಾರ ಪೂಜೆ ರಾಶಿ ಪೂಜೆ ನಡೆಯಲಿದ್ದು, ನಂತರ 11.20ಕ್ಕೆ ಸಾಮೂಹಿಕ ವಿವಾಹ ನಡೆಯಲಿದೆ. ದೇವಸ್ಥಾನದ ವತಿಯಿಂದ ವಧುವಿಗೆ ಸೀರೆ, ಮಾಂಗಲ್ಯ, ಕಾಲುಂಗುರ, ವರನಿಗೆ ಪಂಚೆ, ಶಲ್ಯ ಮತ್ತು ಪೇಟ ನೀಡಲಾಗುತ್ತದೆ. ವಿವಾಹದ ನಂತರ 12.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ರೈತರ ಜೀವನಮಟ್ಟ ಸುಧಾರಣೆಗಾಗಿ ಸಾಲ ನೀತಿ ಜಾರಿಗೆ ಒತ್ತಾಯ

ಮೈಸೂರು,ಫೆ.20(ಜಿಎ)–ರೈತರ ಜೀವನ ಮಟ್ಟ ಸುಧಾರಣೆಗೆ ಸರ್ಕಾರವು ವೈಜ್ಞಾನಿಕ ಬೆಳೆ ವಿಮೆ, ಬೆಲೆ ನಿಗದಿ ಹಾಗೂ ಸಾಲ ನೀತಿಯನ್ನು ಶೀಘ್ರವೇ ಜಾರಿಗೆ ತರಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ರೈತ ಘಟಕದ ರಾಜ್ಯಾಧ್ಯಕ್ಷ ಜೋಗನಹಳ್ಳಿ ಗುರುಮೂರ್ತಿ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ಕುಟುಂಬಕ್ಕೆ ಯಾವುದೇ ಜಾಮೀನು ಅಥವಾ ಭದ್ರತೆ ಕೇಳದೆ ಒಂದು ಲಕ್ಷದವರೆಗೆ ಸಹಕಾರಿ ಅಥವಾ ಬ್ಯಾಂಕ್ ಮೂಲಕ ಸಾಲ ನೀಡಬೇಕು. ಸಾಲದ ಮೊತ್ತವನ್ನು ದ್ವಿಗುಣಗೊಳಿಸಬೇಕು. ಮೈಕ್ರೊ ಫೈನಾನ್ಸ್ ಅವರು ವಸೂಲಿ ಪ್ರಕ್ರಿಯೆಗೂ ಮುಂದಿನ ಸುಗ್ಗಿವರೆಗೂ ತಡೆ ನೀಡಬೇಕು. ಈ ಎಲ್ಲ ವಿಷಯಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಯುಕ್ತವಾಗಿ ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ಈ ದೇಶದಲ್ಲಿ ಆರ್ಥಿಕ ಅಸಮಾನತೆ ವಿಪರೀತ ಹೆಚ್ಚುತ್ತಿದ್ದು, ಗ್ರಾಮೀಣ ಪ್ರದೇಶದ ಜನರ ಪ್ರತಿ ದಿನದ ಸರಾಸರಿ ವೆಚ್ಚ 37 ಮಾತ್ರ ಎಂದು ಸರ್ಕಾರದ ಸಮೀಕ್ಷೆಯೇ ಹೇಳುತ್ತಿರುವುದು ಆತಂಕಕಾರಿ. ಸಂಕಷ್ಟದಲ್ಲಿರುವ ರೈತರನ್ನು ವಿವಿಧ ಹಣಕಾಸು ಸಂಸ್ಥೆಗಳು ಶೋಷಿಸುತ್ತಿರುವುದು ಅಮಾನವೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗೋಷ್ಠಿಯಲ್ಲಿ ರೈತ ಘಟಕದ ಕಾರ್ಯದರ್ಶಿ ಪ್ರಭುಸ್ವಾಮಿ ಕಂದೇಗಾಲ, ಪ್ರಧಾನ ಕಾರ್ಯದರ್ಶಿ ಎಸ್.ನಾಗೇಂದ್ರ ಕೆಆರ್‌ಎಸ್ ಪಕ್ಷದ ಪ್ರವೀಣ್, ಆನಂದ್, ರವಿ ಇದ್ದರು.

ಇಂದು ಲೋಕಾಯುಕ್ತ ದೂರು ಸ್ವೀಕಾರ

ಮೈಸೂರು,ಫೆ.20–ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಅಧಿಕಾರಿಗಳಿಂದ ಫೆ.21ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1 ಗಂಟೆರವರೆಗೆ ಮೈಸೂರು ತಾಲೂಕು ಕಚೇರಿ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಸಾರ್ವಜನಿಕರು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ/ಸರ್ಕಾರಿ ಅಧಿಕಾರಿ/ ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ದೂರು ನೀಡಬಹುದು ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಉದೇಶ ಟಿ.ಜೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ರಾಜ್ಯಮಟ್ಟದ ಸಮೂಹ ಗೀತೆ, ಭಜನಾ ಸ್ಪರ್ಧೆ

ಮೈಸೂರು, ಫೆ.20(ಜಿಎ)–ಮೈಸೂರಿನ ಮಹಾರತ್ನ ಟ್ರಸ್ಟ್‌ನ ವಾರ್ಷಿಕೋತ್ಸವದ ಅಂಗವಾಗಿ ನಗರದ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಫೆ.21ರಂದು ರಾಜ್ಯಮಟ್ಟದ ಸಮೂಹ ಗೀತೆ ಮತ್ತು ಭಜನಾ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಮೈಸೂರು ಮಹಾಲಿಂಗ ಎಂ.ಲಕ್ಷ್ಮೀಪುರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 9.30ಕ್ಕೆ ಗಾಯನ ಸ್ಪರ್ಧೆಗಳು ಆರಂಭವಾಗಲಿದ್ದು, 11 ಗಂಟೆಗೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಕಾರ್ಯಕ್ರಮ ಉದ್ಘಾಟಿಸುವರು. ಸಂಜೆ 6ಕ್ಕೆ ಜಾನಪದ ವಿದ್ವಾಂಸ ಮೈಸೂರು ಕೃಷ್ಣಮೂರ್ತಿ ಅಧ್ಯಕ್ಷತೆಯಲ್ಲಿ ಸಮಾರೋಪ ಹಾಗೂ ಬಹುಮಾನ ವಿತರಣೆ ನಡೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ಜಾನಪದ ಕ್ಷೇತ್ರದ ಸಾಧಕರಾದ ಮೈಸೂರು ಉಮೇಶ್, ಕೆ.ಕೆ.ದೇವಾನಂದ ವರಪ್ರಸಾದ್, ಎಚ್. ಕ್ಯಾತನಹಳ್ಳಿ ಪ್ರಕಾಶ್, ಜಿ.ಆರ್.ಶ್ರೀವತ್ಸ ಅವರಿಗೆ ಜಾನಪದ ರತ್ನ ಪ್ರಶಸ್ತಿ ನೀಡಲಾಗುತ್ತದೆ. ಕ್ರೀಡಾಸಾಧಕರಾದ ಭಾರತಿ ವಿ.ಶಿರೂರ್, ವೆಂಕಟರಮಣ ಶಿರೂರ್, ಅಂಗನವಾಡಿ ಶಿಕ್ಷಕಿ ವಿಜಯಕುಮಾರಿ ಅವರನ್ನು ಸನ್ಮಾನಿಸಲಾಗುವುದು. ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ನೋಂದಣಿಗೆ ಮೊ.ಸಂ.91415 37956 ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಗೌರವಾಧ್ಯಕ್ಷ ಸಿ.ವಿ.ಪಾರ್ಥಸಾರಥಿ, ಕಾರ್ಯದರ್ಶಿ ರೂಪಾ, ಸಹ ಕಾರ್ಯದರ್ಶಿ ನಾಗಶ್ರೀ, ಸದಸ್ಯ ಎನ್.ಸಂದೇಶ್‌ಕುಮಾರ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.02.2025 ಶುಕ್ರವಾರ, ಮಳೆ ನಕ್ಷತ್ರ: ಶತಭಿಷ, 19.02.2025 ರಿಂದ 03.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಅನುರಾಧ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಹಸಿರಂಬುವಿನ ಗಾಯಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಮೈಸೂರು ವಿವಿ ಯುವರಾಜ ಕಾಲೇಜು :** ನಿರ್ವಹಣಾ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಂದ ಸ್ವಚ್ಛತಾ ಅಭಿಯಾನ–2024–25, ಸ್ಥಳ: ಕಾಲೇಜಿನ ಆವರಣ, ಬೆಳಗ್ಗೆ 7 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ದತ್ತಿ ಕಾರ್ಯಕ್ರಮ, ಬಿ.ವೀರಭದ್ರಯ್ಯ ಮತ್ತು ಅಕ್ಕನಾಗರತ್ನಮ್ಮ ದತ್ತಿ ಪ್ರಬಂಧ ಸ್ಪರ್ಧೆ ಹಾಗೂ ದತ್ತಿ ಉಪನ್ಯಾಸ, ಸ್ಥಳ: ಸುವರ್ಣ ಮಹೋತ್ಸವ ಸಭಾಂಗಣ, ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ, ಮಧ್ಯಾಹ್ನ 2.30ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್:** ಕುವೆಂಪು ವಿರಚಿತ 'ಜಲಗಾರ' ನಾಟಕ ಪ್ರದರ್ಶನ, ಸ್ಥಳ: ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರ, ಸಂಜೆ 5.30ಕ್ಕೆ.

■ **ಮಹಾರತ್ನ ಟ್ರಸ್ಟ್ :** ಮೂರನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ರಾಜ್ಯಮಟ್ಟದ ಸಮೂಹ ಜನಪದ ಗೀತೆ ಮತ್ತು ಭಜನಾ ಸ್ಪರ್ಧೆ ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಸಮರೋಪ ಸಮಾರಂಭ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ನಂಜುಮಳಿಗೆ ಹತ್ತಿರ, ಸಂಜೆ 6 ಗಂಟೆಗೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ (ಮೈಸೂರು):** ಗಾನ ಸಿರಿ–ವೇದಾಂತ ಲಹರಿ ಭಾಗ–12, ಶ್ರೀ ವಾದಿರಾಜ ಗುರುಸಾರ್ವಭೌಮ ವಿರಚಿತ ರುಗ್ಮಿಣೀಶ ವಿಜಯ ಸಪ್ತಾಹ, ಕಲಬುರ್ಗಿಯ ವಿದ್ವಾನ್ ಅನಂತರಾಜ್ ಮಿಸ್ತ್ರಿ ಅವರಿಂದ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಸಂಜೆ 5ರಿಂದ ರಾತ್ರಿ 8.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10–ಸಾಧನ–ಶೋಧ, ಗ್ರಾಮೀಣ ಪರಿಸರದ ಉಪಕರಣಗಳು, ಪ್ರಸ್ತುತಿ: ಡಾ.ಎಂ.ಎನ್.ಚಿಕ್ಕಮಾಧು, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎ.ಶೋಭಾ, ಪಿ.ಸುರಭಿ, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50–ರೈತರಿಗೆ ಸಲಹೆ, 7.15–KABHI ಕರ್ನಾಟಕ, ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.05–ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ: ಪ್ರಾಯೋಜಕರು–Indian Cancer Society, Karnataka Chapter, 9.10–ನಮ್ಮ ಆರೋಗ್ಯ, 9.40–ಗಾಂಧಿ ಸ್ಮೃತಿ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ರೂಪಾ ಮತ್ತು ದೀಪಾ ಯುಗಳ ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, **ಮಧ್ಯಾಹ್ನ:** 12.35–ದೇವರನಾಮ, 12.45–ಕಾದಂಬರಿ ವಿಹಾರ–ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು, ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್ ಎಸ್.ಎಸ್., 1.00–ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನ ಮಂತ್ರಿಗಳ ಅಟಲ್ ಭೂಜಲ್ ಯೋಜನೆ ಕುರಿತು ಮಾತನಾಡುತ್ತಾರೆ ಅವಿನಾಶ್. ಎಸ್, 1.20–ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ: ಪ್ರಾಯೋಜಕರು Indian Cancer Society, Karnataka Chapter, 1.25–ಭಾವಗೀತೆಗಳು, 1.30–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40–ದಾರಿದೀಪ, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55–ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ :ಚೆಂಬೈ ವೈದ್ಯನಾಥ ಭಾಗವತರ್ ಮತ್ತು ಡಾ.ಕೆ.ಯೇಸುದಾಸ್, ಹಾಡುಗಾರಿಕೆ, 4.00–ಮಹಿಳಾರಂಗ, 4.30–ವೃತ್ತಿ ಮಾರ್ಗದರ್ಶನ, ಸಂಶೋಧನಾ ಸಂಸ್ಕೃತಿ ಕುರಿತು ಪದ್ಮಶ್ರೀ ಪುರಸ್ಕೃತರು, ಮೈಸೂರಿನ ಸಿಎಫ್‌ಟಿಆರ್‌ಐನ ನಿವೃತ್ತ ನಿರ್ದೇಶಕರು ಹಾಗೂ ನವದೆಹಲಿಯ ಸಿಎಸ್‌ಐಆರ್ ಇಂಡಿಯಾದ ಪ್ರತಿಷ್ಠಿತ ವಿಜ್ಞಾನಿಗಳೂ ಆದ ಡಾ.ವಿಶ್ವೇಶ್ವರಯ್ಯ ಪ್ರಕಾಶ್ ಅವರೊಂದಿಗಿನ ಮಾತುಕತೆಯ ಎರಡನೇ ಭಾಗ. ಇವರೊಂದಿಗೆ ಭಾಗವಹಿಸುತ್ತಾರೆ –ಬೇದ್ರೆ ಮಂಜುನಾಥ್, 6.50 ಕೃಷಿರಂಗ: 7.45–ಕನ್ನಡದಲ್ಲಿ ಭಾಷಣ ಆಕಾಶವಾಣಿ ಮೈಸೂರು ಕೇಂದ್ರದ 90 ನೇ ವರ್ಷಾಚರಣೆ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ಆಯೋಜಿಸಲಾಗಿದ್ದ ಜಾನಪದ ಸಂಭ್ರಮದಲ್ಲಿ ಡಾ.ಸಿ. ಮಾದೇಗೌಡ ಅವರು ಮಾಡಿದ ಭಾಷಣದ ಆಯ್ದ ಭಾಗಗಳು, 8.00–ರಸಮಂಜರಿ, ಒಂದು ಶಬ್ದ ಕಳೆದು ಹೋದರೆ .....ವಿದ್ಯಾ ವಾಚಸ್ಪತಿ ಮೇಲುಕೋಟೆಯ ವಿ॥ ಉಮಾಕಾಂತ್ ಭಟ್ ಅವರೊಂದಿಗೆ ಸಂದರ್ಶನ, 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ : ಏಮಾನಿ ಶಂಕರ ಶಾಸ್ತ್ರಿ –ವೀಣಾವಾದನ, 10.00–ಜನಪದ ಸಂಗೀತ, 10.30–ಸವಿನೆನಪು.

ಹುಯಿಲಾಳು, ಮೈಸೂರು ತಾ

■ **ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2, ಮಹಾರಾಣಿ ಮಹಿಳಾ ವಾಣಿಜ್ಯ–ನಿರ್ವಹಣಾ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ–25, ಬೆಳಗ್ಗೆ 9ರಿಂದ. ಧ್ವಜಾರೋಹಣ, ಶಿಬಿರವಾಣಿ ಬಿಡುಗಡೆ, ಸಂಜೆ 7ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಯಿಲಾಳು, ಮೈಸೂರು ತಾ.

ಮೈಸೂರು ನಗರಪಾಲಿಕೆಗೆ ಸಂದಾಯವಾಗಬೇಕಿದೆ ಬರೋಬ್ಬರಿ 252 ಕೋಟಿ ಕುಡಿಯುವ ನೀರಿನ ಬಾಕಿ

ಮೈಸೂರು, ಫೆ.20(ಎಂಕೆ)– ಮೈಸೂರು ನಗರಪಾಲಿಕೆಗೆ ಕುಡಿಯುವ ನೀರಿನ ಶುಲ್ಕ ಬರೋಬ್ಬರಿ 252 ಕೋಟಿ ರೂ. ವಸೂಲಾಗಬೇಕಿದ್ದು, ಅದರ ಬಹುಪಾಲು ಸರ್ಕಾರಿ ಕಚೇರಿಗಳದ್ದೇ ಆಗಿದೆ.

ನೀರಿನ ಬಾಕಿ ಬಿಲ್ ಹನುಮಂತನ ಬಾಲದಂತೆ ಬೆಳೆಯುತ್ತಿದ್ದು, ಬರಬೇಕಿರುವ ಕೋಟಿ ಕೋಟಿ ರೂ.ಗಳ ನೀರಿನ ಬಿಲ್ ವಸೂಲಿಗೆ ಅಧಿಕಾರಿಗಳ ತಂಡ ರಚಿಸಿ, ಟಾರ್ಗೆಟ್ ನೀಡಲು ಪಾಲಿಕೆ ಮುಂದಾಗಿದೆ. ಅಲ್ಲದೆ ನೀರಿನ ಬಾಕಿ ಶುಲ್ಕ ವಸೂಲಾಗದಿರುವುದು ಹಾಗೂ ಇನ್ನಿತರೆ ವೆಚ್ಚಗಳನ್ನು ತಗ್ಗಿಸುವ ನಿಟ್ಟಿನಲ್ಲಿ ನಡೆಯುತ್ತಿದ್ದ ಕಾಮಗಾರಿಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ ಎನ್ನಲಾಗಿದೆ.

ಪಾಲಿಕೆಯಿಂದ ನೀರು ಪೂರೈಸಿಕೊಂಡಿರುವ ಗ್ರಾಹಕರಿಂದಲೇ ಬರೋಬ್ಬರಿ 23,63,76,066 ರೂ. ಶುಲ್ಕ ಬಾಕಿ ಇದ್ದು, ರೈಲ್ವೆ ಇಲಾಖೆಯೂ 19,92,35,832 ಕೋಟಿ ರೂ. ಬಾಕಿ ಉಳಿಸಿಕೊಂಡಿದೆ. ಹಾಗೆಯೇ ಶಿಕ್ಷಣ ಇಲಾಖೆ 1,42,71,139 ಕೋಟಿ ರೂ., ಆರೋಗ್ಯ ಇಲಾಖೆ 1,73,12,152 ಕೋಟಿ ರೂ., ನಗರ ಪೊಲೀಸ್‌ನಿಂದ 8,04,80,213 ಕೋಟಿ ರೂ., ಜಿಲ್ಲಾ ಪೊಲೀಸ್‌ನಿಂದ 1,31,80,902 ರೂ. ವಸೂಲಿಯಾಗಬೇಕಿದೆ.

ಅಲ್ಲದೆ ಪಿಡಬ್ಲ್ಯುಡಿ, ಕಾರಾಗೃಹ, ಸಮಾಜ ಕಲ್ಯಾಣ ಇಲಾಖೆ, ಸಣ್ಣ ಕೈಗಾರಿಕೆ ಇಲಾಖೆ, ಚೆಸ್ಕಾಂ, ಕೆಪಿಟಿಸಿಎಲ್ ಸೇರಿದಂತೆ ಬಹುತೇಕ ಸರ್ಕಾರಿ ಇಲಾಖೆಗಳು ಲಕ್ಷ ಲಕ್ಷ ರೂ. ನೀರಿನ ಶುಲ್ಕ ಕಟ್ಟದೆ ಬಾಕಿ ಉಳಿಸಿಕೊಂಡಿರುವುದು ನಗರಪಾಲಿಕೆಗೆ ತಲೆನೋವಾಗಿ ಪರಿಣಮಿಸಿದೆ.

ಇದರಲ್ಲಿ ಸರ್ಕಾರಿ ಕಚೇರಿಗಳದ್ದೇ ಸಿಂಹಪಾಲು



ವಸೂಲಿಗೆ ಟಾರ್ಗೆಟ್: ಬಾಕಿ ಉಳಿದಿರುವ ಕುಡಿಯುವ ನೀರಿನ ಶುಲ್ಕ ವಸೂಲಿಗೆ ಅಧಿಕಾರಿಗಳ ತಂಡ ರಚಿಸಿ, ಟಾರ್ಗೆಟ್ ನೀಡಲು ಮೈಸೂರು ನಗರ ಪಾಲಿಕೆ ನೂತನ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮುಂದಾಗಿದ್ದಾರೆ. ಕುಡಿಯುವ ನೀರಿನ ಬಾಕಿ ಶುಲ್ಕ ವಸೂಲಿ ಸಂಬಂಧ ಗುರುವಾರ ವಾಣಿವಿಲಾಸ ವಾಟರ್ ವರ್ಕ್ಸ್‌ನಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ತ್ವರಿತವಾಗಿ ಬಾಕಿ ಶುಲ್ಕ ವಸೂಲಿ ಮಾಡುವಂತೆ ತಾಕೀತು ಮಾಡಿದ್ದಾರೆ.

ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇಲ್ಲ...

ಈ ವರ್ಷದ ಬೇಸಿಗೆಗೆ ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗುವುದಿಲ್ಲ. ಈಗಾಗಲೇ ಹಳೇ ಉಂಡವಾಡಿ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು, ಅಗತ್ಯವಿರುವಷ್ಟು ನೀರು ಪ್ರತಿನಿತ್ಯ ಪೂರೈಕೆಯಾಗುತ್ತಿದೆ ಎಂದು ನಗರಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ತಂಡ ರಚನೆಗೆ ಒಲವು: ಶುಲ್ಕ ಬಾಕಿ ಉಳಿಸಿಕೊಂಡಿರುವ ಖಾಸಗಿ ಹಾಗೂ ಸರ್ಕಾರಿ ಕಚೇರಿಗಳಿಗೆ ಮೊದಲು ನೋಟಿಸ್ ನೀಡಿ, ನಂತರ ನೇರವಾಗಿ ಸಂಪರ್ಕಿಸಿ ವಸೂಲಿ ಮಾಡಲು ಅಧಿಕಾರಿಗಳ ತಂಡ ರಚನೆ ಮಾಡುವ ಸಂಬಂಧ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ.

ತಾತ್ಕಾಲಿಕ ಸ್ಥಗಿತ: ಕುಡಿಯುವ ನೀರಿನ ಬಾಕಿ ಶುಲ್ಕ ವಸೂಲಾಗದಿರುವುದು ಹಾಗೂ ಇನ್ನಿತರೆ ಖರ್ಚನ್ನು ತಗ್ಗಿಸುವ ನಿಟ್ಟಿನಲ್ಲಿ ನಡೆಯುತ್ತಿದ್ದ ಕಾಮಗಾರಿಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎನ್ನಲಾಗಿದೆ.

ಮೈಸೂರು ಜಿಲ್ಲಾ ಆಸ್ಪತ್ರೆ ಕಟ್ಟಡದ ಲಿಫ್ಟ್ ಸ್ಥಗಿತ: ರೋಗಿಗಳು ಸುಸ್ತೋ ಸುಸ್ತು!

ಮೈಸೂರು, ಫೆ20(ಎಂಕೆ)– ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆ ಕಟ್ಟಡದ ಲಿಫ್ಟ್ ಕೆಟ್ಟು ತಿಂಗಳಾಗಿದ್ದು, ರೋಗಿಗಳು, ವಯೋವೃದ್ಧರು ನಿತ್ಯ ತೊಂದರೆ ಅನುಭವಿಸುವಂತಾಗಿದೆ.

ಮೇಟಗಳ್ಳಿ ಬಳಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಆವರಣದಲ್ಲಿ ಸುಮಾರು 75.32 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಿರುವ 250 ಹಾಸಿಗೆಗಳ ಸಾಮರ್ಥ್ಯದ ನೂತನ ಜಿಲ್ಲಾ ಆಸ್ಪತ್ರೆ ಕಟ್ಟಡ ಉದ್ಘಾಟನೆಗೊಂಡ ನಾಲ್ಕು ವರ್ಷಗಳಲ್ಲಿಯೇ ಲಿಫ್ಟ್ ದುರಸ್ತಿಗೊಳಿಸಬೇಕಾದ ಪರಿಸ್ಥಿತಿ ಎದುರಾಗಿದೆ.

ಬೇಸ್‌ಮೆಂಟ್, ನೆಲಮಹಡಿ, ಮೊದಲನೆ ಮಹಡಿ, 2ನೇ ಮಹಡಿ, 3ನೇ ಮಹಡಿಯನ್ನು ಹೊಂದಿರುವ ಜಿಲ್ಲಾಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದ್ದು, ವಯೋವೃದ್ಧರು, ರೋಗಿಗಳ ಅನುಕೂಲಕ್ಕಾಗಿ ಇರುವ ಲಿಫ್ಟ್ ಕೆಟ್ಟಿರುವುದರಿಂದ ನಡೆಯಲಾಗದವರು ಮೆಟ್ಟಿಲು ಹತ್ತಬೇಕಾದ ಅನಿವಾರ್ಯತೆ ಎದುರಾಗಿದೆ.



ತಾಯಿ ಮತ್ತು ಮಕ್ಕಳ ಚಿಕಿತ್ಸಾ ವಿಭಾಗ, ಹೊರರೋಗಿಗಳ ಚಿಕಿತ್ಸಾ ವಿಭಾಗ, ಮೂತ್ರ ಶಾಸ್ತ್ರ, ನರ ವಿಜ್ಞಾನ, ಕಿವಿ, ಮೂಗು, ಗಂಟಲು ವಿಭಾಗ ಜಿಲ್ಲಾ ಶಸ್ತ್ರಚಿಕಿತ್ಸಕರ ಕೊಠಡಿ, ತೀವ್ರ ನಿಗಾ ಘಟಕ, ವಿಶೇಷ ವಾರ್ಡ್, ಸಾಮಾನ್ಯ ವಾರ್ಡ್, ಡಯಾಲಿಸಿಸ್ ಹಾಗೂ ದಂತ ವಿಭಾಗಗಳನ್ನು ಹೊಂದಿರುವ ಜಿಲ್ಲಾಸ್ಪತ್ರೆ ಕೆಟ್ಟಿರುವ ಲಿಫ್ಟ್ ದುರಸ್ತಿಗೊಳಿಸುವಂತೆ ರೋಗಿಗಳು ಸೇರಿದಂತೆ ಸಿಬ್ಬಂದಿಗಳು ಮನವಿ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ರೋಗಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಖ್ಯವಾಗಿ ಡಯಾಲಿಸಿಸ್ ಘಟಕಕ್ಕೆ ಬರುವ ರೋಗಿಗಳು ಮೆಟ್ಟಿಲುಗಳ ಮೂಲಕ ಮೇಲತ್ತಿ ಬರಲು ಬಹಳ ಕಷ್ಟವಾಗುತ್ತದೆ. ಡಯಾಲಿಸಿಸ್ ರೋಗಿಗಳು ಆಯಾಸ (ಸುಸ್ತು)ದಿಂದ ಬಳಲುತ್ತಿರುತ್ತಾರೆ. ಪ್ರತಿನಿತ್ಯ ಸುಮಾರು 70 ರೋಗಿಗಳು ಸೇರಿ ತಿಂಗಳಲ್ಲಿ ಸುಮಾರು 500 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದು, ಕೆಳಗಿನಿಂದ ಮಹಡಿ ಹತ್ತಿ ಬರಲು ಕಷ್ಟಪಡುತ್ತಿದ್ದಾರೆ ಎಂದು 'ಮೈಸೂರು ಮಿತ್ರ'ನಲ್ಲಿ ಅಳಲು ತೋಡಿಕೊಂಡರು.

ಅಲ್ಲದೆ ವಯೋವೃದ್ಧರು, ವಿಶೇಷ ಚೇತನರೂ ಮೆಟ್ಟಿಲು ಮೂಲಕ ಹರಸಾಹಸಪಟ್ಟು ಮಹಡಿ ಹತ್ತಬೇಕಾದ ಅನಿವಾರ್ಯತೆ ಇದ್ದು, ಕೂಡಲೇ ಲಿಫ್ಟ್ ಸರಿಪಡಿಸಿ ರೋಗಿಗಳಿಗೆ, ವಯೋವೃದ್ಧರು ಹಾಗೂ ವಿಶೇಷಚೇತನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದ್ದಾರೆ.

ರಾಜವಂಶಸ್ಥ ಯದುವೀರ್–ತ್ರಿಷಿಕಾ ದಂಪತಿಯ ದ್ವಿತೀಯ ಪುತ್ರ 'ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್'

ಅರಮನೆಯ ಕನ್ನಡಿತೊಟ್ಟಿಯಲ್ಲಿ ಶಾಸ್ತ್ರೋಕ್ತವಾಗಿ ನೆರವೇರಿದ ನಾಮಕರಣ

ಮೈಸೂರು, ಫೆ.20(ಎಂಟಿವೈ)– ರಾಜವಂಶಸ್ಥ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್ ದಂಪತಿ ದ್ವಿತೀಯ ಪುತ್ರನಿಗೆ ರಾಜಪುರೋಹಿತರ ಸಮ್ಮುಖದಲ್ಲಿ ಶಾಸ್ತ್ರೋಕ್ತವಾಗಿ 'ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್' ಎಂದು ನಾಮಕರಣ ಮಾಡಲಾಗಿದೆ

ಮೈಸೂರು ಅರಮನೆಯ ಕನ್ನಡಿ ತೊಟ್ಟಿಯಲ್ಲಿ ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಅವರ ಸಮ್ಮುಖದಲ್ಲಿ ನಡೆದ ನಾಮಕರಣ ಶಾಸ್ತ್ರ ಕಾರ್ಯಕ್ರಮದಲ್ಲಿ ಅರಮನೆಯ ಪುರೋಹಿತರು ವಿವಿಧ ಶಾಸ್ತ್ರ ಹಾಗೂ ಧಾರ್ಮಿಕ ಕಾರ್ಯಗಳ ಬಳಿಕ ಗುರು, ಹಿರಿಯರು ಸೂಚಿಸಿದ್ದಂತೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್ ಅವರ ಎರಡನೇ ಪುತ್ರನಿಗೆ 'ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್' ಎಂದು ಕಿವಿಯಲ್ಲಿ ಮೂರು ಬಾರಿ ಹೇಳುವ ಮೂಲಕ ವಿಧ್ಯುಕ್ತವಾಗಿ ನಾಮಕರಣ ಮಾಡಲಾಯಿತು.

ನಾಮಕರಣ ಶಾಸ್ತ್ರ ರಾಜವಂಶಸ್ಥರ ಖಾಸಗಿ ಕಾರ್ಯಕ್ರಮವಾಗಿದ್ದು, ಕೆಲವೇ ಕೆಲವು ಮಂದಿ ಸಂಬಂಧಿಕರಿಗೆ ಮಾತ್ರ ಆಹ್ವಾನವಿತ್ತು. ಬಿಗಿ ಭದ್ರತೆಯಲ್ಲಿ ನಡೆದ ನಾಮಕರಣ ಕಾರ್ಯಕ್ರಮಕ್ಕೆ ಸಾರ್ವಜನಿಕರು ಹಾಗೂ ಅರಮನೆ ಸಿಬ್ಬಂದಿಗಳಿಗೂ ಅವಕಾಶವಿರಲಿಲ್ಲ. ಕೇವಲ ಕುಟುಂಬಕ್ಕಷ್ಟೇ ಸೀಮಿತವಾಗಿದ್ದ ಕಾರ್ಯಕ್ರಮದಲ್ಲಿ ತ್ರಿಷಿಕಾ ಕುಮಾರಿ ಒಡೆಯರ್ ಪೋಷಕರು ಪಾಲ್ಗೊಂಡಿದ್ದರು.

2024ರ ಅ.11ರಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನವರಾತ್ರಿ ಮಹೋತ್ಸವದ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಆಯುಧ ಪೂಜೆ ನೆರವೇರಿಸಿ, ಕಂಕಣ ವಿಸರ್ಜನೆ ಬಳಿಕ ಖಾಸಗಿ ಆಸ್ಪತ್ರೆಯಲ್ಲಿ ತ್ರಿಷಿಕಾ ಕುಮಾರಿ ಒಡೆಯರ್ ಗಂಡು ಮಗುವಿಗೆ ಜನ್ಮ ನೀಡಿದ್ದರು. ಇದೀಗ ದ್ವಿತೀಯ ಪುತ್ರನಿಗೆ ನಾಮಕರಣ ಮಾಡಲಾಗಿದೆ. ಮೊದಲ ಪುತ್ರನಿಗೆ ಆದ್ಯವೀರ ಒಡೆಯರ್ ಎಂದು ನಾಮಕರಣ ಮಾಡಿದ್ದನ್ನು ಸ್ಮರಿಸಬಹುದು.

ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್ ಮಹತ್ವದ ಬಗ್ಗೆ ಪುರೋಹಿತರ ವಿಶ್ಲೇಷಣೆ ಹೀಗಿದೆ. ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಎರಡನೇ ಪುತ್ರನಿಗೆ ಮಾಡಿರುವ ನಾಮಕರಣದ ಹೆಸರನ್ನು ನಾಲ್ಕು ವಿಭಾಗವಾಗಿ ವಿಂಗಡಿಸಿ, ಅರ್ಥ ವಿವರಿಸಲಾಗಿದೆ.

ಯುಗಾ ಎಂದರೆ ಯುಗದ ಅಧಿಪತಿ: ಸನಾತನ ಧರ್ಮದಲ್ಲಿ ನಾಲ್ಕು ಯುಗಗಳ ಉಲ್ಲೇಖವಿದೆ. ಅವುಗಳಲ್ಲಿ ಸತ್ಯಯುಗ, ತ್ರೇತಾಯುಗ, ದ್ವಾಪರಯುಗ ಹಾಗೂ ಕಲಿಯುಗ.

ಧ್ಯಕ್ಷ ಎಂದರೆ: ಧ್ಯಕ್ಷ ಪದದ ಅರ್ಥ ಸಮರ್ಥ, ತಜ್ಞ ಕೌಶಲ್ಯ ಅಥವಾ ಪ್ರಾಮಾಣಿಕ ಎಂಬ ಅರ್ಥ ಬರುತ್ತದೆ. ಹಾಗಾಗಿ ಒಂದು ಗುಂಪಿನ ನಾಯಕ, ಅಧ್ಯಕ್ಷ ಎಂತಲೂ ವಿಶ್ಲೇಷಿಸಲಾಗಿದೆ.

ಕೃಷ್ಣ ಎಂದರೆ: ಕೃಷ್ಣ ಎಂದರೆ ಕಪ್ಪು ಅಥವಾ 'ಸರ್ವ ಆಕರ್ಷಕ' ಎಂದರ್ಥ. ಈ ಹೆಸರು ಸಂಸ್ಕೃತ ಪದ ಕೃಷ್ಣದಿಂದ ಬಂದಿದೆ ಎಂದು ಹೇಳಲಾಗುತ್ತದೆ. ಇದನ್ನು ಹೆಚ್ಚಾಗಿ ಕೃಷ್ಣ ದೇವರಿಗೆ ಭಕ್ತಿಯ ಇತಿಹಾಸ ಹೊಂದಿರುವ ಕುಟುಂಬದಲ್ಲಿ ಜನಿಸಿದ ಹುಡುಗರಿಗೆ ಹೆಸರಿಡಲಾಗುತ್ತದೆ. ಕೃಷ್ಣ ಹೆಸರಿನ ಮಗುವನ್ನು ದೇವರಂತೆ ದಯೆ ಮತ್ತು ಕರುಣಾಮಯಿ ವ್ಯಕ್ತಿಯಾಗಿ ಬೆಳೆಯುವ ಭರವಸೆಯನ್ನು ಪ್ರತಿಬಿಂಬಿಸುತ್ತದೆ.

ಒಡೆಯರ್: ಒಡೆಯರ್ ಎಂದರೆ ದೊರೆಗಳು. ಯದುವಂಶ ಅಥವಾ ಯಾದವ ವಂಶಕ್ಕೆ ಸೇರಿದವರು ಎಂದು ಪುರೋಹಿತರು ವಿಶ್ಲೇಷಿಸಿದ್ದಾರೆ.

ಸ್ವಚ್ಛ ಸರ್ವೇಕ್ಷಣೆ ನಡುವೆ ಮೈಸೂರಲ್ಲಿ ಅನೈರ್ಮಲ್ಯ

ಜಯನಗರದ ಅನಿಕೇತನ ರಸ್ತೆಯ ರಾಜಕಾಲುವೆಯಲ್ಲಿ ಅಶುಚಿತ್ವ ತಾಂಡವ

● ಮಳೆಯೇ ಇಲ್ಲದಿದ್ದರೂ ಹರಿಯುತ್ತಿದೆ ಮಲಿನ ನೀರು! ● ಈ ನಡುವೆ ಹಂದಿ ಹಿಂಡಿನಿಂದ ಆಹಾರಕ್ಕಾಗಿ ಶೋಧ ಕಾರ್ಯ!! ● ಕಣ್ಣಿಗೆ ರಾಚುವ ರಾಶಿ ರಾಶಿ ಪ್ಲಾಸ್ಟಿಕ್ ● ಇಂತಹ ತಾಣಗಳು ಸ್ವಚ್ಛ ನಗರದಲ್ಲಿ ಸಾಮಾನ್ಯ ದೃಶ್ಯ!

ಮೈಸೂರು,ಫೆ.20(ಪಿಎಂ)– ಮಳೆಯೇ ಇಲ್ಲವಾದರೂ ಆ ಮಳೆ ನೀರು ಚರಂಡಿಯಲ್ಲಿ (ರಾಜ ಕಾಲುವೆ) ಮಲಿನ ನೀರು ಹರಿಯುತ್ತಿದೆ! ಮತ್ತೊಂದೆಡೆ ಆಹಾರಕ್ಕಾಗಿ ಹಂದಿ ಹಿಂಡಿನಿಂದ ಶೋಧ ಕಾರ್ಯ!! ಅಷ್ಟೇ ಅಲ್ಲ, ಅಲ್ಲಿಯೇ ಪ್ಲಾಸ್ಟಿಕ್ ಕವರ್‌ಗಳ ತ್ಯಾಜ್ಯದೊಂದಿಗೆ ಬಗೆಬಗೆಯ ಕಸದ ರಾಶಿ ನೀರಿನೊಂದಿಗೆ ಸೇರಿ ಗಬ್ಬೆದ್ದು ನಾರುವಂತಹ ದುಸ್ಥಿತಿಯೂ ಇದೆ.

ಇದು ಮೈಸೂರು ನಗರದ ಹೊರವಲಯದ ದೃಶ್ಯವಲ್ಲ. ಬದಲಿಗೆ ನಗರ ಪ್ರಮುಖ ಹಾಗೂ ಜನನಿಬಿಡ ಸ್ಥಳದಲ್ಲೇ ಇಂತಹ ಅನೈರ್ಮಲ್ಯ ತಲೆ ಎತ್ತಿದೆ. ಜಯನಗರದ ಅನಿಕೇತನ ರಸ್ತೆಯ ಸಮೀಪ ಹಾದು ಹೋಗಿರುವ ರಾಜಕಾಲುವೆಯಲ್ಲಿ ಈ ರೀತಿಯ ಅಶುಚಿತ್ವ ನಿರ್ಮಾಣವಾಗಿದೆ. ಇಂತಹ ಅನೈರ್ಮಲ್ಯದ ತಾಣ ನಗರದಲ್ಲಿ ಅದೆಷ್ಟೊ ಇದೆಯೋ ಗೊತ್ತಿಲ್ಲ. ಮೈಸೂರು ಮಹಾನಗರ ಪಾಲಿಕೆ ಸ್ವಚ್ಛ ಸರ್ವೇಕ್ಷಣೆಗೆ ತಯಾರು ನಡೆಸುತ್ತಿರುವ ನಡುವೆಯೂ ನಗರದ ಪ್ರಮುಖ ಸ್ಥಳದಲ್ಲೇ ಇಂತಹ ಅಶುಚಿತ್ವ ತಾಂಡವಾಡುತ್ತಿರುವುದು ಮಾತ್ರ ದುರಂತ.

ಈಗಾಗಲೇ ಫೆ.15ರಿಂದ ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದಿಂದ ದೇಶದಾದ್ಯಂತ ಸ್ವಚ್ಛ ಸರ್ವೇಕ್ಷಣ ಸರ್ವೇ ಕಾರ್ಯಕ್ಕೆ ಚಾಲನೆ ಸಿಕ್ಕಿದ್ದು, ಸ್ವಚ್ಛ ಸರ್ವೇಕ್ಷಣ ತಂಡ ಮೈಸೂರಿಗೂ ಭೇಟಿ ನೀಡಲಿದೆ. ಇಂತಹ ಸಂದರ್ಭದಲ್ಲೇ ಪ್ರಮುಖ ಸ್ಥಳವೊಂದು ಈ ರೀತಿಯಲ್ಲಿ ಕೊಳಚೆ ತಾಣವಾಗಿರುವುದು ಎಷ್ಟು ಸರಿ ಎಂಬುದು ಪ್ರಜ್ಞಾವಂತ ನಾಗರಿಕರ ಪ್ರಶ್ನೆಯಾಗಿದೆ.



ಮೈಸೂರಿನ ಜಯನಗರದ ಅನಿಕೇತನ ರಸ್ತೆಯ ಸಮೀಪ ಹಾದು ಹೋಗಿರುವ ರಾಜಕಾಲುವೆಯಲ್ಲಿ ಅನೈರ್ಮಲ್ಯ ತಾಂಡವವಾಡುತ್ತಿರುವುದು.

ಯಾವುದೇ ಸಂದರ್ಭವಾದರೂ ಸ್ವಚ್ಛತೆ ಕಾಯ್ದುಕೊಳ್ಳುವುದು ಅತ್ಯಗತ್ಯ. ಆಗ ಮಾತ್ರ ರೋಗ–ರುಜಿನ ಮುಕ್ತ ಸಮಾಜ ನಿರ್ಮಾಣ ಸಾಧ್ಯ. ಅದೇನೇ ಇದ್ದರೂ ಸ್ವಚ್ಛ ಸರ್ವೇಕ್ಷಣೆ ಸಂದರ್ಭದಲ್ಲಿಯಾದರೂ ಪಾಲಿಕೆಯು ಸ್ವಚ್ಛತೆ ಕಾಯ್ದುಕೊಳ್ಳಲು ಕಾರ್ಯಪ್ರವೃತ್ತವಾಗುವ ಅಗತ್ಯವಿದೆ. ಅದೇ ಹಿನ್ನೆಲೆಯಲ್ಲಿ ಪಾಲಿಕೆ ಈಗಾಗಲೇ ಅನೇಕ ಚಟುವಟಿಕೆಗಳನ್ನು ಕೈಗೆತ್ತಿಕೊಂಡಿರುವುದು ಸುಳ್ಳಲ್ಲ. ಆದರೆ ಸೂಕ್ತ ಕಾರ್ಯಕ್ರಮ ರೂಪಿಸಿ ಮುಂದುವರೆಯುವುದು ಅವಶ್ಯವಾಗಿದೆ ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ.

ಇಂತಹ ಅನೈರ್ಮಲ್ಯ ತಾಣಗಳೂ ಇರುವಾಗ ನಗರದ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಪಾಲಿಕೆ ಸೂಕ್ತ ಹಾಗೂ ಗಂಭೀರ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂದೇ ಹೇಳಬೇಕಾಗುತ್ತದೆ ಎನ್ನುತ್ತಾರೆ ನಾಗರಿಕರೊಬ್ಬರು. ಸ್ವಚ್ಛ ಸರ್ವೇಕ್ಷಣಾ ಸರ್ವೇಯಲ್ಲಿ ನಗರ ಉತ್ತಮ ಸ್ಥಾನ ಗಳಿಸಬೇಕೆಂಬ ಗುರಿ ಹೊಂದಿರುವ ಬಗ್ಗೆ ಪಾಲಿಕೆ ಈಗಾಗಲೇ ಹೇಳಿಕೆ ನೀಡಿರುವುದನ್ನೂ ಗಮನಿಸಿದ್ದೇವೆ. ಕೇವಲ ಹೀಗೆ ಹೇಳಿಕೊಂಡರೆ ಸಾಲದು, ಸೂಕ್ತ ಕ್ರಮಗಳ ಅನುಷ್ಠಾನದಲ್ಲೂ ನಿಗಾ ವಹಿಸಬೇಕು. ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ವಲಯ ಕಚೇರಿಗಳು ಸೂಕ್ತ ರೀತಿಯಲ್ಲಿ ಮೇಲ್ವಿಚಾರಣೆ ನಡೆಸಬೇಕು. ಜೊತೆಗೆ ನಾಗರಿಕರ ಸಹಕಾರ ಅಷ್ಟೇ ಮುಖ್ಯ ಎನ್ನುತ್ತಾರೆ ಅವರು.

ಎಲ್ಲಾ 65 ವಾರ್ಡ್ ವ್ಯಾಪ್ತಿಯಲ್ಲಿಯೂ ಪಾಲಿಕೆ 300ಕ್ಕೂ ಹೆಚ್ಚು ಆಟೋರಿಕ್ಷಾಗಳಲ್ಲಿ ಮನೆ ಮನೆ ಕಸ ಸಂಗ್ರಹಕ್ಕೆ ಕ್ರಮ ವಹಿಸಿದೆ. ಇದು ಪಾಲಿಕೆಯ ನಿತ್ಯದ ಕಾರ್ಯವಾಗಿದೆ. ಆದಾಗ್ಯೂ ಇಂತಹ ಸ್ಥಳಗಳಲ್ಲಿ ತ್ಯಾಜ್ಯ ಗುಡ್ಡೆ ಹಿಡಿಯುವುದನ್ನು ಮಾತ್ರ ತಪ್ಪಿಸಲು ಪಾಲಿಕೆಯಿಂದ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗುತ್ತಿಲ್ಲ ಅಲ್ಲದೆ, ವಾಣಿಜ್ಯ ಪ್ರದೇಶದ ತ್ಯಾಜ್ಯ ಸಂಗ್ರಹಕ್ಕೂ ವಾಹನ ವ್ಯವಸ್ಥೆಯನ್ನು ಪಾಲಿಕೆ ಹೊಂದಿದೆ. ಆದರೂ ಇಂತಹ ತಾಣಗಳು ತಲೆ ಎತ್ತುತ್ತಿದ್ದು, ಇದಕ್ಕೆ ಕೇವಲ ಪಾಲಿಕೆಯನ್ನು ಮಾತ್ರ ಹೊಣೆ ಮಾಡಲಾಗದು, ಜೊತೆಗೆ ನಾಗರಿಕರೂ ಹೊಣೆಗಾರರಾಗುತ್ತಾರೆ ಎನ್ನುತ್ತಾರೆ ಪ್ರಜ್ಞಾವಂತ ನಾಗರಿಕರು.

ರಾತ್ರಿ ವೇಳೆ ರಸ್ತೆಬದಿ ಹಾಗೂ ಖಾಲಿ ನಿವೇಶನಗಳಲ್ಲಿ ಕಸ ಎಸೆದು ಹೋಗುವವರ ವಿರುದ್ಧ ಕ್ರಮಕ್ಕೆ ನೈಟ್ ರೇಡ್ ಕಾರ್ಯಾಚರಣೆ (ರಾತ್ರಿ ಗಸ್ತು) ಸಹ ಪಾಲಿಕೆ ನಡೆಸಿತ್ತು. ಆ ಮೂಲಕ ದಂಡಾಸ್ತ್ರ ಪ್ರಯೋಗ ಸಹ ಮಾಡಿದೆ. ಇನ್ನೂ ಹತ್ತು ಹಲವು ಕ್ರಮಗಳನ್ನು ಕೈಗೊಂಡಿದೆ. ಇಷ್ಟೆಲ್ಲದರ ನಡುವೆಯೂ ಕಸದ ತಾಣ ತಲೆ ಎತ್ತುತ್ತಿರುವುದು ದುರ್ದೈವ. ಆಯಾಯ ವಲಯ ಕಚೇರಿಗಳ ಮೂಲಕ ಇದಕ್ಕೆ ಕಡಿವಾಣ ಹಾಕಬಹುದು ಎನ್ನುವ ಅಭಿಪ್ರಾಯ ಪ್ರಜ್ಞಾವಂತರಿಂದ ವ್ಯಕ್ತವಾಗಿದೆ.

ನಗರದ ವಿವಿಧೆಡೆ ಕಸ ಹಾಕುತ್ತಿದ್ದ ಸ್ಥಳಗಳನ್ನು ಗುರುತಿಸಿ ಅವುಗಳನ್ನು ಸ್ವಚ್ಛಗೊಳಿಸಿರುವ ಪಾಲಿಕೆ, ಇಲ್ಲಿ ಕಸ ಹಾಕಿದರೆ ದಂಡ ವಿಧಿಸುವುದಾಗಿ ಫಲಕಗಳ ಮೂಲಕ ಎಚ್ಚರಿಕೆ ಸಂದೇಶ ನೀಡಿ ಯಶಸ್ವಿಯೂ ಆಗಿದೆ. ಅಂತಹ ಪಟ್ಟಿಗೆ ಜಯನಗರದ ಈ ರಾಜಕಾಲುವೆ ಸ್ಥಳವೂ ಸೇರಿದಂತೆ ಇಂತಹ ಇನ್ನಿತರ ಸ್ಥಳಗಳಲ್ಲೂ ಇದೇ ಕ್ರಮ ವಹಿಸುವುದು ಸೂಕ್ತವಾಗಿದೆ.

ಸೇತುವೆಗಿಲ್ಲ ತಡೆಗೋಡೆ: ಇದೇ ಅನಿಕೇತನ ರಸ್ತೆಯ ಮೇಲೆ ಈ ರಾಜಕಾಲುವೆಗೆ ನಿರ್ಮಿಸಿರುವ ಸೇತುವೆಯ ಒಂದು ಬದಿಯಲ್ಲಿನ ತಡೆಗೋಡೆ ನೆಲಕಚ್ಚಿ ಬಿದ್ದು ಎಷ್ಟೋ ದಿನಗಳೇ ಕಳೆದಿವೆ. ಆದಾಗ್ಯೂ ಕ್ರಮ ವಹಿಸಲು ಪಾಲಿಕೆ ಮುಂದಾಗಿಲ್ಲ. ಹೀಗಾಗಿ ಈ ಭಾಗದಲ್ಲಿ ಸಂಚರಿಸುವವರು ಜಾಗರೂಕತೆ ವಹಿಸದೇ ಹೋದಲ್ಲಿ ವಾಹನದೊಂದಿಗೆ ರಾಜಕಾಲುವೆಯ ಮಲಿನ ನೀರಿನಲ್ಲಿ ಬೀಳುವ ಜೊತೆಗೆ ಅನಾಹುತಕ್ಕೀಡಾಗುವ ಅಪಾಯವಿದೆ.

ರಂಜಿಸಿದ 'ವಸಂತ ಋತುಗಾನ'

ಮೈಸೂರು, ಫೆ.20(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ 'ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ ವತಿಯಿಂದ ಗುರುವಾರ 'ವಸಂತ ಋತುಗಾನ' ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.

ಟ್ರಸ್ಟ್‌ನ ಸಂಸ್ಥಾಪಕ ರೇವಣ್ಣ ನೇತೃತ್ವದಲ್ಲಿ 34 ಜನಪ್ರಿಯ ಕನ್ನಡ, ಹಿಂದಿ ಹಳೇ ಚಲನಚಿತ್ರಗೀತೆ ಪ್ರಸ್ತುತಪಡಿಸಿದ ಗಾಯಕರು ನೆರೆದಿದ್ದ ಸಂಗೀತ ಆಸಕ್ತರನ್ನು ರಂಜಿಸಿದರು. ಸಂಗೀತ ಕಾರ್ಯಕ್ರಮ ಉದ್ಘಾಟಿಸಿದ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ ಮಾತನಾಡಿ, ಸ್ವಾತಂತ್ರ್ಯ ನಂತರ ಕಲಾವಿದರು ಅತಂತ್ರರಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಾವಿದರನ್ನು ಒಂದುಗೂಡಿಸಿ ಹಾಗೂ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಸರ್ಕಾರ ಕಲೆ ಮತ್ತು ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದು ಒತ್ತಾಯಿಸಿದರು.



ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ ವತಿಯಿಂದ 'ವಸಂತ ಋತುಗಾನ' ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.


ಮೈಸೂರಿನಲ್ಲಿ ಸಂಗೀತ ಕ್ಷೇತ್ರಕ್ಕೆ ಮೈಸೂರು ಮಹಾರಾಜರು ಅಪಾರ ಪ್ರೋತ್ಸಾಹ ನೀಡಿದ್ದಾರೆ. ಶುದ್ಧ ಶಾಸ್ತ್ರೀಯ, ವಾದ್ಯ, ಕರ್ನಾಟಕ ಹಿಂದೂಸ್ಥಾನಿ ಸಂಗೀತ, ರಂಗಭೂಮಿ, ಯಕ್ಷಗಾನಕ್ಕೂ ಪ್ರೋತ್ಸಾಹ ನೀಡಿದ್ದಾರೆ. ಹಾಗೆಯೇ ಜನಪದ, ಸುಗಮ ಸಂಗೀತದ ಉಳಿವಿಗೂ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ನಂತರ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ ಹಾಗೂ ವಕೀಲ ಎಸ್.ಜೆ.ಮಧ್ವರಾಜ್ ಅವರನ್ನು ಸನ್ಮಾನಿಸಲಾಯಿತು. ಮುಡಾ ಮಾಜಿ ಅಧ್ಯಕ್ಷ ಕೆ.ಆರ್.ಮೋಹನ್‌ಕುಮಾರ್, ಗಾಯಕರಾದ ಬಿ.ಎಸ್.ಶ್ರೀಕಂಠರಾವ್, ಪ್ರಮತ ಮಂಜುನಾಥ್, ನಿತಿನ್ ಗಣೇಶ್, ತೇಜಾವತಿ, ತೇಜಸ್ವಿನಿ ಮತ್ತಿತರರಿದ್ದರು.

ತೊಳಸಿ ಜ್ಯುವೆಲ್ಸ್‌ನಿಂದ ಯಶಸ್ವಿ ಪ್ರಥಮ ಸ್ಪೈಸ್ ಗಾಲ್ಫ್ ಪಂದ್ಯಾವಳಿ

ಸ್ಪರ್ಧೆಯೊಂದಿಗೆ ಮನರಂಜನಾ ಚಟುವಟಿಕೆಗಳಲ್ಲಿ ಭಾಗಿಯಾದ ನೂರಾರು ಸ್ಪರ್ಧಿಗಳು





ಮೈಸೂರಿನ ತೊಳಸಿ ಜ್ಯುವೆಲ್ಸ್ ವತಿಯಿಂದ ಗಾಲ್ಫ್ ವುಮೆನ್ಸ್ ಅಸೋಸಿಯೇಷನ್ ಸಹಯೋಗದಲ್ಲಿ ಜಯಚಾಮರಾಜ ಒಡೆಯರ್ ಗಾಲ್ಫ್‌ಕ್ಲಬ್‌ನಲ್ಲಿ ಪ್ರಥಮ ಸ್ಪೈಸ್ ಗಾಲ್ಫ್ ಪಂದ್ಯಾವಳಿ ಆಯೋಜಿಸಲಾಗಿತ್ತು. ಮತ್ತೊಂದು ಚಿತ್ರದಲ್ಲಿ ಸ್ಪರ್ಧಾ ವಿಜೇತರಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಹುಮಾನ ವಿತರಿಸಿದ್ದನ್ನು ಕಾಣಬಹುದು.

ಮೈಸೂರು, ಫೆ.20– ಪ್ರತಿಷ್ಠಿತ ತೊಳಸಿ ಜ್ಯುವೆಲ್ಸ್ ವತಿಯಿಂದ ಇದೇ ಮೊದಲ ಬಾರಿಗೆ ಸ್ಪೌಸ್ ಅಥವಾ ಸ್ಪೈಸ್ ಗಾಲ್ಫ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.

ಮೈಸೂರಿನ ಗಾಲ್ಫಿಂಗ್ ಮಹಿಳಾ ಸಂಘದ ಸಹಯೋಗದೊಂದಿಗೆ ಜಯ ಚಾಮರಾಜ ಒಡೆಯರ್ ಗಾಲ್ಫ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಈ ಪಂದ್ಯಾವಳಿಯಲ್ಲಿ ಪುರುಷ, ಮಹಿಳೆ, ಸಂಗಾತಿಗಳು ಸೇರಿದಂತೆ 260ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಹಚ್ಚಸಿರಿನ ವಾತಾವರಣದಲ್ಲಿ ವಿನೋದದೊಂದಿಗೆ ಸೌಹಾರ್ದ ಸಂದೇಶ ಸಾರುವ ಉದ್ದೇಶದಿಂದ ನಡೆಸಲಾದ ಪಂದ್ಯಾವಳಿಯು, ಸ್ಪರ್ಧೆ ಜೊತೆಗೆ ಭರಪೂರ ಮನೋರಂಜನೆಯ ಅನುಭವವನ್ನೂ ನೀಡಿತು.

ತೊಳಸಿ ಜ್ಯುವೆಲ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಹರ್ಷ ಮತ್ತು ತಿಲಕ್ ತೊಳಸಿ ಅವರ ನೇತೃತ್ವದಲ್ಲಿ ಪಂದ್ಯಾವಳಿ ಯಶಸ್ವಿಯಾಗಿ ನೆರವೇರಿತು. ಇದರ ಭಾಗವಾಗಿ ಹಮ್ಮಿಕೊಳ್ಳಲಾಗಿದ್ದ 'ಲೈವ್ ಬ್ಯಾಂಡ್' ಪ್ರದರ್ಶನ ಮತ್ತಿತರ ಮನರಂಜನಾ ಆಟಗಳಲ್ಲಿ ಕ್ರೀಡಾಪಟುಗಳು ಹಾಗೂ ಗಾಲ್ಫ್ ಅಭಿಮಾನಿಗಳು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಪಂದ್ಯಾವಳಿಯ ಮತ್ತೊಂದು ವಿಶೇಷತೆಯಾಗಿದ್ದ ಔರಾಲ್ಜಿಯಾ ಆಯೋಜಿಸಿದ್ದ 'ಬೆಸ್ಟ್ ಡ್ರೆಸ್ಡ್ ಕಪಲ್' ಪ್ರಶಸ್ತಿಯು ಸ್ಪರ್ಧೆಯ ಮೆರುಗು ಹೆಚ್ಚಿಸಿತ್ತು. ಉತ್ಸಾಹಿ ಪುರುಷರು, ಮಹಿಳೆಯರು ಹಾಗೂ ಜೋಡಿಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದರು. ಅಲ್ಲದೆ ಇದೇ ಮಾದರಿಯ ಮುಂದಿನ ಆವೃತ್ತಿಯನ್ನು ಎದುರು ನೋಡುತ್ತಿರುವುದಾಗಿ ಸಂತಸ ವ್ಯಕ್ತಪಡಿಸಿದರು.

ಸ್ಪರ್ಧಾ ವಿಜೇತರಿವರು...

ಮೈಸೂರಿನ ತೊಳಸಿ ಜ್ಯುವೆಲ್ಸ್ ಸಂಸ್ಥೆ ಹಾಗೂ ಗಾಲ್ಫ್ ವುಮೆನ್ಸ್ ಅಸೋಸಿಯೇಷನ್ ಸಹಯೋಗದಲ್ಲಿ ನಡೆದ ಪ್ರಥಮ ಸ್ಪೈಸ್ ಗಾಲ್ಫ್ ಪಂದ್ಯಾವಳಿಯ ಸ್ಟ್ರೋಕ್ ಪ್ಲೇ ನೆಟ್ ವಿಭಾಗದಲ್ಲಿ ಎಸ್.ಜಿ.ಪ್ರಭು–ಜ್ಯೋತಿ ಪ್ರಭು(ಪ್ರಥಮ), ಮಧುಶ್ರೀ ಶ್ರೀನಿವಾಸನ್–ಎಂ.ಎಸ್.ತೇಜಸ್ ಕುಮಾರ್(ದ್ವಿತೀಯ), ಪ್ರೇಮ್ ಜಯಣ್ಣ–ಅನುಷಾ(ತೃತೀಯ) ವಿಜೇತರಾದರು. ಪುಟ್ಸ್ ವಿಭಾಗದಲ್ಲಿ ಸಮರ್ಥ್ ಪಟೇಲ್–ಭೂಮಿ(ಪ್ರ), ಅವನಿ ಚಿನ್ನಸ್ವಾಮಿ–ಸೂರ್ಯ(ದ್ವಿ) ಬಹುಮಾನ ಪಡೆದರು.

ನಕ್ಕರೆ ಅದೇ ಸ್ವರ್ಗ

ಗುಂಡ ಮತ್ತು ತಿಮ್ಮ ಕಾಲೇಜು ಮುಗಿಸಿ 20 ವರ್ಷಗಳ ನಂತರ ಭೇಟಿಯಾದರು
ಗುಂಡ: ನನ್ನ ಬಳಿ 3 ಕಾರು, 2 ಬಂಗಲೆ ಇದೆ. ನಿನ್ನ ಬಳಿ ಏನಿದೆ?
ತಿಮ್ಮ : ಆಸ್ತಿ ಸಂಪಾದನೆಯಲ್ಲಿ ನಂಗೆ ಅಂಥ ಇಂಟರೆಸ್ಟ್ ಏನಿಲ್ಲ. ಆದರೆ ನನಗೊಬ್ಬ ಮಗನಿದ್ದಾನೆ. ಅವನಿಗೆ ಗರ್ಲ್ ಫ್ರೆಂಡಾಗಿ ನಿನ್ನ ಮಗಳಿದ್ದಾಳಷ್ಟೇ...

ಮೈಸೂರು ಮಿತ್ರ
ಶುಕ್ರವಾರ, 21 ಫೆಬ್ರವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

'ಸಹನೆ ಧೈರ್ಯವಂತನ ಲಕ್ಷಣ, ಕೋಪ ಹೇಡಿಯ ಲಕ್ಷಣ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಭರಣಿ ಮಳೆ ಧರಣಿಯೆಲ್ಲ ಬೆಳೆ'

ನಿಮ್ಮ ಪತ್ರಗಳು

ದೆಹಲಿಯ ನೂತನ ಸರ್ಕಾರ ಜನರ ಆಶೋತ್ತರಗಳಿಗೆ ಸ್ಪಂದಿಸಲಿ...

ಮಾನ್ಯರೆ,

ಕಳೆದ ಫೆಬ್ರವರಿ 5ರಂದು ರಾಷ್ಟ್ರ ರಾಜಧಾನಿಯಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ 27 ವರ್ಷಗಳ ವನವಾಸ ಅಂತ್ಯಗೊಂಡಿದ್ದು, ರೇಖಾ ಗುಪ್ತ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ನೂತನ ಮುಖ್ಯಮಂತ್ರಿ ರೇಖಾ ಗುಪ್ತಾ ಎದುರು ಈಗ ಹಲವು ಸವಾಲುಗಳಿದ್ದು, ಅಧಿಕಾರಕ್ಕೆ ಬಂದಿರುವ ಬಿಜೆಪಿ ಚುನಾವಣಾ ಪೂರ್ವದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುವುದರ ಕಡೆಗೆ ಹೆಚ್ಚಿನ ಗಮನಹರಿಸಬೇಕಾಗಿದೆ.

ದೆಹಲಿ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರು, ಮಾರ್ಚ್ 8ರಂದು ದೆಹಲಿಯ ಮಹಿಳೆಯರ ಖಾತೆಗೆ 2,500 ಹಣ ಜಮೆಯಾಗಲಿದೆ. ಇದು ಮೋದಿ ಗ್ಯಾರಂಟಿ ಎಂದು ಹೇಳಿದ್ದರು. ಹೀಗಾಗಿ ಇನ್ನು 15 ದಿನಗಳೊಳಗೆ ಅರ್ಹ ಫಲಾನುಭವಿಗಳನ್ನು ಗುರುತಿಸಿ ಯೋಜನೆ ಜಾರಿಗೊಳಿಸುವ ದೊಡ್ಡ ಸವಾಲು ಸರ್ಕಾರದ ಮುಂದಿದೆ. ಇದಲ್ಲದೆ ಗರ್ಭಿಣಿ ಮಹಿಳೆಯರಿಗೆ 21,000 ರೂ. ಸಹಾಯಧನ, ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ್ ಯೋಜನೆಯನ್ನು ದೆಹಲಿಯಲ್ಲಿ ಜಾರಿಗೊಳಿಸುವ ಪ್ರಸ್ತಾವನೆ ಹಾಗೂ ಶುದ್ಧ ಕುಡಿಯುವ ನೀರು ಮತ್ತು ನಿರಂತರ ವಿದ್ಯುತ್ ಸರಬರಾಜಿನ ಕಡೆಗೆ ಹೆಚ್ಚಿನ ಗಮನಹರಿಸಬೇಕಿದೆ.

ಮಹಿಳಾ ಸುರಕ್ಷೆ ಹಾಗೂ ಹೆಚ್ಚುತ್ತಿರುವ ಅಪರಾಧ ತಡೆಯುವುದು, ಇದಕ್ಕಾಗಿ ದೆಹಲಿ ಪೊಲೀಸರನ್ನು ಸಕ್ರಿಯಗೊಳಿಸುವುದು ಹೊಸ ಸರ್ಕಾರದ ಸವಾಲುಗಳ ಪೈಕಿ ಮುಖ್ಯವಾದುದ್ದಾಗಿದೆ. ದೆಹಲಿ ಪೊಲೀಸ್ ವ್ಯವಸ್ಥೆ ಕೇಂದ್ರ ಸರ್ಕಾರದ ಜತೆಗೆ ಹೊಂದಿಕೊಂಡಿದ್ದು, ದೆಹಲಿ ಸರ್ಕಾರ ಈಗ ಕೇಂದ್ರ ಸರ್ಕಾರದ ಜತೆಗೆ ಸಮನ್ವಯದೊಂದಿಗೆ ಕೆಲಸ ಮಾಡಬೇಕಾದುದು ದೆಹಲಿ ಜನತೆಯ ದೃಷ್ಟಿಯಿಂದ ಒಳಿತಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ದೆಹಲಿಯು ಅಪಾಯಕಾರಿ ವಾಯು ಮಾಲಿನ್ಯ ಸಮಸ್ಯೆಯನ್ನು ಎದುರಿಸುತ್ತಿದ್ದು ಇದು ಗಂಭೀರ ಪ್ರಕರಣವಾಗಿದೆ. ವಿಶೇಷವಾಗಿ ಚಳಿಗಾಲದಲ್ಲಿ ಜಮೀನುಗಳಲ್ಲಿ ಕಳೆ ಸುಡುವಿಕೆ, ವಾಹನದ ಹೊಗೆ ಹೊರಸೂಸುವಿಕೆ ಮತ್ತು ಕೈಗಾರಿಕಾ ಮಾಲಿನ್ಯದಿಂದಾಗಿ ದೆಹಲಿ ವಾಯು ಮಾಲಿನ್ಯಕ್ಕೆ ತುತ್ತಾಗಿದ್ದು ಇದೀಗ ಈ ಸಮಸ್ಯೆ ಕಳವಳಕಾರಿಯಾಗಿ ಬೆಳೆದಿದೆ.


ಅರಣ್ಯೀಕರಣದ ಕಡೆಗೆ ಗಮನಹರಿಸುವುದು, ಮಾಲಿನ್ಯ ತಗ್ಗಿಸುವುದಕ್ಕೆ ಸೂಕ್ತ ಸಮಂಜಸವೆನಿಸುವ ಯೋಜನೆ ರೂಪಿಸಿ ಜಾರಿಗೊಳಿಸುವುದು, ಎಲೆಕ್ಟ್ರಿಕ್ ವಾಹನಗಳನ್ನು ಉತ್ತೇಜಿಸುವುದು ಮತ್ತು ತ್ಯಾಜ್ಯ ನಿರ್ವಹಣೆಯನ್ನು ಸುಧಾರಿಸುವುದು ಸೇರಿದಂತೆ ಸುಸ್ಥಿರ ಪರಿಹಾರಗಳನ್ನು ಅನುಷ್ಠಾನಗೊಳಿಸುವುದು ದೆಹಲಿಯಲ್ಲಿ ಬಿಜೆಪಿ ಸರ್ಕಾರದ ಮುಂದಿರುವ ನಿರ್ಣಾಯಕ ಸವಾಲುಗಳ ಪೈಕಿ ಮುಖ್ಯವಾಗಿದೆ. ಇವೆಲ್ಲವುಗಳ ಕಡೆಗೆ ನೂತನ ಸರ್ಕಾರ ಗಮನಹರಿಸಿ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಪಕ್ಷ ಜನತೆಗೆ ನೀಡಿದ್ದ ಭರವಸೆಗಳ ಈಡೇರಿಕೆಗೆ ಹಗಲಿರುಳು ಶ್ರಮಿಸಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಇದು ನಿರೀಕ್ಷಿತ ವರದಿ...!

ಮಾನ್ಯರೆ,

ಮುಡಾದಲ್ಲಿ ನಡೆದಿದೆ ಎನ್ನಲಾದ ಹಗರಣದ ಸಂಬಂಧ ಲೋಕಾಯುಕ್ತ ಪೊಲೀಸರು ತನಿಖೆ ನಡೆಸಿ ಸಲ್ಲಿಸಿದ ವರದಿ ಬೆಟ್ಟ ಅಗೆದು ಇಲಿ ಹಿಡಿದಂತಾಗಿದೆ. ಒಂದು ಸರ್ಕಾರದ ಅಧೀನ ಸಂಸ್ಥೆ ಆಡಳಿತ ಪಕ್ಷದ ವಿರುದ್ಧ ಎಲ್ಲಾದರೂ ವರದಿ ನೀಡಲು ಸಾಧ್ಯವೆ? ಅದೂ ಮುಖ್ಯಮಂತ್ರಿಗಳೇ ಹಗರಣದ ರೂವಾರಿ ಎಂದು ಬಿಂಬಿಸುತ್ತಿರುವಾಗ ತನಿಖೆಗಳು ಯಾವ ದಿಕ್ಕಿನಲ್ಲಿ ಸಾಗುತ್ತವೆ ಎಂಬುದನ್ನು ಓರ್ವ ಸಾಮಾನ್ಯ ನಾಗರಿಕನೂ ಅರ್ಥ ಮಾಡಿಕೊಳ್ಳುವ ಸಂಗತಿ.



ಮುಖ್ಯಮಂತ್ರಿಗಳನ್ನು ಎದುರು ಹಾಕಿಕೊಂಡರೆ ಹುಲಿ ಬಾಯಿಗೆ ಸಿಲುಕಿದಂತೆ ಎಂಬ ಕಟು ಸತ್ಯ ಎಂಬುದು ತನಿಖೆಯ ಪ್ರಾರಂಭದ ಹಂತದಲ್ಲೇ ತನಿಖಾಧಿಕಾರಿಗಳ ಅರಿವಿಗೆ ಬಂದಿರುತ್ತದೆ. ಹೀಗಿರುವಾಗ ಇದೊಂದು ಬಹು ನಿರೀಕ್ಷಿತ ವರದಿ ಎಂಬುದನ್ನು ಮನದಟ್ಟು ಮಾಡಿಕೊಳ್ಳಬಹುದು. ಕಳೆದ ಒಂದು ವರ್ಷದಿಂದ ದೇಶಾದ್ಯಂತ ಚರ್ಚೆಗೆ ಗ್ರಾಸವಾಗಿದ್ದ ಮುಡಾ ಹಗರಣದಲ್ಲಿ ಲೋಕಾಯುಕ್ತ ಪೊಲೀಸರು ತಮ್ಮ ಸ್ವಾಮಿನಿಷ್ಠೆಯನ್ನು ಪ್ರಾಮಾಣಿಕವಾಗಿ ಮಾಡಿ ಮುಗಿಸಿದ್ದಾರೆ.

ಕೇವಲ ಒಂದು ಪುಟದಲ್ಲಿ ಹೇಳಬಹುದಾದ ಸಂಗತಿಯನ್ನು 11 ಸಾವಿರ ಪುಟಗಳಿಗೆ ವಿಸ್ತರಿಸುವ ಮೂಲಕ ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಸರ್ಕಾರದ ಕೈಗೊಂಬೆ ಎಂಬುದನ್ನು ದೃಢಪಡಿಸಿದ್ದಾರೆ. ಕೋಟ್ಯಾಂತರ ಬೆಲೆಯ ನಿವೇಶನಗಳು ಅಕ್ರಮವಾಗಿ ವರ್ಗಾವಣೆಯಾಗಿರುವ ಬಗ್ಗೆ ಯಾವ ಅಧಿಕಾರಿಯನ್ನು ತನಿಖಾ ವರದಿಯಲ್ಲಿ ಉಲ್ಲೇಖಿಸಿಲ್ಲವೆಂದಾದರೆ ಮುಡಾದಲ್ಲಿ ನಿಜಕ್ಕೂ ನಡೆದಿರುವುದು ಏನು ಎಂಬುದನ್ನು ಉನ್ನತ ತನಿಖಾ ಸಂಸ್ಥೆಗಳಿಂದ ಮಾತ್ರ ಬೆಳಕಿಗೆ ತರಲು ಸಾಧ್ಯ. **–ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.**

ತಿಪ್ಪೆ ಸೇರಿದ ಸಿದ್ದರಾಮಯ್ಯ ಪ್ರಕರಣ

ಮಾನ್ಯರೆ,

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಲೋಕಾಯುಕ್ತ ಸಂಸ್ಥೆಯು ಕ್ಲೀನ್‌ಚಿಟ್ ನೀಡಿದೆ ಎಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಹೇಳಿ ಕೇಳಿ ಮುಡಾ ಒಂದು ಸರ್ಕಾರಿ ಅಧೀನ ಸಂಸ್ಥೆ. ಅದಕ್ಕೇ ಇರಬೇಕು ಅದು ಸಿದ್ದರಾಮಯ್ಯ ಅವರ ಪತ್ನಿ ಹೆಸರಿಗೆ 14 ನಿವೇಶನಗಳನ್ನು ಒಟ್ಟಾರೆ ಮಂಜೂರು ಮಾಡಿದೆ ಎಂದು ಹೇಳಲಾಗಿದೆ.

ಫೆಬ್ರವರಿ ತಿಂಗಳ ಹತ್ತೊಂಬತ್ತನೇ [19/02/25] ರಂದು ಲೋಕಾಯುಕ್ತ ಸಂಸ್ಥೆಯು 'ಬಿ' ಫಾರಂ ರಿಪೋರ್ಟ್ ಸಲ್ಲಿಸಿದೆ ಎಂದು ವರದಿಯಾಗಿದೆ. ಇದಲ್ಲದೆ ಈ ಕೇಸಿನ ಬಗ್ಗೆ ದೂರು ನೀಡಿರುವ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಎಂಬುವವರಿಗೆ ನೋಟೀಸನ್ನೂ ಸಹ ನೀಡಲಾಗಿದೆ ಎಂದು ಅದೇ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಇದಕ್ಕೆ ಅವರುಗಳು (ಸರ್ಕಾರ) ಹೇಳಿದಂತೆ ತನಿಖೆ ಮಾಡಿ ತಮ್ಮ ಇಷ್ಟದಂತೆ (ಅಥವಾ ಯಾರದ್ದೋ ಒತ್ತಾಯದ ಮೇರೆಗೆ) ಈ ಪ್ರಕರಣದಲ್ಲಿ ಲೋಕಾಯುಕ್ತವು ಸಿದ್ದರಾಮಯ್ಯನವರಿಗೆ ಕ್ಲೀನ್‌ಚಿಟ್ ನೀಡಿ ಇಡೀ ಪ್ರಕರಣವನ್ನು ತಿಪ್ಪೆಗೆ ಎಸೆದಿದ್ದಾರೆ.

ಈ ತನಿಖೆಯನ್ನು – 'ಇದೊಂದು ತನಿಖೆ ಎಂದು ಕರೆಯಬೇಕಾ? ಎಂದು ರಾಜ್ಯದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಹೇಳಿದ್ದಾರೆ. ಅವರ ಮೂಗಿನ ನೇರಕ್ಕೆ ತನಿಖಾ ವರದಿಗಳನ್ನು ಬರೆಸುವುದಾದರೆ ತನಿಖಾ ವರದಿಗಳು ಏಕೆ ಬೇಕು ಎಂಬುದು ಜನತಾ ಜನಾರ್ಧನನ ಅಭಿಪ್ರಾಯ ಕೂಡಾ ಆಗಿದೆ.

ಲೋಕಾಯುಕ್ತ ಹಗರಣದ ಸಂಬಂಧ ಲೋಕಾಯುಕ್ತ ಅಧಿಕಾರಿಗಳು ಅದೇನು ವರದಿ ಕೊಡುತ್ತಾರೋ ಕಾದು ನೋಡಬೇಕಾಗಿದೆ. ಲೋಕಾಯುಕ್ತರು ತನಿಖೆ ಮುಗಿದ ನಂತರ "ಈ ವಿಷಯದಲ್ಲಿ ಗೋಲ್‌ಮಾಲ್ ಏನೂ ಆಗಿಲ್ಲ. ಎಲ್ಲಾ ಕಾನೂನು ಪ್ರಕಾರವೇ ನಡೆದಿದೆ " ಎಂದು ವರದಿ ನೀಡಿ ತಿಪ್ಪೆ ಸಾರಿಸುತ್ತಾರೆ.

–ಬೇಲೂರು ದ.ಶಂ. ಪ್ರಕಾಶ್, ಮೈಸೂರು.

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ನುಡಿದರೆ ಮುತ್ತಿನ ಹಾರದಂತಿರಬೇಕು...

ನಮ್ಮಲ್ಲಿ ಪ್ರತಿದಿನ ನೂರಾರು ಸಭೆ–ಸಮಾರಂಭಗಳು ನಡೆಯುತ್ತವೆ. ಅವುಗಳಲ್ಲಿ ಹಲವರು ಭಾಷಣವನ್ನೂ ಮಾಡುತ್ತಾರೆ. ಮರುದಿನ ಅವು ಪತ್ರಿಕೆಗಳಲ್ಲೂ ಪ್ರಕಟವಾಗುತ್ತವೆ. (ಕೆಲವರು ಪತ್ರಿಕೆಗಳಲ್ಲಿ ಬರುವಂತೆ ನೋಡಿಕೊಳ್ಳುತ್ತಾರೆ!) ಅವುಗಳನ್ನು ಓದಿದಾಗ ಅವರು ಆಯಾ ಸಂದರ್ಭಕ್ಕೆ ತಕ್ಕಂತೆ ಮಾತನಾಡುವುದು ಕಂಡುಬರುತ್ತದೆ. ಏನು ಹೇಳಿದ್ದೇವೆ ಎಂಬುದನ್ನು ಹೇಳಿದವರು ಮರೆಯುತ್ತಾರೆ. ಕೆಲವು ದಿನಗಳ ನಂತರ ಮತ್ತೊಂದು ಸಮಾರಂಭದಲ್ಲಿ ಹಿಂದೆ ಹೇಳಿದ್ದ ಹೇಳಿಕೆಗೆ ತಕ್ಕುದಲ್ಲದ ಮಾತು ಹೇಳಿಬಿಡುತ್ತಾರೆ. ಇದನ್ನು ಪ್ರಮುಖವಾಗಿ ನಮ್ಮ ರಾಜಕಾರಿಣಿಗಳಲ್ಲಿ ಕಾಣಬಹುದು.

ತಾವು ಹೇಳಿದ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾದುದ್ದನ್ನು ಅವರು ಓದಿ ಸಂತಸ ಹಾಗೂ ಹೆಮ್ಮೆ ವ್ಯಕ್ತಪಡಿಸುತ್ತಾರೆ. ನಂತರ ಆ ಹೇಳಿಕೆಗೆ ವಿರೋಧ ವ್ಯಕ್ತವಾದರೆ, ನಾನು ಹಾಗೆ ಹೇಳೇ ಇಲ್ಲ, ಮಾಧ್ಯಮಗಳಲ್ಲಿ ತಪ್ಪಾಗಿ ವರದಿಯಾಗಿದೆ ಎಂದು ಹೇಳಿಕೆ ಕೊಡುತ್ತಾರೆ. ಆ ಗೊಂದಲದಿಂದ ಹೊರಬರಬೇಕಾದರೆ ಅವರು ಸಾಕಷ್ಟು ಒತ್ತಡ ಅನುಭವಿಸುತ್ತಾರೆ. ಎಲ್ಲಿ ವಿಷಯ ತನ್ನ ಪಕ್ಷದ ಹೈಕಮಾಂಡಿಗೆ ಗೊತ್ತಾಗಿ ತನಗೆ ತೊಂದರೆಯಾಗಬಹುದೋ ಏನೋ ಎಂಬ ಆತಂಕ ಅವರಲ್ಲಿರುವುದು ಕಂಡುಬರುತ್ತದೆ.

ಇಂತಹ ಗೊಂದಲಗಳು ನಮ್ಮ ಶಾಸನ ಸಭೆಗಳಲ್ಲೂ ಕಂಡುಬರುತ್ತದೆ. ಉದ್ವೇಗದಲ್ಲಿ ಹಾಗೂ ಸಮಯಕ್ಕೆ ತಕ್ಕಂತೆ ಮಾತನಾಡುವಾಗ ವಿರೋಧಾಭಾಸದ ಹೇಳಿಕೆ ನೀಡುವುದು, ಅದಕ್ಕೆ ವಿರೋಧ ವ್ಯಕ್ತವಾದಾಗ ಹಾಗೂ ಅದು ಅತಿರೇಕಕ್ಕೆ ಹೋಗುವಂತಾದಾಗ ತಮ್ಮ ಹೇಳಿಕೆಗೆ ಕ್ಷಮೆ ಕೇಳುತ್ತಾರೆ. ಹೇಗಾದರೂ ಆ ಗೊಂದಲದಿಂದ ಹೊರಗೆ ಬರಲು ಪ್ರಯತ್ನಿಸುತ್ತಾರೆ. ಅವರಿಗೆ ಅದೃಷ್ಟ ಇದ್ದರೆ ಇಂತಹ ಇನ್ನೊಬ್ಬರ ಹೇಳಿಕೆಗೆ ಪ್ರತಿಭಟನೆ ವ್ಯಕ್ತವಾದಾಗ ಇವರ ಹೇಳಿಕೆ ಬೇಗ ಹಿಂದೆ ಸರಿಯುತ್ತದೆ.

ಇದಕ್ಕೆ ಕಾರಣ ವಿವೇಚನೆ ಇಲ್ಲದೆ ಆಯಾ ಸಂದರ್ಭಕ್ಕೆ ತಕ್ಕಂತೆ ಮಾತನಾಡುವುದೇ ಆಗಿದೆ. ಯಾವುದೇ ಸಭೆ–ಸಮಾರಂಭಕ್ಕೆ ಹೋಗುವುದಕ್ಕೆ ಪೂರ್ವದಲ್ಲಿ ಅಲ್ಲಿ ನಡೆಯುವ ಕಲಾಪ ಏನು, ಯಾವ ಉದ್ದೇಶದಿಂದ ಆ ಸಮಾರಂಭ ನಡೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಂಡು ಅದಕ್ಕೆ ತಕ್ಕಂತೆ ಮಾತನಾಡಬೇಕು. ಒಂದಷ್ಟು ಅಧ್ಯಯನ ಮಾಡಿ ಟಿಪ್ಪಣಿ ಮಾಡಿಕೊಂಡು ನಂತರ ಸಭೆಗೆ ಹೋಗಬೇಕು. ಹಾಗೆ ಮಾಡಿದರೆ ಅವರಿಗೆ ಗೌರವ ಬರುತ್ತದೆ.

ನಮ್ಮ ವಿಧಾನಸಭೆಯಲ್ಲಿ ಒಂದು ವಿಶಾಲವಾದ ಗ್ರಂಥಾಲಯವಿದೆ. ಅಲ್ಲಿಗೆ ಪ್ರತಿ ವರ್ಷ ಸಾಕಷ್ಟು ಪುಸ್ತಕಗಳನ್ನು ತರಿಸಲಾಗುತ್ತದೆ. ಯಾವ ಪುಸ್ತಕಗಳು ಉತ್ತಮ ಎಂದು ಗ್ರಂಥಾಲಯ ಸಮಿತಿ ನಿರ್ಣಯಿಸಿ ಪುಸ್ತಕಗಳನ್ನು ತರಿಸುತ್ತದೆ. ಆದರೆ ಅದನ್ನು ಓದುವವರು ಯಾರು? ಎಂಬುದು ಯಕ್ಷಪ್ರಶ್ನೆ. ವಿಧಾನ ಸೌಧದ ಒಬ್ಬ ನೌಕರರು ಹೇಳುವಂತೆ, ಹತ್ತಿಪ್ಪತ್ತು ವರ್ಷಗಳ ಹಿಂದೆ, ಹಲವು ಶಾಸಕರು ಆ ಗ್ರಂಥಾಲಯಕ್ಕೆ ಹೋಗಿ ತಡ ರಾತ್ರಿಯವರೆಗೆ ಟಿಪ್ಪಣಿ ತಯಾರಿಸಿಕೊಳ್ಳುತ್ತಿದ್ದರು.

ಮರುದಿನ ಅವರು ಶಾಸನ ಸಭೆಯಲ್ಲಿ ಮಾತನಾಡಿದರೆ ಇಡೀ ಸಭೆ ಅದನ್ನು ಗಂಭೀರವಾಗಿ ಕೇಳುತ್ತಿತ್ತು. ಆದರೆ, ಈಗ ಜನಪ್ರತಿನಿಧಿಗಳು ಅಲ್ಲಿಗೆ ಬರುವುದು, ಟಿಪ್ಪಣಿ ಮಾಡಿಕೊಳ್ಳುವುದು ಕಡಿಮೆಯೇ ಎನ್ನುತ್ತಾರೆ ಅವರು. ನಿಜ, ಹಿಂದೆ ಹಲವು ಜನಪ್ರತಿನಿಧಿಗಳು ಶಾಸನ ಸಭೆಯಲ್ಲಿ ಮಾತನಾಡಿದರೆ ಅದರಲ್ಲಿ ಸತ್ವವಿರುತ್ತಿತ್ತು. ಸರ್ಕಾರದ ಮಂತ್ರಿಗಳು ಅವರ ಮಾತನ್ನು ಆಸಕ್ತಿಯಿಂದ ಆಲಿಸುತ್ತಿದ್ದರು, ಕೆಲವು ಅಂಶಗಳನ್ನು ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಈಗ ಅಂತಹವರ ಸಂಖ್ಯೆ ಬೆರಳೆಣಿಕೆಗೆ ಬಂದು ನಿಂತಿರುವುದು ಬೇಸರದ ಸಂಗತಿ.

ನಮಗೆ ಮಾತನಾಡಲು ಅಂಶಗಳಿಲ್ಲದಾಗ ಕೆಲವೇ ಮಾತುಗಳಲ್ಲಿ ನಮ್ಮ ಭಾಷಣ ಮುಗಿಸಬೇಕು. ಮಾತನಾಡಲೇಬೇಕು ಎಂದು ಮಾತನಾಡುವುದು ಸರಿಯಲ್ಲ. ನಾವೇನೂ ಎಲ್ಲ ವಿಷಯ ಅರಿತ ಬೃಹಸ್ಪತಿಗಳಲ್ಲ. ಅನೇಕ ಸಲ ಮೌನವು ಸಾಕಷ್ಟು ಮಾತನಾಡುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಕಾರಣದಿಂದಲೇ ಹೇಳುವುದು ಚಿಲ್ಲರೆ ನಾಣ್ಯ ಸದ್ದು ಮಾಡುವಷ್ಟು ನೋಟುಗಳು ಸದ್ದು ಮಾಡು ವುದಿಲ್ಲ ಎಂದು. ನಾಣ್ಯಕ್ಕಿಂತ ನೋಟಿನ ಬೆಲೆ ಜಾಸ್ತಿ. ಆದರೆ ನೋಟು ಶಬ್ದ ಮಾಡುವುದಿಲ್ಲ. ನಾಣ್ಯಗಳ ಮೌಲ್ಯ ಕಡಿಮೆ, ಆದರೆ ಅದು ಹೆಚ್ಚು ಮಾತನಾಡುತ್ತದೆ ಎಂದು.

> “ ಯಾವ ವೈದ್ಯ ಸಣ್ಣಪುಟ್ಟ ಖಾಯಿಲೆಗೂ ಪುಟ ಪೂರ್ತಿ ಔಷಧಿ ಮಾತ್ರೆ ಬರೆದುಕೊಡುತ್ತಾರೋ ಅವರ ಜ್ಞಾನ ಜಾಸ್ತಿ ಎಂದು ಜನರು ಭಾವಿಸುತ್ತಾರೆ. ಇತ್ತೀಚೆಗೆ ಅವರ ನೆನಪಿನ ಶಕ್ತಿಗಿಂತ ಕಂಪ್ಯೂಟರ್ ನೋಡಿ ಔಷಧಿ ಬರೆಯುವ ವೈದ್ಯರು ಜಾಸ್ತಿಯಾಗುತ್ತಿದ್ದಾರೆ ಎಂಬುದು ಸೋಜಿಗದ ಸಂಗತಿಯಾಗಿದೆ. ವಿಶ್ವವಿದ್ಯಾನಿಲಯಗಳಿಗೂ ಈ ಮಾತು ಅನ್ವಯ. ಅಲ್ಲಿಯೂ ವಿಷಯ ಪರಿಣಿತರಿಗಿಂತ ಕಡಿಮೆ ವಿಷಯ ಅರಿತವರೇ ಹೆಚ್ಚು ಆರ್ಭಟಿಸುತ್ತಾರೆ.

ನಮ್ಮ ಸಮಾಜದಲ್ಲೂ ಇದಕ್ಕೆ ಉದಾಹರಣೆಗಳು ಸಾಕಷ್ಟು ಕೊಡಬಹುದು. ವಿಷಯದ ಬಗ್ಗೆ ವಿಶೇಷ ಜ್ಞಾನವಿರುವವರು ಏನೂ ಗೊತ್ತಿಲ್ಲದಂತೆ ಇರುತ್ತಾರೆ. ಅರೆಬರೆ ಜ್ಞಾನವಿರುವವರು ಮಾತ್ರ ತಮಗೆ ಎಲ್ಲಾ ಗೊತ್ತು ಎಂಬಂತೆ ವರ್ತಿಸುತ್ತಾರೆ. ಇದು ವೈದ್ಯರಿಗೂ ಅನ್ವಯವಾಗುತ್ತದೆ. ಜ್ಞಾನ ಕಡಿಮೆ ಇರುವವರ ಆರ್ಭಟ ಜಾಸ್ತಿ. ಹಾಗೆ ಮಾಡಿದರೆ ಜನರು ತನ್ನತ್ತ ಆಕರ್ಷಿತರಾಗುತ್ತಾರೆ ಎಂಬುದು ಅವರ 'ಮಹಾಜ್ಞಾನ'.

ಯಾವ ವೈದ್ಯ ಸಣ್ಣಪುಟ್ಟ ಖಾಯಿಲೆಗೂ ಪುಟ ಪೂರ್ತಿ ಔಷಧಿ ಮಾತ್ರೆ ಬರೆದುಕೊಡು ತ್ತಾರೋ ಅವರ ಜ್ಞಾನ ಜಾಸ್ತಿ ಎಂದು ಜನರು ಭಾವಿಸುತ್ತಾರೆ. ಇತ್ತೀಚೆಗೆ ಅವರ ನೆನಪಿನ ಶಕ್ತಿಗಿಂತ ಕಂಪ್ಯೂಟರ್ ನೋಡಿ ಔಷಧಿ ಬರೆಯುವ ವೈದ್ಯರು ಜಾಸ್ತಿಯಾಗುತ್ತಿದ್ದಾರೆ ಎಂಬುದು ಸೋಜಿಗದ ಸಂಗತಿಯಾಗಿದೆ. ವಿಶ್ವವಿದ್ಯಾನಿಲಯಗಳಿಗೂ ಈ ಮಾತು ಅನ್ವಯ. ಅಲ್ಲಿಯೂ ವಿಷಯ ಪರಿಣಿತರಿ ಗಿಂತ ಕಡಿಮೆ ವಿಷಯ ಅರಿತವರೇ ಹೆಚ್ಚು ಆರ್ಭಟಿಸುತ್ತಾರೆ.

ಇದನ್ನು ಕಂಡು ವಿಷಯ ತಜ್ಞರು ಮುಸಿ ಮುಸಿ ನಕ್ಕರೆ, ಕೆಲವರು ಬೇಸರ ಪಟ್ಟುಕೊಳ್ಳುತ್ತಾರೆ. ಜ್ಯೋತಿಷ್ಯದ ವಿಷಯದಲ್ಲೂ ಇದು ಢಾಳಾಗಿ ಕಾಣುತ್ತದೆ. ಕತ್ತಿನ ತುಂಬಾ ವಿವಿಧ ಮಾಲೆ ಧರಿಸಿ, ಕೈಯಿನ ಹತ್ತು ಬೆರಳಿಗೂ ಹತ್ತಕ್ಕಿಂತ ಹೆಚ್ಚಿನ ಉಂಗುರ ಧರಿಸಿ, ಹಣೆಯ ತುಂಬಾ ಭಸ್ಮ, ಕುಂಕುಮ ಬಳಿದು ಕೊಂಡವರು ಆರ್ಭಟಿಸುವಷ್ಟು, ನಿಜವಾದ ಜ್ಯೋತಿಷ್ಯ ತಿಳಿದವರು ಬೆಳಕಿಗೇ ಬರುವುದಿಲ್ಲ. ಇದು ಎಲ್ಲಾ ಕ್ಷೇತ್ರಗಳಲ್ಲೂ ಕಂಡುಬರುವಂತ ಹುದು. ಎಲ್ಲೆಲ್ಲೂ ಚಿಲ್ಲರೆ ನಾಣ್ಯದ್ದೇ ಸದ್ದು. ಅಂದರೆ ಮೌಲ್ಯಭರಿತವಾದ ದ್ದಕ್ಕಿಂತ ಜೊಳ್ಳು ಹೆಚ್ಚಾಗಿ ವಿಜೃಂಭಿಸುತ್ತದೆ ಎಂಬುದು ಕಾಣಸಿಗುತ್ತದೆ.

ನಮ್ಮಲ್ಲಿ ಮೊದಲಿನಿಂದಲೂ ಹೇಳುವ ಮೌಲಿಕವಾದ ಮಾತು ಎಂದರೆ ತುಂಬಿದ ಕೊಡ ತುಳುಕುವುದಿಲ್ಲ, ಅರೆಬರೆ ತುಂಬಿದ ಬಿಂದಿಗೆಯ ನೀರು ಹೆಚ್ಚು ಸದ್ದು ಮಾಡುತ್ತದೆ ಎಂದು. ಇದು ಇಂದಿನ ಲೋಕಕ್ಕೆ ಹೆಚ್ಚು ಅನ್ವಯವಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಇತ್ತೀಚೆಗೆ ಪೊಲೀಸರಿಂದ ಬಂಧನಕ್ಕೊಳಗಾದ ಒಬ್ಬ ಪ್ರತಿಷ್ಠಿತ (!) ಮಹಿಳೆ, ಹಲವು ಪ್ರಮುಖ ರಾಜಕಾರಿಣಿಗಳ ಹೆಸರು ಹೇಳಿಕೊಂಡು ಸಾಕಷ್ಟು ಜನರಿಗೆ ಮೋಸ ಮಾಡಿರುವಂತಹುದು. ಕೆಲವರು ಆಕೆಯ ಪ್ರಭಾವಕ್ಕೆ ಮರುಳಾಗಿ ಹಲವು ಲಕ್ಷ, ಕೋಟಿ ಹಣ ಕಳೆದು ಕೊಂಡಿರುವಂತಹುದನ್ನು ನೋಡಿದ್ದೇವೆ. ಇನ್ನು ಚುನಾವಣೆಯ ಸಮಯದಲ್ಲಿ ಪಕ್ಷದ ಟಿಕೆಟ್ ಕೊಡಿಸುವುದಾಗಿ ಹೇಳಿ ಕೋಟಿಗಟ್ಟಲೆ ಹಣ ಸಂಗ್ರಹಿಸಿದ್ದನ್ನೂ ಕಂಡಿದ್ದೇವೆ. ನಿಜವಾದ ಶಕ್ತಿ ಸಾಮರ್ಥ್ಯ ಇರುವವರು ಹೀಗೆ ಮಾಡುವುದು ಅಪರೂಪ.

ಖ್ಯಾತ ಕಾದಂಬರಿಗಾರ ಎಸ್.ಎಲ್.ಭೈರಪ್ಪನವರು ಉಲ್ಲೇಖಿಸಿದ್ದ ಒಂದು ಘಟನೆ ಇತ್ತೀಚೆಗೆ ಪ್ರಚಾರ ಪಡೆದಿದೆ, ಅವರು ಗುಜ ರಾತಿನಲ್ಲಿ ಇದ್ದಾಗ ಒಮ್ಮೆ ಇಬ್ಬರು ಸಣ್ಣ ವಯಸ್ಸಿನ ಯುವಕರು ಅವರ ಮನೆಗೆ ಬಂದಿದ್ದರು. ಅವರಿಬ್ಬರೂ ಬ್ಯಾಂಕ್ ಅಧಿಕಾರಿಗಳು. ಅದರಲ್ಲಿ ಒಬ್ಬರು ಬ್ಯಾಂಕ್ ಮ್ಯಾನೇಜರ್ ಹಾಗೂ ಮತ್ತೊಬ್ಬರು ಅಕೌಂಟೆಂಟ್. ಅವರು ಹತ್ತಿರದಲ್ಲೇ ಇರುವ ಬ್ಯಾಂಕಿನ ತಮ್ಮ ಶಾಖೆಯಲ್ಲಿ ಖಾತೆ ತೆರೆಯುವಂತೆ ಇವರನ್ನು ಕೋರಿದರು. ಬಂದಿದ್ದವರಲ್ಲಿ ಒಬ್ಬರನ್ನು ಎಲ್ಲೋ ನೋಡಿದ ನೆನಪು. ಆದರೆ ಎಲ್ಲಿ ಎಂದು ಇವರಿಗೆ ಹೊಳೆಯಲಿಲ್ಲ. ಭೈರಪ್ಪನವರು ತಾನು ಸಣ್ಣ ಸಂಬಳದಾರ, ತನಗೆ ಬ್ಯಾಂಕ್ ಖಾತೆಯ ಅವಶ್ಯಕತೆ ಇಲ್ಲ ಎಂದರೂ ಅವರ ಒತ್ತಡಕ್ಕೆ ಒಳಗಾಗಿ ಖಾತೆ ತೆರೆದರು. ಕೆಲವೇ ಸಮಯದಲ್ಲಿ ಆ ಬ್ಯಾಂಕಿನ ಶಾಖೆಯ ಸೇವೆ ಸಮರ್ಪಕ ಎಂದು ಇವರಿಗೆ ಕಂಡುಬಂದಿತು. ಆ ಅಕೌಂಟೆಂಟ್ ಅಂತೂ ಬೀದಿಬದಿಯಲ್ಲಿ ತರಕಾರಿ ಮಾರುವವರನ್ನೂ ಸಹ ಸಂಪರ್ಕಿಸಿ ಖಾತೆ ತೆರೆಸುತ್ತಿದ್ದರು. ಬ್ಯಾಂಕಿಗೆ ಬಂದ ಓದು ಬರಹ ಬಾರದವರಿಗೆ ತಾನೇ ಚಲನ್ ಭರ್ತಿ ಮಾಡಿ ಬರೆದುಕೊಡುವುದು ಹಾಗೂ ಇತರೆ ಸಹಾಯ ಮಾಡುತ್ತಿದ್ದುದನ್ನು ಇವರು ಗಮನಿಸಿದರು. ಅವರಿಗೆ ಆತನ ಸೇವಾ ಮನೋಭಾವ ಬಹಳ ಇಷ್ಟವಾಯಿತು.

ಒಂದು ದಿನ ಭೈರಪ್ಪನವರು ಬೆಳಗ್ಗೆ ಹತ್ತು ಗಂಟೆಗೆ ಒಂದು ಕೆಲಸಕ್ಕಾಗಿ ಬ್ಯಾಂಕಿಗೆ ಹೋದಾಗ ದೊಡ್ಡ ಸರತಿ ಸಾಲು ಕಂಡರು. ನಗದು (ಕ್ಯಾಶ್) ಕೌಂಟರ್ ಇನ್ನೂ ತೆರೆದಿರಲಿಲ್ಲ. ಬ್ಯಾಂಕಿನ ಮ್ಯಾನೇಜರ್ ಬಂದು ನಮ್ಮ ಅಕೌಂಟೆಂಟ್ ಇನ್ನೇನು ಬರುತ್ತಾರೆ ಎಂದು ಜನರಿಗೆ ತಿಳಿಸುತ್ತಿದ್ದರು. ಸುಮಾರು 12 ನಿಮಿಷ ತಡವಾಗಿ ಬಂದ ಅಕೌಂಟೆಂಟ್ ತಾನು ಬರುತ್ತಿದ್ದ ಬಸ್ ಕೆಟ್ಟು ನಿಂತಿದ್ದರಿಂದ ಬರುವುದು ತಡವಾಯಿತು, ಆಟೋ ಸಹ ಸಿಗುವುದು ತಡವಾಯಿತು ಎಂದು ಎಲ್ಲರ ಕ್ಷಮಾಪಣೆ ಕೇಳಿ, ಓಡಿ ಹೋಗಿ ನಗದಿನ ಕೌಂಟರ್ ತೆರೆದರು. ಭೈರಪ್ಪನವರ ಮುಂದೆ ಸರದಿಯಲ್ಲಿ ನಿಂತಿದ್ದ ಒಬ್ಬರು ನೋಡಿ ಎಂತಹ ವಿನಯಪೂರ್ವಕ ನಡವಳಿಕೆ ಇವರದ್ದು, ಎಷ್ಟೇ ಆಗಲಿ, ದೊಡ್ಡವರ ಮಗ, ತಂದೆಯ ಗುಣ ಅವರಿಗೆ ಬಂದಿದೆ ಎಂದರಂತೆ. ಆಗ ಭೈರಪ್ಪನವರು, ಇವರು ಯಾರ ಮಗ ಎಂದು ಮುಂದೆ ನಿಂತಿದ್ದವರನ್ನು ಕೇಳಿದಾಗ, ನಿಮಗೆ ಗೊತ್ತಿಲ್ಲವೇ! ಅವರು ಲಾಲ್ ಬಹದ್ದೂರ್ ಶಾಸ್ತ್ರಿಯವರ ಮಗ ಎಂದರಂತೆ. ಆಗ ಇವರಿಗೆ ಆತನನ್ನು ಮೊದಲೇ ಎಲ್ಲೋ ನೋಡಿದ ಹಾಗಿದೆ ಎಂದುಕೊಂಡಿದ್ದಕ್ಕೆ ಉತ್ತರ ಸಿಕ್ಕಿತು. ಮಗನ ಮುಖ ತಂದೆಯಂತೆಯೇ ಇತ್ತು. ತಮ್ಮ ಕೆಲಸದ ನಂತರ ಮನೆಗೆ ತೆರಳಿದ ಭೈರಪ್ಪನವರು ಸಂಜೆ ಮತ್ತೆ ಬ್ಯಾಂಕಿಗೆ ಹೋಗಿ ಆತನ ಮುಂದೆ ಕುಳಿತಾಗ ಆತ ಸೌಜನ್ಯದಿಂದ ಎದ್ದು ನಿಂತರು. ಭೈರಪ್ಪನವರು ಮಾತನಾಡುತ್ತಾ ನೀವು ಬೆಳಗ್ಗೆ ತಡವಾಗಿ ಬಂದಿರಿ. ನೀವು ಏಕೆ ಒಂದು ಸ್ಕೂಟರ್ ತೆಗೆದುಕೊಳ್ಳಬಾರದು ಎಂದು ಕೇಳಿದರು. ಅದಕ್ಕೆ ಆತ ನಾನು ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಹಾಕಿದ್ದೇನೆ, ಮಂಜೂರಾಗಿದೆ. ಸ್ಕೂಟರ್ ಕಂಪನಿಯಲ್ಲಿ ನನ್ನ ಸರದಿ ಬಂದಾಗ ನನಗೆ ಸ್ಕೂಟರ್ ಸಿಗುತ್ತದೆ ಎಂದರಂತೆ.

ಇದು ದೊಡ್ಡವರ ಗುಣ. ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಕೇಂದ್ರದ ಮಂತ್ರಿಗಳಾಗಿದ್ದಾಗಲೂ ತಮ್ಮ ಮಕ್ಕಳಿಗೆ ಒಂದು ದಿನವೂ ಸರ್ಕಾರಿ ಕಾರು ಹತ್ತಲು ಅವಕಾಶ ಕೊಟ್ಟಿರಲಿಲ್ಲವಂತೆ. ಮಕ್ಕಳು ಶಾಲೆಗೆ ಸರ್ಕಾರಿ ಬಸುಗಳಲ್ಲಿ ಹೋಗಬೇಕಾಗಿತ್ತು ಶಾಲಾ ಕಾಲೇಜುಗಳಲ್ಲಿ ತಮ್ಮ ಮಕ್ಕಳ ಹೆಸರಿನ ಮುಂದೆ ಶಾಸ್ತ್ರಿ ಎಂದು ಸೇರಿಸಿರಲಿಲ್ಲವಂತೆ. ಓದಿನ ನಂತರ ಕೆಲಸ ಬೇಕಾದರೆ ಪತ್ರಿಕೆಗಳಲ್ಲಿ ಜಾಹೀರಾತು ನೋಡಿ ಅರ್ಜಿ ಹಾಕಿಕೊಳ್ಳಿ ಎಂದು ಮಕ್ಕಳಿಗೆ ಹೇಳುತ್ತಿದ್ದರಂತೆ. ಇಂತಹ ವಿಷಯ ಓದಿದಾಗ ನಮಗೆ ಶಾಸ್ತ್ರಿಯವರ ಬಗೆಗಿನ ಗೌರವ ಹೆಚ್ಚಾಗುವುದೇ ಅಲ್ಲದೇ ಅಂತಹ ನಾಯಕ ಈ ದೇಶದಲ್ಲಿ ಇದ್ದರು ಎಂದಾಗ ಅವರ ಬಗ್ಗೆ ಹೆಮ್ಮೆ ಮೂಡುತ್ತದೆ.

ಇಂಥವರು ದೇಶದ ನೋಟುಗಳಿದ್ದಂತೆ. ಅವುಗಳ ಮೌಲ್ಯ ಜಾಸ್ತಿ. ಅದು ಎಂದಿಗೂ ನಾಣ್ಯದಂತೆ ಸದ್ದು ಮಾಡುವುದಿಲ್ಲ ಇಂಥ ವಿಷಯಗಳೂ ಹೆಚ್ಚು ಪ್ರಚಾರವಾಗದಂತೆ ಅವರು ನೋಡಿಕೊಳ್ಳುತ್ತಿದ್ದರು. ಇಂದು ಸಣ್ಣ ಚುನಾವಣೆಯಲ್ಲಿ ಗೆದ್ದ ಜನಪ್ರತಿನಿಧಿ ಮಾಡುವ ಆರ್ಭಟ ಸೋಜಿಗ ಉಂಟುಮಾಡುತ್ತದೆ. ಮತ್ತಷ್ಟು ಶಾಸ್ತ್ರಿಯಂಥವರು ಹುಟ್ಟಬಾರದೇ?

ಶ್ರೀಮಂತರಿಗಲ್ಲ, ಬಡವರಿಗಾಗಿ 'ಗ್ಯಾರಂಟಿ'

ವಿಜಯಪುರ, ಫೆ.20– ಗ್ಯಾರಂಟಿ ಯೋಜನೆಗಳ ಪ್ರಯೋಜನಗಳು ಬಡವರು ಮತ್ತು ನಿರ್ಗತಿಕರಿಗೆ ಮಾತ್ರ ತಲುಪಬೇಕು, ಶ್ರೀಮಂತರಿಗೆ ಅಲ್ಲ ಎಂದು ಸಚಿವ ಎಂ.ಬಿ.ಪಾಟೀಲ್ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೃಹಲಕ್ಷ್ಮಿ ಯೋಜನೆಯನ್ನು ಉಳ್ಳವರು ತೆಗೆದುಕೊಳ್ಳಬಾರದು, ಬಡವರಿಗೆ ಹೋಗಬೇಕು. ಶ್ರೀಮಂತರನ್ನು ಯೋಜನೆಯಿಂದ ಹೊರಗಿಡಲು ಸರ್ಕಾರಿ ಮಟ್ಟದಲ್ಲಿ ಯಾವುದೇ ಚರ್ಚೆ ಇಲ್ಲ. ಆದರೆ, ಶ್ರೀಮಂತರು, ಉಳ್ಳವರು ಯೋಜನೆ ಪ್ರಯೋಜನಗಳನ್ನು ಸ್ವಯಂ ಪ್ರೇರಣೆಯಿಂದ ಬಿಡಬೇಕೆಂಬುದು ನನ್ನ ಅಭಿಪ್ರಾಯ. ಒಂದು ವೇಳೆ ಬಿಡದಿದ್ದರೆ, ಸರ್ಕಾರವೇ ಶ್ರೀಮಂತರನ್ನು ಗೃಹಲಕ್ಷ್ಮಿ ಯೋಜನೆಯಿಂದ ತೆಗೆದುಹಾಕುವ ಕೆಲಸ ಮಾಡಬೇಕು. ಯೋಜನೆಯಿಂದ ಇನ್ನೂ ಹೊರಗುಳಿದಿರುವ ಬಡವರನ್ನು ಸೇರ್ಪಡೆಗೊಳಿಸಬೇಕೆಂದರು. ಇದೇ ವೇಳೆ ಶೋಭಾ ಕರಂದ್ಲಾಜೆ ಹೇಳಿಕೆಗೆ ಪ್ರತಿಕ್ರಿಯಿಸಿ, ನಮ್ಮ ಗ್ಯಾರಂಟಿಗಳನ್ನು ಮೋದಿ ಕಾಪಿ ಮಾಡುತ್ತಿದ್ದಾರೆ. ನಮ್ಮ ಗ್ಯಾರಂಟಿ ನಡೆಯಲ್ಲ ಎಂದರೆ ನಮ್ಮ ಗ್ಯಾರಂಟಿಗಳನ್ನು ಕಾಪಿ ಮಾಡುತ್ತಿರೋದು ಯಾಕೆ? ಬಡವರಿಗೆ, ಮಹಿಳೆಯರಿಗೆ ಸಶಕ್ತರನ್ನಾಗಿ ಮಾಡಲು ನಾವು ಗ್ಯಾರಂಟಿ ಕೊಟ್ಟಿದ್ದೇವೆ. ಅವುಗಳು ಮುಂದುವರಿಯಲಿವೆ, ಅಭಿವೃದ್ಧಿ ಆಗಲಿದೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಗುತ್ತಿಗೆದಾರರ ಬಾಕಿ ಹಣ ವಿಚಾರವಾಗಿ ಮಾತನಾಡಿ, ಅನಧಿಕೃತವಾಗಿ ಗುತ್ತಿಗೆ ನೀಡಿದ್ದಾರೆ. ಅದಕ್ಕೆ ಕಾಂಗ್ರೆಸ್ ಕಾರಣ ಅಲ್ಲ. ಬಜೆಟ್ ಇಲ್ಲದೆ ಟೆಂಡರ್ ಕರೆದು ಕಮಿಷನ್ ಹೊಡೆದು ಹೋಗಿದ್ದಾರೆ. ಅವರ ಪಾಪದ ಕೊಡ ನಾವು ಹೊರುತ್ತಿದ್ದೇವೆ. ನೂರು ರೂಪಾಯಿ ಅನುದಾನ ಇದ್ದರೆ, ಸಾವಿರ ರೂಪಾಯಿಯಷ್ಟು ಟೆಂಡರ್ ಕೊಟ್ಟಿದ್ದಾರೆ. ಇನ್ನೂ ವೈದ್ಯಕೀಯ ಇಲಾಖೆಯಲ್ಲಿ ದೊಡ್ಡ ಹಗರಣ ಆಗಿದೆ. ಬಜೆಟ್‌ಗಿಂತ ಹೆಚ್ಚಿಗೆ ಕಾಮಗಾರಿ ಕೊಟ್ಟಿದ್ದು ಯಾರು, 1 ಲಕ್ಷ ಕೋಟಿ ಹಣದ ಕಾಮಗಾರಿ ಟೆಂಡರ್ ಕರೆದಿದ್ದವರು ಯಾರು, ಟೆಂಡರ್ ಕರೆದು ಕಮಿಷನ್ ಪಡೆದು ಹೋಗಿದ್ದಾರೆ. ಅಕ್ರಮವಾಗಿ ಕಾನೂನು ಬಾಹಿರವಾಗಿ ಸಚಿವ ಸಂಪುಟದ ಅನುಮೋದನೆ ಪಡೆಯದೇ ಟೆಂಡರ್ ಕರೆದು ಕಮಿಷನ್ ಪಡೆದಿದ್ದಾರೆಂದು ಪರೋಕ್ಷವಾಗಿ ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಮೀನಾಕ್ಷಿ ನೇಗಿ ಕರ್ನಾಟಕ ಅರಣ್ಯ ಪಡೆಗಳ ಮೊದಲ ಮಹಿಳಾ ಮುಖ್ಯಸ್ಥೆ

ಬೆಂಗಳೂರು, ಫೆ.20– ಕರ್ನಾಟಕ ಅರಣ್ಯ ಪಡೆಗಳ ಮೊದಲ ಮಹಿಳಾ ಮುಖ್ಯಸ್ಥೆಯಾಗಿ ಹಿರಿಯ ಐಎಫ್‌ಎಸ್ ಅಧಿಕಾರಿ ಮೀನಾಕ್ಷಿ ನೇಗಿ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.



1989ರ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಎಫ್‌ಎಸ್ ಅಧಿಕಾರಿಯಾಗಿರುವ ಮೀನಾಕ್ಷಿ ನೇಗಿ ಅವರನ್ನು ಅರಣ್ಯ ಪಡೆಗಳ ಮುಖ್ಯಸ್ಥರಾಗಿ ನೇಮಕ ಮಾಡಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಇಂದು ಆದೇಶ ಹೊರಡಿಸಿದೆ.

ಮೀನಾಕ್ಷಿ ನೇಗಿ ಅವರು ಮೂಲತಃ ಉತ್ತರಾಖಂಡದವರಾಗಿದ್ದು, ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಈಗ ಆ ಸೇವೆಯಿಂದ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದು, ಇದೀಗ ಕರ್ನಾಟಕದ ಅರಣ್ಯ ಪಡೆಗಳ ಮುಖ್ಯಸ್ಥರಾಗಿ ನೇಮಕ ಮಾಡಲಾಗಿದೆ.

ಕರ್ನಾಟಕ ಕೇಡರ್‌ನ ಅಧಿಕಾರಿಯಾಗಿ 35 ವರ್ಷಗಳಿಂದ ಅವರು ಸೇವೆ ಸಲ್ಲಿಸುತ್ತಿದ್ದಾರೆ. ದಕ್ಷ ಅಧಿಕಾರಿಯೆಂದು ಹೆಸರು ಮಾಡಿರುವ ಮೀನಾಕ್ಷಿ ನೇಗಿ ಬಳ್ಳಾರಿ, ಚಿಕ್ಕಮಗಳೂರು, ಮಂಡ್ಯದಲ್ಲಿ ಡಿಸಿಎಫ್ ಆಗಿ ಕೆಲಸ ಮಾಡಿದ್ದಾರೆ. ಬಳಿಕ ಕೇಂದ್ರ ಸರ್ಕಾರದ ಸೇವೆಗೆ ನಿಯೋಜನೆಗೊಂಡ ಅವರು ಆಯುಷ್ ಇಲಾಖೆ ಜಂಟಿ ಕಾರ್ಯದರ್ಶಿಯಾಗಿದ್ದರು.

ಕಳೆದ 2 ವರ್ಷಗಳಿಂದ ಅವರು ಕೇಂದ್ರ ಮಹಿಳಾ ಆಯೋಗದ ಸದಸ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಮೀನಾಕ್ಷಿ ಅವರ ಪತಿ ವಿಜಯ ಶರ್ಮಾ ಕೂಡ ಕರ್ನಾಟಕ ಕೇಡರ್‌ನ ಐಎಫ್‌ಎಸ್ ಅಧಿಕಾರಿಯಾಗಿದ್ದರು ಮತ್ತು ಕಳೆದ ಜನವರಿಯಲ್ಲಿ ಸೇವೆಯಿಂದ ನಿವೃತ್ತರಾಗಿದ್ದಾರೆ.

ಮಹಾ ಕುಂಭಮೇಳ 'ಮುಕ್ತಿಮೇಳ': ಸಿಎಂ ಮಮತಾ ಬ್ಯಾನರ್ಜಿಗೆ ಪಶ್ಚಿಮಬಂಗಾಳ ರಾಜ್ಯಪಾಲರ ತಿರುಗೇಟು!

ಕೊಲ್ಕತ್ತಾ, ಫೆ20– ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳವನ್ನು ಮುಕ್ತಿ ಮೇಳ' ಎಂದು ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ.ಆನಂದ್ ಬೋಸ್ ಹೇಳಿದ್ದಾರೆ. ಈ ಮೂಲಕ ಕುಂಭಮೇಳ ಮೃತ್ಯುಕುಂಭ ಎಂದಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ತಿರುಗೇಟು ನೀಡಿದ್ದಾರೆ.



ಆನಂದ್ ಬೋಸ್ ಮಮತಾ ಬ್ಯಾನರ್ಜಿ

ರಾಷ್ಟ್ರ ರಾಜಧಾನಿಯಲ್ಲಿ ನಡೆದ ಕಾಲ್ತುಳಿತದಲ್ಲಿ 18 ಜನರ ಸಾವನ್ನು ಉಲ್ಲೇಖಿಸಿ ಮಹಾ ಕುಂಭಮೇಳವನ್ನು ಮೃತ್ಯು ಕುಂಭ ಎಂದು ಮಮತಾ ಬ್ಯಾನರ್ಜಿ ಹೇಳಿದ್ದರು.

ಈ ಹೇಳಿಕೆ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯಪಾಲರು, ಕುಂಭಮೇಳ ಆಚರಣೆಯಲ್ಲಿ ವಿನಮ್ರನಾಗಿ ಪಾಲ್ಗೊಳ್ಳಲು ಅಲ್ಲಿಗೆ ಹೋಗಿದ್ದೆ. ಕುಂಭಮೇಳ ಮುಕ್ತಿ ಮೇಳ, ಮೃತ್ಯುಂಜಯ ಮೇಳ ಎಂದು ಬಣ್ಣಿಸಿದರು. ಆನಂದ್ ಬೋಸ್ ಕೂಡಾ ಪ್ರಯಾಗ್‌ರಾಜ್‌ಗೆ ತೆರಳಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದ್ದರು.


ನಿಮಗೆ ಗೊತ್ತಾ, ಕುಂಭಮೇಳವನ್ನು ಭಾರತ ಹೊಂದಿರುವ ಶ್ರೇಷ್ಠ ಸಂಪ್ರದಾಯದ ಪ್ರತೀಕವಾಗಿ ನೋಡುತ್ತೇನೆ. ಕುಂಭವು ದೇವರೊಂದಿಗಿನ ಸಹಭಾಗಿತ್ವವಾಗಿದೆ. ಜನಸಾಮಾನ್ಯರು ಸ್ವಯಂ ಪ್ರೇರಣೆಯಿಂದ ಅಲ್ಲಿಗೆ ಬರುತ್ತಿದ್ದಾರೆ.

ಲಕ್ಷ ಲಕ್ಷ ಜನ ತಾವಾಗಿಯೇ ಅಲ್ಲಿಗೆ ಬಂದಿದ್ದರು. ಇದು ಆಕಾಶದೊಂದಿಗೆ ಭೂಮಿ, ದೇವರೊಂದಿಗೆ ಮಾನವ ಮತ್ತು ಆಂತರಿಕ ಪ್ರಪಂಚವನ್ನು ಬಾಹ್ಯ ಪ್ರಪಂಚದೊಂದಿಗೆ ಸಂಪರ್ಕಿಸುವ ಕಾಮನ ಬಿಲ್ಲಿನ ಸೇತುವೆ. ಭಾರತದ ಸಂಪ್ರದಾಯ ಮತ್ತು ಸಂಸ್ಕೃತಿಯ ಶ್ರೇಷ್ಠತೆ ಎಂದು ಭಾವಿಸುತ್ತೇನೆ ಎಂದರು.

ಯಾವುದೇ ವಿವಾದ ಹುಟ್ಟಿಕೊಳ್ಳಲು ನಾನು ಬಯಸುವುದಿಲ್ಲ. ಇದು ಪ್ರಜಾಸತ್ತಾತ್ಮಕ ವ್ಯವಸ್ಥೆ. ಯಾವುದೇ ಪರಿಸ್ಥಿತಿ ಬಗ್ಗೆ ತನ್ನದೇ ಆದ ಅಭಿಪ್ರಾಯ ವ್ಯಕ್ತಪಡಿಸಲು ಮುಖ್ಯಮಂತ್ರಿ ಅರ್ಹರಿದ್ದಾರೆ. ಇಂತಹ ಪ್ರಜಾಪ್ರಭುತ್ವದ ಸೌಂದರ್ಯನನ್ನು ನಾನು ಸ್ವಾಗತಿಸುತ್ತೇನೆ. ಆದರೆ, ರಾಜ್ಯಪಾಲನಾಗಿ ಯಾವುದೇ ಪ್ರತಿಕ್ರಿಯೆ ನೀಡಲು ಬಯಸುವುದಿಲ್ಲ. ರಾಜಕೀಯ ಹೇಳಿಕೆಗಳಿಗೆ ಸಂಬಂಧಿಸಿದಂತೆ ನಾನು ಯಾವುದೇ ಪ್ರತಿಕ್ರಿಯೆಗಳನ್ನು ನೀಡುವುದಿಲ್ಲ ಎಂದರು.

ಸ್ಕೂಟರ್‌ಗೆ ಬುಲೆಟ್ ಡಿಕ್ಕಿ: ಗೃಹಿಣಿ ಸಾವು

ಮೈಸೂರು,ಫೆ.20(ಬಿಎಲ್‌ಯು)–ಬುಲೆಟ್, ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಗೃಹಿಣಿ ಸಾವನ್ನಪ್ಪಿದ ಘಟನೆ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿ ನಿನ್ನೆ ರಾತ್ರಿ ಸಂಭವಿಸಿದೆ. ನಗರದ ಶಾದನಹಳ್ಳಿ ವಾಸಿ ಅಭಿಲಾಷ(26) ಮೃತಪಟ್ಟ ದುರ್ದೈವಿಯಾಗಿದ್ದಾರೆ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಅಭಿಲಾಷ ನಿನ್ನೆ ರಾತ್ರಿ ಸ್ಕೂಟರ್‌ನಲ್ಲಿ ಮನೆಗೆ ಹೋಗುವಾಗ ಈ ದುರ್ಘಟನೆ ಸಂಭವಿಸಿದೆ. ಜೆ.ಕೆ.ಟೈರ್ಸ್ ಎದುರಿನ ಚಾಮುಂಡೇಶ್ವರಿ ಬಡಾವಣೆಗೆ ಹೋಗಲು ಬಲಕ್ಕೆ ತಿರುಗಿದಾಗ ಕೆಆರ್‌ಎಸ್ ರಸ್ತೆಯಲ್ಲಿ ವೇಗವಾಗಿ ಬಂದ ಬುಲೆಟ್ ಡಿಕ್ಕಿ ಹೊಡೆದಿದೆ. ಅಪಘಾತ ಸ್ಥಳದಲ್ಲಿದ್ದ ಜನರು ಬುಲೆಟ್‌ನಲ್ಲಿ ಸಾಗುತ್ತಿದ್ದ ಮೂವರ ಮೇಲೆ ಹಲ್ಲೆ ನಡೆಸಿದ್ದಾರೆ. ಈ ವೇಳೆ ಬುಲೆಟ್ ಬಿಟ್ಟು ಮೂವರು ಅಲ್ಲಿಂದ ಪರಾರಿಯಾಗಿದ್ದಾರೆ. ತಕ್ಷಣವೇ ಆಂಬುಲೆನ್ಸ್ ಕರೆಸಿದ ಸಾರ್ವಜನಿಕರು ಗಾಯಗೊಂಡಿದ್ದ ಅಭಿಲಾಷರನ್ನು ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಿದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅಭಿಲಾಷ ಮೃತಪಟ್ಟಿದ್ದಾರೆ. ಪ್ರಕರಣ ದಾಖಲಿಸಿಕೊಂಡ ವಿವಿ ಪುರಂ ಸಂಚಾರಿ ಪೊಲೀಸರು ಅಪಘಾತ ಎಸಗಿದ ಪ್ರೇಮ್‌ಕುಮಾರ್, ಸುಜಿತ್ ಹಾಗೂ ಮತ್ತೊಬ್ಬನನ್ನು ವಶಕ್ಕೆ ಪಡೆದು, ವಿಚಾರಣೆ ಮಾಡುತ್ತಿದ್ದಾರೆ.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಶುಕ್ರವಾರ 21 ಫೆಬ್ರವರಿ 2025

ಹಾಸನ ಮಿತ್ರ

ಕುಟುಂಬದೊಂದಿಗೆ ಬಾಂಧವ್ಯ ಅವಶ್ಯ

ಹಾಸನ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಅಭಿಮತ



ಹಾಸನ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಉದ್ಘಾಟಿಸಿದರು.

ಹಾಸನ: ಕುಟುಂಬದೊಂದಿಗೆ ಉತ್ತಮ ಬಾಂಧವ್ಯ ವೃದ್ಧಿ, ಹೊಂದಾಣಿಕೆ ಅವಶ್ಯ. ಆದರೆ ಇಂದಿನ ದಿನಮಾನಗಳಲ್ಲಿ ಸಣ್ಣ ಸಣ್ಣ ಮನಸ್ತಾಪದಿಂದ ಹೊಂದಾಣಿಕೆ ಇಲ್ಲದೆ ಕೌಟುಂಬಿಕ ದೌರ್ಜನ್ಯ ನಡೆಯುತ್ತಿವೆ ಎಂದು ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಸಂಯುಕ್ತಾಶ್ರಯದಲ್ಲಿ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ–2005 ಅನುಷ್ಠಾನ ಕುರಿತು ಓರಿಯಂಟೇಷನ್ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹಿಂದಿನ ಕಾಲದಲ್ಲಿ ವಿಚ್ಛೇದನ ಪ್ರಕರಣ ವಿರಳವಾಗಿದ್ದವು. ಆದರೆ, ಇತ್ತೀಚಿನ ದಿನಗಳಲ್ಲಿ ಪಾಶ್ಚಾತ್ಯ ದೇಶಗಳಿಗಿಂತಲೂ ನಮ್ಮಲ್ಲಿ ಹೆಚ್ಚಾಗುತ್ತಿದೆ ಎಂದರು.

ತಂದೆ ತಾಯಿ ಒಪ್ಪಿದವರನ್ನು ವಿವಾಹವಾಗಬೇಕು. ಅವರು ಹುಡುಕಿದವರ ಕುರಿತು ನಕಾರಾತ್ಮಕ ಆಲೋಚನೆ ಮಾಡಬಾರದು. ವಿವಾಹವೆಂಬುದು ಕೇವಲ ಇಬ್ಬರು ವ್ಯಕ್ತಿಗಳ ನಡುವೆ ಅಲ್ಲ. ಎರಡು ಕುಟುಂಬಗಳೊಂದಿಗೆ ಎಂಬುದನ್ನು ಮರೆಯಬಾರದು. ಅವರ ಆಚಾರ ವಿಚಾರಗಳು ಹೊಂದಾಣಿಕೆ ಅವಶ್ಯಕ ಎಂದು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಮಾತನಾಡಿ, ಹೆಣ್ಣು ಅಬಲೆ ಅಲ್ಲ, ಸಬಲಳಾಗಿದ್ದಾಳೆ. ಆರ್ಥಿಕವಾಗಿಯೂ ಸ್ವಾತಂತ್ರ್ಯಳಾಗಿದ್ದಾಳೆ, ಕುಟುಂಬದಲ್ಲಿ ಹಿರಿಯರ ಅನುಭವದ ಮಾತುಗಳನ್ನು ಕೇಳಿ ಅದರಂತೆ ನಡೆದುಕೊಂಡರೆ ಕೋರ್ಟ್‌ಗಳಿಗೆ ಹೋಗುವುದನ್ನು ತಪ್ಪಿಸಬಹುದು ಎಂದರು.

ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ಎಎಸ್‌ಪಿ ವೆಂಕಟೇಶ್ ನಾಯ್ಡು, ವಕೀಲರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಟಿ.ಪ್ರಸನ್ನ, ಪ್ರೇರಣಾ ವಿಕಾಸ ವೇದಿಕೆಯ ರೂಪಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಧರಣಿಕುಮಾರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕೆ.ಸಿ.ಜ್ಯೋತಿಲಕ್ಷ್ಮಿ ಇತರರು ಉಪಸ್ಥಿತರಿದ್ದರು.

ಮಹಾ ಕುಂಭಮೇಳಕ್ಕೆ ಹೋಗುತ್ತಿದ್ದ ಕಾರು ಅಪಘಾತ: ಮಗ ಸಾವು, ತಾಯಿ ಗಂಭೀರ

ಹಾಸನ: ಕುಂಭಮೇಳಕ್ಕೆ ಹೋಗುವ ವೇಳೆ ಸಂಭವಿಸಿದ ಕಾರು ಅಪಘಾತದಲ್ಲಿ ಮಗ ಸಾವನ್ನಪ್ಪಿದ್ದು, ತಾಯಿ ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದರೆ, ಉಳಿದ ಮೂವರು ಕುಟುಂಬದವರಿಗೆ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ಉತ್ತರ ಪ್ರದೇಶದ ಕಾಶಿ–ವಾರಣಾಸಿ ನಡುವೆ ಇಂದು ಬೆಳಗ್ಗೆ ನಡೆದಿದೆ.



ಮೃತಪಟ್ಟ ನಿತಿನ್

ಹಾಸನ ಮೂಲದ ನಿತಿನ್ ಅಲಿಯಾಸ್ ಯಶು (32) ಮೃತಪಟ್ಟ ಯುವಕ. ಪುಷ್ಪಲತಾ (62) ಹಾಗೂ ಪ್ರಜ್ವಲ್, ಹರೀಶ್, ಶಕುಂತಲಾ ಗಂಭೀರವಾಗಿ ಗಾಯಗೊಂಡಿದ್ದಾರೆ. ಕಾಶಿ ವಿಶ್ವನಾಥನ ದರ್ಶನ ಮುಗಿಸಿ ಕುಂಭಮೇಳಕ್ಕೆ ಹೋಗುವ ಮಾರ್ಗ ಮಧ್ಯೆ ಅಪಘಾತ ಸಂಭವಿಸಿದೆ.

ಹಾಸನ ಜಿಲ್ಲೆಯ ಶ್ರವಣಬೆಳಗೊಳ ಸಮೀಪದ ಕುಂಬೇನಹಳ್ಳಿ ಗ್ರಾಮದ ಮೃತ ನಿತಿನ್, ತಾಯಿ ಪುಷ್ಪಲತಾ, ದೊಡ್ಡಮ್ಮ ಶಕುಂತಲಾ, ಸಹೋದರ ಪ್ರಜ್ವಲ್, ಸೋದರಮಾವ ಹರೀಶ್, ಫೆ.15ರಂದು ನಿತಿನ್ ಖರೀದಿಸಿದ್ದ ಹೊಸ ಕಾರಿನಲ್ಲಿಯೇ ಕುಂಭಮೇಳಕ್ಕೆಂದು ಹೊರಟಿದ್ದರು. ಫೆ.16ರಂದು ಕೊಲ್ಲಾಪುರದ ಮಹಾಲಕ್ಷ್ಮಿ ದೇವಾಲಯಕ್ಕೆ ಭೇಟಿ ನೀಡಿ, ಅಲ್ಲಿಂದ ಕಾಶಿ ವಿಶ್ವನಾಥನ ದರ್ಶನ ಮುಗಿಸಿ ಇಂದು ಬೆಳಗಿನಜಾವ ವಾರಣಾಸಿ ಮೂಲಕ ಪ್ರಯಾಗ್‌ರಾಜ್‌ಗೆ ಹೋಗುತ್ತಿದ್ದರು.

ಮಂಜು ಮುಸುಕು ಅಪಘಾತಕ್ಕೆ ಕಾರಣ: ಬೆಳ್ಳಂಬೆಳಗ್ಗೆ ಮಂಜು ಮುಸುಕಿದ್ದರಿಂದ ಕಾರಿನ ಮುಂಭಾಗದಲ್ಲಿ ಚಲಿಸುತ್ತಿದ್ದ ಕಂಟೈನರ್ ಸರಿಯಾಗಿ ಕಾಣಿಸದ ಹಿನ್ನೆಲೆ ಕಾರು ಹಿಂಭಾಗದಿಂದ ಕಂಟೈನರ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನ ಮುಂಭಾಗದಲ್ಲಿ ಕುಳಿತಿದ್ದ ನಿತಿನ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದು, ಮಗನ ಹಿಂಬದಿ ಸೀಟ್‌ನಲ್ಲಿ ಕುಳಿತಿದ್ದ ತಾಯಿಗೆ ಗಂಭೀರವಾಗಿ ಗಾಯವಾಗಿದೆ. ಇನ್ನು ಚಾಲಕ ಪ್ರಜ್ವಲ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ವಾರಣಾಸಿಯ ಬಿ.ಹೆಚ್.ಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಿತಿನ್ ಮೃತದೇಹವನ್ನು ಅದೇ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ ಎಂದು ತಿಳಿದುಬಂದಿದೆ.

ವಿರೋಧ ಮಾಡುವವರ ಮನವೊಲಿಸಿ ರಸ್ತೆಗೆ ಸಿದ್ದರಾಮಯ್ಯ ಹೆಸರಿಡುತ್ತೇವೆ



ಮೈಸೂರು,ಫೆ.20(ಬಿಎಲ್‌ಯು)–ವಿರೋಧ ಮಾಡುವವರ ಮನವೊಲಿಸಿ ಮೈಸೂರಿನ ಕೆಆರ್‌ಎಸ್ ರಸ್ತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುತ್ತೇವೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದ್ದಾರೆ.

ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಸ್ತೆಗೆ ಸಿದ್ದರಾಮಯ್ಯ ಹೆಸರಿಡುವ ಬಗ್ಗೆ ಸಂಸದ ಯದುವೀರ್ ಅವರನ್ನು ಭೇಟಿ ಮಾಡುತ್ತೇವೆ ಎಂದರು. ದಾಸಪ್ಪ ವೃತ್ತದಿಂದ ಒಂಟಿಕೊಪ್ಪಲು ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನದವರೆಗೆ ಮಾತ್ರ ಪ್ರಿನ್ಸೆಸ್ ರಸ್ತೆ ಹೆಸರಿದೆ. ಅಲ್ಲಿಂದ ಮುಂದಕ್ಕೆ ಆ ಹೆಸರಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲರನ್ನು ಭೇಟಿ ಮಾಡಿ, ಮನವೊಲಿಸಿ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುತ್ತೇವೆ ಎಂದು ಶಾಸಕ ಹರೀಶ್‌ಗೌಡ ತಿಳಿಸಿದರು.

ಕೆಸಿಆರ್ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿದ್ದ ವ್ಯಕ್ತಿ ಕೊಲೆ!



ಹೈದರಾಬಾದ್, ಫೆ.20– ಕಾಳೇಶ್ವರಂ ಯೋಜನೆಯ ಭಾಗವಾಗಿ ಮೇಡಿಗಡ್ಡ ಬ್ಯಾರೇಜ್ ನಿರ್ಮಾಣದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಮಾಜಿ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಮತ್ತು ಇತರರ ವಿರುದ್ಧ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ ವ್ಯಕ್ತಿ ಜಯಶಂಕರ್ ಭೂಪಾಲಪಲ್ಲಿ ಪಟ್ಟಣದಲ್ಲಿ ಬುಧವಾರ ಕೊಲೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಹಿಂದೆ ಯಾವುದೇ ರಾಜಕೀಯ ದೃಷ್ಟಿಕೋನವನ್ನು ಪೊಲೀಸರು ತಳ್ಳಿಹಾಕಿದ್ದಾರೆ. 50 ವರ್ಷದ ಎನ್. ರಾಜಲಿಂಗಮೂರ್ತಿ ಎಂಬ ವ್ಯಕ್ತಿಯನ್ನು ಇಬ್ಬರು ಅಪರಿಚಿತ ವ್ಯಕ್ತಿಗಳು ಜಮೀನು ವಿವಾದದ ಹಿನ್ನೆಲೆಯಲ್ಲಿ ಚಾಕುವಿನಿಂದ ಇರಿದು ಕೊಂದಿದ್ದಾರೆ ಎಂದು ಹೇಳಿದ್ದಾರೆ.

ಬುಧವಾರ ರಾತ್ರಿ 7.30ರ ಸುಮಾರಿಗೆ ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಿದ್ದ ರಾಜಲಿಂಗಮೂರ್ತಿ ಅವರನ್ನು ಇಬ್ಬರು ವ್ಯಕ್ತಿಗಳು ಅಡ್ಡಗಟ್ಟಿದ್ದಾರೆ. ಬಳಿಕ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ಬಳಿಕ ಆಸ್ಪತ್ರೆಗೆ ಸಾಗಿಸುವಾಗ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜಲಿಂಗಮೂರ್ತಿ ಅವರು ಈ ಹಿಂದೆ 2023ರ ಅಕ್ಟೋಬರ್‌ನಲ್ಲಿ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು. ಮೇಡಿಗಡ್ಡ ಬ್ಯಾರೇಜ್ ನಿರ್ಮಾಣದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಕೆಸಿಆರ್ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಿಸಲು ಕೋರಿದ್ದರು.

ಕೆಳ ನ್ಯಾಯಾಲಯವು ಕಳೆದ ವರ್ಷ ಡಿಸೆಂಬರ್‌ನಲ್ಲಿ ತಮ್ಮ ವಿರುದ್ಧ ಅರ್ಜಿ ಸಲ್ಲಿಸಲು ಅನುಮತಿ ನೀಡಿ ಆದೇಶ ಹೊರಡಿಸಿದ್ದನ್ನು ಪ್ರಶ್ನಿಸಿ ತೆಲಂಗಾಣದ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ (ಕೆಸಿಆರ್) ಮತ್ತು ಅವರ ಸೋದರಳಿಯ ಮತ್ತು ಮಾಜಿ ಸಚಿವ ಟಿ.ಹರೀಶ್‌ರಾವ್ ಅವರು ತೆಲಂಗಾಣ ಹೈಕೋರ್ಟ್‌ಗೆ ಮೊರೆ ಹೋಗಿದ್ದರು. ಈ ವೇಳೆ ಕೆಳ ನ್ಯಾಯಾಲಯದ ಆದೇಶಕ್ಕೆ ತೆಲಂಗಾಣ ಹೈಕೋರ್ಟ್ ತಾತ್ಕಾಲಿಕ ತಡೆ ನೀಡಿತ್ತು.

ಎನ್.ಆರ್.ಕ್ಷೇತ್ರದ ವಿವಿಧ ರಸ್ತೆ, ಚರಂಡಿ ಕಾಮಗಾರಿಗೆ ತನ್ವೀರ್ ಸೇಠ್ ಗುದ್ದಲಿ ಪೂಜೆ



ಎನ್.ಆರ್.ಕ್ಷೇತ್ರದ ವಿವಿಧ ರಸ್ತೆ, ಚರಂಡಿ ಕಾಮಗಾರಿ ಶಾಸಕ ತನ್ವೀರ್ ಸೇಠ್ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಫೆ.20(ಎಂಕೆ)– ನರಸಿಂಹ ರಾಜ ವಿಧಾನ ಸಭಾ ಕ್ಷೇತ್ರದ ವಿವಿಧ ಸ್ಥಳಗಳಲ್ಲಿ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಶಾಸಕ ತನ್ವೀರ್ ಸೇಠ್ ಗುರುವಾರ ಗುದ್ದಲಿ ಪೂಜೆ ನೆರವೇರಿಸಿದರು.

ಎಸ್‌ಎಫ್‌ಸಿ ಯೋಜನೆಯಡಿ ಬಿಡುಗಡೆಯಾಗಿರುವ ವಿಶೇಷ ಅನುದಾನದಲ್ಲಿ ನಗರಪಾಲಿಕೆ ವಲಯ ಕಚೇರಿ–9ರ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ರಸ್ತೆ ಹಾಗೂ ಚರಂಡಿ ಕಾಮಗಾರಿ, ವಾರ್ಡ್ ನಂಬರ್ 34 ನಗರ ವ್ಯಾಪ್ತಿಯ ಕಲ್ಯಾಣಗಿರಿ ವಾಟರ್ ಟ್ಯಾಂಕ್ ಬಳಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂಬರ್ 35ರ ವ್ಯಾಪ್ತಿಯ ಯಾರಬ್ ಮಸೀದಿ ಬಳಿ ಮುಖ್ಯರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂಬರ್ 36ರ ವ್ಯಾಪ್ತಿಯ ಚರಂಡಿಯ ಅಭಿವೃದ್ಧಿ ಕಾಮಗಾರಿ ಹಾಗೂ ವಾರ್ಡ್ ನಂಬರ್ 35ರ ವ್ಯಾಪ್ತಿಯ ದೊಡ್ಡ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ನಾವು ಭಾರತೀಯರು: ಬಳಿಕ ಮಾಧ್ಯಮಗಳೊಂದಿಗೆ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ ಸಂಬಂಧ ಸಂಸದ ಪ್ರತಾಪ್ ಸಿಂಹ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ಮಾನವೀಯತೆ ಇರೋರು ಈ ರೀತಿ ಮಾತನಾಡಲು ಹೋಗಲ್ಲ. ದೇಶ ವಿಭಜನೆ ಆಗಿ 77 ವರ್ಷಗಳಾಗಿದೆ. ಇಲ್ಲಿ ಉಳಿದುಕೊಂಡವರು ನಾವು ಭಾರತೀಯರು ಎಂಬ ಭಾವನೆಯಿಂದ ಬದುಕುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲೂ ನಮ್ಮ ಸಮುದಾಯದ ಹಲವಾರು ಜನರ ತ್ಯಾಗ ಬಲಿದಾನವಾಗಿದೆ ಎಂದರು.

ದೇಶ ಪ್ರಗತಿಯತ್ತ ಸಾಗುವ ಸಂದರ್ಭದಲ್ಲಿ ಈ ರೀತಿ ಕೀಳು ಮಟ್ಟದ ರಾಜಕೀಯ ಸರಿಯಲ್ಲ. ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ರಾಜಕೀಯ ಮಾಡಬಾರದು. ಅದಕ್ಕೂ ಒಂದು ಇತಿಮಿತಿ ಇರಬೇಕು. ಸಂಸದರಾಗಿದ್ದವರಿಗೆ ಈ ರೀತಿಯ ಹೇಳಿಕೆ ಶೋಭೆ ತರಲ್ಲ. ತಿದ್ದುವಂತಹ ತಪ್ಪಿಗೆ ತಿದ್ದೋಣ ತಿದ್ದಲು ಸಾಧ್ಯವಾಗದ ತಪ್ಪಿಗೆ ಏನು ಕ್ರಮ ವಹಿಸಬೇಕೋ ಅದನ್ನು ಮಾಡಲಾಗುವುದು ಎಂದರು.

ಸಿಲ್ಕ್ ಇಂಡಿಯಾ–2025 ಮೇಳಕ್ಕೆ ಚಾಲನೆ



ಅಭಿವೃದ್ಧಿ ಸಂಸ್ಥೆ ವತಿಯಿಂದ ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಿರುವ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ 'ಸಿಲ್ಕ್ ಇಂಡಿಯಾ–2025' ಮೇಳಕ್ಕೆ ನಟಿ ರಜಿನಿ ಭಾರದ್ವಾಜ್ ಗುರುವಾರ ಚಾಲನೆ ನೀಡಿದರು.

ಮೈಸೂರು, ಫೆ.20(ಜಿಎ)–ಅಭಿವೃದ್ಧಿ ಸಂಸ್ಥೆ ವತಿಯಿಂದ ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಿರುವ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ 'ಸಿಲ್ಕ್ ಇಂಡಿಯ–2025' ಮೇಳಕ್ಕೆ ನಟಿ ರಜಿನಿ ಭಾರದ್ವಾಜ್ ಗುರುವಾರ ಚಾಲನೆ ನೀಡಿದರು.

ಭಾರತದಲ್ಲಿರುವ ಕುಶಲಕರ್ಮಿಗಳು ಮತ್ತು ನೇಕಾರರ ಶ್ರೇಯೋಭಿವೃದ್ಧಿಗಾಗಿ ಆಯೋಜಿಸಿರುವ ಈ ಮೇಳವು ಫೆ.20ರಿಂದ 25ರವರೆಗೆ ನಡೆಯಲಿದೆ. ಅಭಿವೃದ್ಧಿ ಸಂಸ್ಥೆಯು ನೇಕಾರರು ಮತ್ತು ಕುಶಲಕರ್ಮಿಗಳು ಉತ್ಪಾದಿಸುವ ಉತ್ಪನ್ನಗಳಿಗೆ ದೇಶದ ಮುಖ್ಯ ನಗರಗಳಲ್ಲಿ ಮಾರಾಟ ಮೇಳವನ್ನು ಆಯೋಜಿಸುವ ಮೂಲಕ ನೇರವಾಗಿ ಅವರ ಉತ್ಪನ್ನಗಳು ಗ್ರಾಹಕರಿಗೆ ತಲುಪಿಸುವ ವ್ಯವಸ್ಥೆ ಮಾಡುವುದು ಮತ್ತು ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇಕಾರರೇ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ಲಾಭ ಹೆಚ್ಚುಗಳಿಸುವಂತೆ ಮಾಡುವ ಉದ್ದೇಶವನ್ನು ಸಂಸ್ಥೆ ಹೊಂದಿದೆ. ಅದರಂತೆ ಮೈಸೂರಿನಲ್ಲಿ ಮದುವೆ ಸಮಾರಂಭವನ್ನು ಗಮನದಲ್ಲಿಟ್ಟುಕೊಂಡು 6 ದಿನಗಳ ಮೇಳವನ್ನು ಆಯೋಜಿಸಲಾಗಿದೆ.

ಈ ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳು 60 ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ತಸ್ಸರ್ ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಆರಿಣಿ ರೇಷ್ಮೆ ಸೀರೆಗಳು, ಧರ್ಮಾವರಂ ಸೀರೆಗಳು, ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಕೊಲ್ಕತ್ತಾ ಗಣಪತಿ ಸೀರೆಗಳು, ಢಾಕ ಸೀರೆಗಳು, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಬಲ್‌ಚೂರಿ ರೇಷ್ಮೆ, ಮಟ್ಕಾ ಸೀರೆಗಳು, ಪ್ರಿಂಟೆಡ್ ಸೀರೆಗಳು, ಪಶ್ಮೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೆಟಿರಿಯಲ್ಸ್‌ಗಳು ಮತ್ತು ಸೀರೆಗಳು, ಬಾಗಲ್‌ಪುರ್ ರೇಷ್ಮೆ ಸೀರೆ ಮತ್ತು ಡ್ರೆಸ್, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಹೇಶ್ವರಿ ಮತ್ತು ಕೋಟಾ ಸಿಲ್ಕ್, ಟೆಂಪಲ್ ಬಾರ್ಡರ್ ಉಳ್ಳ ಮುಲ್‌ಬಾರಿ ಸಿಲ್ಕ್, ಕೊಲ್ಕೋತ್ತಾ ರೇಷ್ಮೆ ಸೀರೆಗಳು, ಬನಾರಸ್ ಮತ್ತು ಜಮ್‌ದಾನಿ ರೇಷ್ಮೆ, ಶಿಫಾನ್ ಸೀರೆಗಳು, ಬುಟ್ಟಿ ಸೀರೆಗಳು, ಚಂದೇರಿ ಸಿಲ್ಕ್ ಮತ್ತು ಕೈ ಅಚ್ಚಿನ ಸೀರೆಗಳು ಪ್ರದರ್ಶನಗೊಳ್ಳಲಿದೆ. ಇದಲ್ಲದೆ ಕುರ್ತಾ, ಸ್ಟೋಲ್ಸ್, ಶಾಲುಗಳು, ಸಲ್ವಾರ್ ಕಮೀಜ್ ಮತ್ತು ಡ್ರಸ್ ಮೆಟಿರಿಯಲ್‌ಗಳು, ಕುಶನ್ ಕವರ್‌ಗಳು ಮತ್ತು ಬೆಡ್‌ಶೀಟ್‌ಗಳನ್ನು ಈ ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸಿ ಮಾರಾಟ ಮಾಡಲಿದ್ದಾರೆ.

ಈ ವಸ್ತುಗಳನ್ನು ಉತ್ಪಾದಕರೇ ನೇರವಾಗಿ ಗ್ರಾಹಕರಿಗೆ ತಲುಪಿಸುತ್ತಿರುವುದರಿಂದ ವಸ್ತುಗಳು ನ್ಯಾಯಯುತ ಬೆಲೆಯಲ್ಲಿ ದೊರಕುತ್ತವೆ. ಬೆಳಗ್ಗೆ 10.30ರಿಂದ ರಾತ್ರಿ 8.30ರವರೆಗೆ ಪ್ರದರ್ಶಿಸಿ ಮಾರಾಟ ಮಾಡುವರು. ಮೇಳಕ್ಕೆ ಪ್ರವೇಶವನ್ನು ಉಚಿತವಾಗಿ ಕಲ್ಪಿಸಲಾಗಿದೆ.

ಉದಯಗಿರಿ ಪೊಲೀಸ್ ಠಾಣೆ ಗಲಾಟೆ ಪ್ರಕರಣ

ಫೆ.24ರಂದು ಹಿಂದೂಪರ ಸಂಘಟನೆಗಳಿಂದ ಮೈಸೂರು ಚಲೋ



ಮೈಸೂರು, ಫೆ.20(ಬಿಎಲ್‌ಯು)–ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲಿನ ಕಲ್ಲು ತೂರಾಟ ಪ್ರಕರಣ ಖಂಡಿಸಿ ಹಿಂದೂ ಧರ್ಮಿಯರ ಶಕ್ತಿ ಪ್ರದರ್ಶನಕ್ಕೆ ಹಿಂದೂಪರ ಸಂಘಟನೆಗಳು ಫೆ24ರಂದು ಮೈಸೂರು ಚಲೋ ನಡೆಸಲು ತೀರ್ಮಾನಿಸಿವೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದ್ದಾರೆ.

ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ನೇತೃತ್ವದಲ್ಲಿ ಮೈಸೂರು ಚಲೋ ನಡೆಸುತ್ತಿದ್ದು, ಸಾವಿರಾರು ಹಿಂದೂ ಧರ್ಮೀಯರು ಇದರಲ್ಲಿ ಭಾಗಿಯಾಗುವರು ಎಂದು ಹೇಳಿದರು. ಮೈಸೂರಿನ ಗನ್‌ಹೌಸ್ ವೃತ್ತದಿಂದ ಮೆರವಣಿಗೆಯಲ್ಲಿ ತೆರಳಿ ಅರಮನೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ವೇದಿಕೆ ಕಾರ್ಯಕ್ರಮ ಸೇರಲಾಗುವುದು ಎಂದರು. ಕಾನೂನನ್ನು ಕೈಗೆತ್ತಿಕೊಂಡು ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ನಡೆಸಿ ಬೆದರಿಕೆ ಹಾಕಿದವರಿಗೆ ಹಿಂದೂಗಳ ಗಟ್ಟಿಧ್ವನಿ ಮೂಲಕ ಎಚ್ಚರಿಕೆ ನೀಡಲು ಇದನ್ನು ಆಯೋಜಿಸಲಾಗಿದೆ ಎಂದು ಶ್ರೀವತ್ಸ ತಿಳಿಸಿದರು. ಹಿಂದೂ ಧರ್ಮಿಯರ ಶಕ್ತಿ ಪ್ರದರ್ಶನ ಮಾತ್ರವಲ್ಲದೆ ಕಾನೂನು ಮತ್ತು ಸುವ್ಯವಸ್ಥೆಗಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರಿಗೆ ಶಕ್ತಿ ತುಂಬಲಾಗುವುದು. ಈ ಮೂಲಕ ಪೊಲೀಸರು ಯಾವುದೇ ಪ್ರಭಾವವಿಲ್ಲದೆ ಸಮರ್ಥವಾಗಿ ಕಾರ್ಯನಿರ್ವಹಿಸಲು ಸರ್ಕಾರಕ್ಕೆ ಎಚ್ಚರಿಕೆ ನೀಡಲು ಮೈಸೂರು ಚಲೋ ಏರ್ಪಡಿಸಲಾಗಿದೆ ಎಂದು ಹೇಳಿದರು.

ಮೈಸೂರು ಚಲೋನಲ್ಲಿ ರಾಜ್ಯದ ಯಾವ ನಾಯಕರು ಭಾಗವಹಿಸುತ್ತಾರೆ, ಪ್ರತಿಭಟನೆ ಸ್ವರೂಪ ಹೇಗಿರುತ್ತದೆ ಎಂಬ ಹಲವು ವಿಚಾರಗಳನ್ನು ಸಿದ್ಧಪಡಿಸುವ ರೂಪುರೇಷೆ ಪ್ರಕಿಯೆಯಲ್ಲಿದೆ ಎಂದರು.

ಸಿದ್ದರಾಮಯ್ಯ ಮುಗ್ಧರಾದರೆ 14 ನಿವೇಶನ ಏಕೆ ವಾಪಸು ನೀಡುತ್ತಿದ್ದರು

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ, ಮುಗ್ಧರು ಎನ್ನುವುದಾದರೆ 14 ನಿವೇಶನಗಳನ್ನು ಏಕೆ ವಾಪಸು ನೀಡಿದ್ದಾರೆ ಎಂದು ಶ್ರೀವತ್ಸ ಪ್ರಶ್ನಿಸಿದ್ದಾರೆ.

ಸಿದ್ದರಾಮಯ್ಯ ಪರವಾಗಿ ಲೋಕಾಯುಕ್ತರು ವರದಿ ನೀಡುತ್ತಾರೆ ಎಂಬುದನ್ನು ನಾವು ನಿರೀಕ್ಷಿಸಿದ್ದೆವು. ಮುಡಾ ಹಗರಣ ಸಂಬಂಧ ಬಹಳಷ್ಟು ಮಾಹಿತಿಗಳಿದ್ದರೂ ಲೋಕಾಯುಕ್ತರು ಸಿದ್ದರಾಮಯ್ಯ ಪರ ವರದಿ ನೀಡಿದ್ದಾರೆ ಎಂದು ಆರೋಪಿಸಿದರು. ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮುಡಾಗೆ ಬಂದು 141 ಫೈಲ್‌ಗಳನ್ನು ಹೊತ್ತೊಯ್ದರು. ಈ ಕಡತಗಳಲ್ಲಿ ಸಿದ್ದರಾಮಯ್ಯ ಹಗರಣದಲ್ಲಿ ಭಾಗಿಯಾಗಿರುವ ಸಾಕ್ಷಿಗಳಿರುವ ಸಾಧ್ಯತೆ ಇದೆ ಎಂದು ಆಪಾದಿಸಿದರು.

ಲೇವಾದೇವಿಗೆ 'ತ್ರಿವಳಿ' ಅಂಕುಶ: ಮೈಕ್ರೊ ಫೈನಾನ್ಸ್ ಕಿರುಕುಳ ತಡೆಗೆ ಮೂರು ವಿಧೇಯಕ

ಬೆಂಗಳೂರು, ಫೆ.20– ಮೈಕ್ರೊ ಫೈನಾನ್ಸ್ ಹಾಗೂ ಲೇವಾದೇವಿದಾರರಿಂದ ಜನರಿಗೆ ಕಿರುಕುಳ ತಪ್ಪಿಸಲು ಜಾರಿ ಮಾಡಲಾಗಿರುವ ಸುಗ್ರೀವಾಜ್ಞೆಗೆ ಪೂರಕವಾಗಿ ಮುಂದಿನ ಬಜೆಟ್ ಅಧಿವೇಶನದಲ್ಲಿ ಹೊಸ ವಿಧೇಯಕಗಳನ್ನು ಮಂಡಿಸಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಈ ಸಂಬಂಧ ಮೂರು ಕಾನೂನು ತಿದ್ದುಪಡಿ ವಿಧೇಯಕಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದಿಸಿತು.

ಸುಗ್ರೀವಾಜ್ಞೆಗೆ ಅನುಮೋದನೆ ನೀಡುವ ಸಂದರ್ಭದಲ್ಲಿ ರಾಜ್ಯಪಾಲರು ನೀಡಿದ್ದ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ವಿಧೇಯಕಗಳನ್ನು ರೂಪಿಸಲು ಸಂಪುಟ ಸಭೆ ಬಯಸಿತು. ಅಂತೆಯೇ ಕರ್ನಾಟಕ ಅಧಿಕ ಬಡ್ಡಿ ನಿಷೇಧ (ತಿದ್ದುಪಡಿ) ವಿಧೇಯಕ, ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ ಹಾಗೂ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ ಎಂಬ ಮೂರು ವಿಧೇಯಕಗಳನ್ನು ಅಧಿವೇಶನದಲ್ಲಿ ಮಂಡನೆ ಮಾಡಲು ಸಂಪುಟ ಸಭೆ ಒಪ್ಪಿಗೆ ನೀಡಿತು.

ಅಧಿಕ ಬಡ್ಡಿ ನಿಷೇಧ ಅಧಿನಿಯಮದಡಿ ಅಪರಾಧಿಗಳಿಗೆ 10 ವರ್ಷ ಶಿಕ್ಷೆ ಹಾಗೂ 5 ಲಕ್ಷ ರೂ. ದಂಡ ವಿಧಿಸುವ ಅಧಿಕಾರವನ್ನು ಸಹಕಾರ ಸಂಘಗಳ ನಿಬಂಧಕರಿಗೆ ನೀಡಲು ಪ್ರಸ್ತಾಪಿಸಲಾಗಿದೆ. ಹಾಗೆಯೇ ಗಿರವಿದಾರರು ಮತ್ತು ಲೇವಾದೇವಿದಾರರಿಂದ ಬಡವರು, ದುರ್ಬಲರು ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಲು ಕಾಯಿದೆ ಕೆಲ ಸೆಕ್ಷನ್‌ಗಳಲ್ಲಿ ತಿದ್ದುಪಡಿ ತಂದು ಕಾಯಿದೆಯನ್ನು ಬಲಪಡಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಿರುಕುಳ ಪ್ರಕರಣಗಳು ಹೆಚ್ಚಿದ ಹಿನ್ನೆಲೆಯಲ್ಲಿ ಸಾಲಗಾರರ ರಕ್ಷಣೆಗಾಗಿ ಸುಗ್ರೀವಾಜ್ಞೆ ಮೂಲಕ ಹೊಸ ಕಾನೂನು ಜಾರಿಗೊಳಿಸಲು ಸರಕಾರ ನಿರ್ಧರಿಸಿತ್ತು. ಆದರೆ, ಸುಗ್ರೀವಾಜ್ಞೆಗೆ ಅಂಕಿತ ಹಾಕಲು ರಾಜ್ಯಪಾಲರು ಒಪ್ಪದೆ ಮರುಪರಿಶೀಲಿಸಲು ಸಲಹೆ ಮಾಡಿ ಸರಕಾರಕ್ಕೆ ವಾಪಸ್ ಕಳಿಸಿದ್ದರು. ಆದರೆ ಜ್ವಲಂತ ಸಮಸ್ಯೆಯಾಗಿದ್ದ ಲೇವಾದೇವಿದಾರರ ದೌರ್ಜನ್ಯಕ್ಕೆ ಕಡಿವಾಣ ಹಾಕುವ ಸದುದ್ದೇಶವನ್ನು ವಿವರಿಸಿ ಸುಗ್ರೀವಾಜ್ಞೆಯನ್ನು 2ನೇ ಬಾರಿಗೆ ರಾಜ್ಯಪಾಲರಿಗೆ ಸರಕಾರ ಕಳಿಸಿಕೊಟ್ಟಿತ್ತು. ವಿಧಾನಮಂಡಲ ಅಧಿವೇಶನದಲ್ಲಿ ಸಮಗ್ರ ಚರ್ಚೆಯಾಗಲಿ ಎಂಬ ಸೂಚನೆ ಜತೆಗೆ ಕೆಲವೊಂದು ಸಲಹೆ ನೀಡಿ ರಾಜ್ಯಪಾಲರು ವಿಧೇಯಕಕ್ಕೆ ಒಪ್ಪಿಗೆ ನೀಡಿದ್ದರು. ಬಳಿಕ ಸುಗ್ರೀವಾಜ್ಞೆ ಮೂಲಕ ಹೊಸ ಕಾನೂನು ಜಾರಿಗೆ ಬಂದಿತ್ತು.

ಮೂರು ವಿಧೇಯಕ ಯಾವುದು: ಕರ್ನಾಟಕ ಅಧಿಕ ಬಡ್ಡಿ ನಿಷೇಧ (ತಿದ್ದುಪಡಿ) ವಿಧೇಯಕ –2025, ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ –2025, ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ –2025

ಎಪಿಎಂಸಿ ಕಾಯಿದೆಗೆ ಬಲ: ಚಿಲ್ಲರೆ ವ್ಯಾಪಾರವನ್ನೂ ಎಪಿಎಂಸಿಗಳ ವ್ಯಾಪ್ತಿಗೆ ಸೇರ್ಪಡೆ ಮಾಡುವ ಸಂಬಂಧ ಈ ಕುರಿತಂತೆ ಕೋರ್ಟ್ ನಿರ್ದೇಶನವನ್ನು ಗಮನದಲ್ಲಿಟ್ಟುಕೊಂಡು ಕಾಯಿದೆ ತಿದ್ದುಪಡಿ ಪ್ರಸ್ತಾವನೆಗೆ ಸಂಪುಟ ಒಪ್ಪಿತು. ಈ ಸಂಬಂಧ 'ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ ಮತ್ತು ಅಭಿವೃದ್ಧಿ (ತಿದ್ದುಪಡಿ) ವಿಧೇಯಕ –2025' ಅನ್ನು ಸಂಪುಟ ಅನುಮೋದಿಸಿತು.

ಎಪಿಎಂಸಿಗಳ ಅಧಿಕಾರ ವ್ಯಾಪ್ತಿ ಮಾರುಕಟ್ಟೆ ಪ್ರಾಂಗಣವನ್ನು ಮೀರಿ ಅದರ ಹೊರಗೂ ಇರುತ್ತದೆ. ಈ ಹಿನ್ನೆಲೆಯಲ್ಲಿ ಇವುಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆ ಎಂಪಿಎಂಸಿಗಳ ಜವಾಬ್ದಾರಿ ಆಗಿರುತ್ತದೆ. ಈ ನಿಟ್ಟಿನಲ್ಲಿ ಕ್ರಮ ಅಗತ್ಯ. ಜತೆಗೆ ಚಿಲ್ಲರೆ ವಹಿವಾಟಿನ ಸಂಬಂಧ ವರ್ಗೀಕರಣ ಮಾಡುವ ಬಗ್ಗೆ ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ.

ಬ್ಯಾಂಕ್‌ಗೆ ವಂಚನೆ ಪ್ರಕರಣ: ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿಗೆ ಬಿಗ್ ರಿಲೀಫ್



ಬೆಂಗಳೂರು, ಫೆ.20– ಬ್ಯಾಂಕ್‌ಗೆ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿಗೆ ಹೈಕೋರ್ಟ್ ಬಿಗ್ ರಿಲೀಫ್ ನೀಡಿದೆ. ಅವರಿಗೆ ವಿಧಿಸಿದ್ದ 3 ವರ್ಷ ಜೈಲು ಶಿಕ್ಷೆಯನ್ನು ಹೈಕೋರ್ಟ್ ಅಮಾನತುಗೊಳಿಸಿದೆ. ಬ್ಯಾಂಕ್ ಹಗರಣದಲ್ಲಿ ಕೃಷ್ಣಯ್ಯ ಶೆಟ್ಟಿಗೆ ಕೆಳಹಂತದ ನ್ಯಾಯಾಲಯ 3 ವರ್ಷ ಜೈಲು ಶಿಕ್ಷೆ ನೀಡಿತ್ತು. ಕೆಳಹಂತದ ನ್ಯಾಯಾಲಯದ ಆದೇಶಕ್ಕೆ ತಡೆ ನೀಡಿ ಹೈಕೋರ್ಟ್ ಪ್ರತಿವಾದಿಗಳಿಗೆ ನೋಟಿಸ್ ನೀಡಿದೆ. ಕೃಷ್ಣಯ್ಯ ಶೆಟ್ಟಿಗೆ ಶಿಕ್ಷೆ ಅಮಾನತುಗೊಳಿಸಿ ದಂಡದ ಮೊತ್ತ ಠೇವಣಿ ಇಡಲು ಹೈಕೋರ್ಟ್ ಆದೇಶ ಹೊರಡಿಸಿದೆ. ಬಾಲಾಜಿ ಕೃಪಾ ಎಂಟರ್ ಪ್ರೈಸಸ್‌ನ ಮಾಲೀಕ ಕೃಷ್ಣಯ್ಯಶೆಟ್ಟಿ 1993ರಲ್ಲಿ ಸಾರ್ವಜನಿಕ ಉದ್ದಿಮೆಗಳ ನೌಕರರಿಗೆ ಗೃಹ ನಿರ್ಮಾಣಕ್ಕೆ ಸಾಲ ಕೊಡಿಸುವುದಾಗಿ ಆಮಿಷವೊಡ್ಡಿ, ಹಲವು ನೌಕರರ ಹೆಸರಿನಲ್ಲಿ ನಕಲಿ ಖಾತೆಗಳನ್ನು ಸೃಷ್ಟಿಸಿ 7.17 ಕೋಟಿ ರೂ. ಬ್ಯಾಂಕ್ ಸಾಲ ಪಡೆದಿದ್ದರು. ಈವರೆಗೆ 3.53 ಕೋಟಿ ರೂ. ಸಾಲ ತೀರಿಸಿಲ್ಲ ಎಂದು ಆರೋಪಿಸಲಾಗಿತ್ತು.

ಆದಿಜಾಂಬವರ ಸ್ಮಶಾನಕ್ಕೆ ರಸ್ತೆಗಾಗಿ ಆಗ್ರಹಿಸಿ ಪ್ರತಿಭಟನೆ



ಆದಿಜಾಂಬವರ ಸ್ಮಶಾನದ ರಸ್ತೆ ನಿರ್ಮಾಣ ಮಾಡುವಂತೆ ಆಗ್ರಹಿಸಿ ಬನ್ನೂರಿನ ಪುರಸಭೆ ಮುಂಭಾಗ ಡಾ.ಬಾಬು ಜಗಜೀವನ ರಾಮ್ ಜನ ಕಲ್ಯಾಣ ಸಂಘ, ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಮೈಸೂರು, ಫೆ.20(ಜಿಎ)–ಬನ್ನೂರು ಟೌನ್ ಸುಭಾಷ್‌ನಗರದ ಆದಿಜಾಂಬವರ ಸ್ಮಶಾನದ ರಸ್ತೆ ನಿರ್ಮಾಣ ಮಾಡುವಂತೆ ಆಗ್ರಹಿಸಿ ಬನ್ನೂರಿನ ಪುರಸಭೆ ಮುಂಭಾಗ ಡಾ.ಬಾಬು ಜಗಜೀವನ ರಾಮ್ ಜನ ಕಲ್ಯಾಣ ಸಂಘ, ದಸಂಸ, ಡಾ.ಬಾಬು ಜಗಜೀವನ ರಾಮ್ ಯುವಕರ ಸಂಘ, ಕಟ್ಟಡ ಕೂಲಿ ಕಾರ್ಮಿಕರ ಸಂಘ ಸೇರಿದಂತೆ ವಿವಿಧ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಡಾ.ಬಾಬು ಜಗಜೀವನರಾಮ್ ಜನ ಕಲ್ಯಾಣ ಸಂಘದ ಅಧ್ಯಕ್ಷ ಮಲೆಯೂರು ಶಂಕರ್ ಮಾತನಾಡಿ, ಆದಿಜಾಂಬವ ಸಮುದಾಯದ ಜನರಿಗೆ ಸೀಮಿತಗೊಳ್ಳುವಂತೆ ಸ್ಮಶಾನ ನಿರ್ಮಾಣಕ್ಕಾಗಿ ಒತ್ತಾಯಿಸಿ, ಕಳೆದ 20 ವರ್ಷದಿಂದ ಹೋರಾಟ ಮಾಡಲಾಗುತ್ತಿತ್ತು. ಈ ಹೋರಾಟದ ಪ್ರತಿಫಲವಾಗಿ ಕಾವೇರಿ ನದಿ ದಡದಲ್ಲಿ ಸ್ಮಶಾನಕ್ಕಾಗಿ ಜಾಗ ಮಂಜೂರಾಗಿದೆ. ಸ್ಮಶಾನ ಅಭಿವೃದ್ಧಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ 20 ಲಕ್ಷ ರೂ ಅನುದಾನ ಬಿಡುಗಡೆ ಮಾಡಿಸಿದ್ದಾರೆ. ಸ್ಮಶಾನಕ್ಕೆ ರಸ್ತೆ ನಿರ್ಮಿಸಲು ಭೂಮಿ ಸ್ವಾಧೀನಕ್ಕಾಗಿ 26 ಲಕ್ಷ ರೂ. ಪ್ರತ್ಯೇಕವಾಗಿ ಮೀಸಲಿಡಲಾಗಿದೆ ಎಂದು ಹೇಳಿದರು.

ಅಧಿಕಾರಿಗಳು ಸ್ಮಶಾನ ಅಭಿವೃದ್ಧಿಗೆ ಯಾವುದೇ ಇಚ್ಛಾಶಕ್ತಿ ಪ್ರದರ್ಶಿಸುತ್ತಿಲ್ಲ. ಶವಸಂಸ್ಕಾರಕ್ಕಾಗಿ ಹೊಲ–ಗದ್ದೆಯ ಬದು(ತೆವರಿ) ಮೇಲೆ ನಡೆದುಕೊಂಡು ಸಾಗಬೇಕಾದ ಅನಿವಾರ್ಯತೆ ಇದ್ದು, ಶವ ಕೊಂಡೊಯ್ಯುವ ವೇಳೆ ಅನೇಕರು ಬೀಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 2024ರ ಅಕ್ಟೋಬರ್ 15ರಂದು ನಿಂಗರಾಜು ಎಂಬುವರು ನಿಧನರಾದಾಗ ಅವರ ದೇಹವನ್ನು ಬನ್ನೂರು ಪಟ್ಟಣದ ಕಾವೇರಿ ವೃತ್ತದಲ್ಲಿಟ್ಟು ಬೃಹತ್ ಪ್ರತಿಭಟನೆ ಮಾಡಲಾಗಿತ್ತು. ಆ ದಿನ ಅಧಿಕಾರಿಗಳು ಪ್ರತಿಭಟನಕಾರರನ್ನು ಸಮಾಧಾನಪಡಿಸಿ, ಅಂತ್ಯಕ್ರಿಯೆ ಮಾಡಿ, ನಾಳೆಯಿಂದ ಸ್ಮಶಾನದ ಕಾಮಗಾರಿ ಆರಂಭಿಸುತ್ತೇವೆ ಎಂದು ಭರವಸೆ ನೀಡಿದರು. ಆದರೆ, ಈವರೆಗೂ ಯಾವುದೇ ಕಾಮಗಾರಿ ಆರಂಭಿಸಿಲ್ಲ. ಈ ಬಗ್ಗೆ ದೂರವಾಣಿ ಕರೆ, ಖುದ್ದು ಭೇಟಿ ನೀಡಿದಾಗ ಸಬೂಬು ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಶಾಶ್ವತ ಪರಿಹಾರಕ್ಕಾಗಿ ಒತ್ತಾಯಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದ್ದೇವೆ ಎಂದರು.

ಪ್ರತಿಭಟನೆಯಲ್ಲಿ ಬನ್ನೂರು ಪುರಸಭಾ ಸದಸ್ಯ ಶಿವಣ್ಣ, ಮುಖಂಡರಾದ ಕೇತಹಳ್ಳಿ ಲಿಂಗರಾಜು, ಹಲಗಯ್ಯನಹುಂಡಿ ಶಂಕರ್, ನಾಗರಾಜು, ರಾಚಪ್ಪ, ಮಂಜುನಾಥ್, ಶಂಕರ್, ಗಿರೀಶ್, ಶಿವಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ಶುಕ್ರವಾರ 21 ಫೆಬ್ರವರಿ 2025

ಮಾ.1 ರಿಂದ ಸಿಸಿಟಿವಿ ಕಣ್ಗಾವಲಿನಲ್ಲಿ ನಡೆಯಲಿದೆ ದ್ವಿತೀಯ ಪಿಯುಸಿ ಪರೀಕ್ಷೆ

14617 ಪರೀಕ್ಷಾರ್ಥಿಗಳು, 26 ಪರೀಕ್ಷಾ ಕೇಂದ್ರಗಳು

ಮಂಡ್ಯ,ಫೆ.20– ಜಿಲ್ಲೆಯಲ್ಲಿ ಮಾರ್ಚ್ 1 ರಿಂದ 20 ರವರೆಗೆ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆ–1 ಸಿ.ಸಿ.ಟಿ.ವಿ ಕಣ್ಗಾವಲಿನಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ತಮ್ಮ ಕಚೇರಿಯಲ್ಲಿ 2024–25ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ–1ಕ್ಕೆ ಪೂರ್ವ ಸಿದ್ಧತೆ ಹಾಗೂ ಪರೀಕ್ಷೆಯ ಸುರಕ್ಷತತೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಈ ಬಾರಿ 14617 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಮಂಡ್ಯದಲ್ಲಿ 5073 ವಿದ್ಯಾರ್ಥಿಗಳು, ಮದ್ದೂರಿನಲ್ಲಿ–2137 ಮಳವಳ್ಳಿಯಲ್ಲಿ–1063 ಕೆ.ಆರ್.ಪೇಟೆಯಲ್ಲಿ–1720 ನಾಗಮಂಗಲದಲ್ಲಿ–1720 ಶ್ರೀರಂಗಪಟ್ಟಣದಲ್ಲಿ–1108 ಪಾಂಡವಪುರದಲ್ಲಿ –1717 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದರು.

ಮಂಡ್ಯ–7, ಮದ್ದೂರು–5, ಮಳವಳ್ಳಿ–3, ಕೆ.ಆರ್ ಪೇಟೆ–3, ನಾಗಮಂಗಲ–3, ಶ್ರೀರಂಗಪಟ್ಟಣ–2, ಪಾಂಡವಪುರ–3 ರಂತೆ ಒಟ್ಟು 26 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ, ಜಿಲ್ಲೆಯಲ್ಲಿ ಯಾವುದೇ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಪರೀಕ್ಷಾ ಕೇಂದ್ರಗಳೂ ಇರುವುದಿಲ್ಲ ಎಂದರು.

ಯಾವುದೇ ಪರೀಕ್ಷಾ ಅಕ್ರಮಗಳು ನಡೆಯದಂತೆ ಹಾಗೂ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಹಾಗೂ ಪರೀಕ್ಷೆ ನಡೆಯುವ ಕೊಠಡಿಯಲ್ಲಿ ಸಿಸಿಟಿವಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗುವುದು. ಸಿಸಿಟಿವಿ ವೆಬ್ ಕಾಸ್ಟಿಂಗ್ ಅನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವೀಕ್ಷಿಸಲು ಪ್ರಾಂಶುಪಾಲರ ತಂಡವನ್ನು ಸಹ ರಚಿಸಲಾಗಿದೆ ಎಂದರು. ತಿಳಿ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಪರೀಕ್ಷಾ ಕೇಂದ್ರಗಳಲ್ಲಿ ಆರೋಗ್ಯ ಸಿಬ್ಬಂದಿಗಳನ್ನು ಆರೋಗ್ಯ ಇಲಾಖೆಯವರು ನಿಯೋಜಿಸಬೇಕು, ಪರೀಕ್ಷಾ ಕೇಂದ್ರಗಳಿಗೆ ನಿಯೋಜಿಸಲಾಗುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ಗುರುತಿನ ಚೀಟಿಯನ್ನು ಹೊಂದಿರಬೇಕು, ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಸ್ಮಾರ್ಟ್ ವಾಚ್, ಎಲೆಕ್ಟ್ರಾನಿಕ್ ಡಿವೈಸ್ ತರುವುದನ್ನು ನಿಷೇಧಿಸಲಾಗಿದೆ ಎಂದರು.

ಸಭೆಯಲ್ಲಿ ಎಡಿಸಿ ಬಿ.ಸಿ.ಶಿವಾನಂದ ಮೂರ್ತಿ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಚ್.ಶಿವರಾಮೇಗೌಡ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸಿ.ಚೆಲುವಯ್ಯ ಇದ್ದರು.

ಡಾ.ನಿರ್ಮಲಾನಂದನಾಥ ಶ್ರೀಗಳ 12ನೇ ವಾರ್ಷಿಕ ಪಟ್ಟಾಭಿಷೇಕ ಕಾರ್ಯಕ್ರಮ

ವಿವೇಕಿಗಳ ಕೈಯಲ್ಲಿದ್ದರೆ ಮಾತ್ರ ವಿಜ್ಞಾನ ಸುರಕ್ಷಿತ

ಮಂಡ್ಯ,ಫೆ.20– ವಿಜ್ಞಾನ–ತಂತ್ರಜ್ಞಾನ ಯಾವಾಗಲೂ ಧರ್ಮದ ಜೊತೆಗೆ ಇರಬೇಕು. ವಿಜ್ಞಾನ ವಿವೇಕಿಗಳ ಕೈಯಲ್ಲಿ ಇದ್ದರೆ ಮಾತ್ರ ಸುರಕ್ಷಿತವಾಗಿರುತ್ತದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಅಭಿಪ್ರಾಯಪಟ್ಟರು.

ನಾಗಮಂಗಲದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ, ಪೂಜ್ಯ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ 12ನೇ ವಾರ್ಷಿಕ ಪಟ್ಟಾಭಿಷೇಕ ಉತ್ಸವದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಜ್ಞಾನಕ್ಕೂ ಮಠಕ್ಕೂ ಏನು ಸಂಬಂಧ ಎಂಬ ಪ್ರಶ್ನೆ ಬರುತ್ತದೆ. ಈ ಕಾರ್ಯಕ್ರಮದಲ್ಲಿ ವಿಜ್ಞಾನದ ಪ್ರಾತ್ಯಕ್ಷಿಕೆಗಳನ್ನು ತೋರಿಸಲಾಗಿದೆ. ಧರ್ಮ ಪಾಲಿಸುವವರ ಕೈಯಲ್ಲಿ ಧರ್ಮ ಇದ್ದರೆ ಮಾತ್ರ ಎಲ್ಲರಿಗೂ ಒಳಿತಾಗುತ್ತದೆ. ಅಧರ್ಮೀಯರ ಕೈಯಲ್ಲಿ ವಿಜ್ಞಾನ ಸಿಕ್ಕಿದರೆ ಅದರಿಂದ ದೊಡ್ಡ ಅನಾಹುತವಾಗುತ್ತದೆ ಎಂದರು.

ಇಂದು ರೈಲು, ವಿಮಾನದ ಮೂಲಕ ವೇಗವಾಗಿ ದೂರದ ಸ್ಥಳಗಳನ್ನು ತಲುಪಬಹುದು. ಧರ್ಮ ಪಾಲನೆ ಮಾಡುವವರು ಇಂತಹ ವಿಜ್ಞಾನ–ತಂತ್ರಜ್ಞಾನದ ಸಾಧನ ಬಳಸಿದರೆ ಏನೂ ಆಗಲ್ಲ. ಅದರೆ ಅಧರ್ಮೀಯರು ಬಳಸಿದರೆ ಅಪಾಯವಾಗುತ್ತದೆ.



ನಾಗಮಂಗಲದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ, ಪೂಜ್ಯ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ 12 ನೇ ವಾರ್ಷಿಕ ಪಟ್ಟಾಭಿಷೇಕ ಉತ್ಸವದ ವೇದಿಕೆ ಕಾರ್ಯಕ್ರಮವನ್ನು ವಿಪಕ್ಷ ನಾಯಕ ಆರ್.ಅಶೋಕ್ ಉದ್ಘಾಟಿಸಿದರು.

ವಿಮಾನವನ್ನು ಬಳಸಿಯೇ ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್ ಕಟ್ಟಡವನ್ನು ಧ್ವಂಸ ಮಾಡಲಾಯಿತು ಎಂದು ಅವರು ಹೇಳಿದರು.

ಮಹಾಕುಂಭಮೇಳದಲ್ಲಿ ಸುಮಾರು 40 ಕೋಟಿ ಜನರು ಸೇರಿದ್ದಾರೆ. ಆ ಕಾರ್ಯಕ್ರಮದ ಆಯೋಜಕರಲ್ಲಿ ಜುನಾ ಅಖಾಡದ ಪೂಜ್ಯ ಶ್ರೀ ಅವದೇಶನಾಂದ ಗಿರಿ ಮಹಾರಾಜ್ ಕೂಡ ಒಬ್ಬರು. ಇಂತಹ ಮಹಾ ಕಾರ್ಯಕ್ರಮ ಆಯೋಜಿಸಿದ್ದಕ್ಕಾಗಿ ಅವರಿಗೆ ನಾನು ವಂದಿಸಿದ್ದೇನೆ. ಅವರನ್ನು ನೋಡಿಯೇ ನನಗೆ ಪುಣ್ಯ ಬಂದಿದೆ ಮಹಾಕುಂಭ ಮೇಳಕ್ಕೆ ಹೋದರೆ ಪುಣ್ಯ ಬರುತ್ತದೆಯೇ ಎಂದು ಕೆಲವರು ಪ್ರಶ್ನಿಸಿದ್ದಾರೆ. ಈ ಮೂರು ದಿನದ ಸಂತೆಯಲ್ಲಿ ನಾವು ಪಾಪವನ್ನು ಕಳೆದು ಪುಣ್ಯ ಸಂಪಾದಿಸಬೇಕು. ನಾವು ಮಾಡುವ ಒಳ್ಳೆಯ ಕೆಲಸದಲ್ಲಿ ಸದಾ ದೇವರು ಇರುತ್ತಾರೆ. ಅದನ್ನು ಅರ್ಥ ಮಾಡಿಕೊಂಡು ನಾವು ಕೆಲಸ ಮಾಡಬೇಕು ಎಂದರು.

ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ 12ನೇ ವರ್ಷದ ಪಟ್ಟಾಭಿಷೇಕವನ್ನು ಆಚರಿಸಲಾಗುತ್ತಿದೆ. ಈ ಹಿಂದೆ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಮಠವನ್ನು ಮುನ್ನಡೆಸುತ್ತಿದ್ದರು. ಆಗ ನಾನು ಅವರ ಜೊತೆ ವೇದಿಕೆ ಹಂಚಿಕೊಳ್ಳುತ್ತಿದ್ದೆ. ಅವರ ಬಳಿಕ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಠವನ್ನು ಉತ್ತಮವಾಗಿ ಮುನ್ನಡೆಸುತ್ತಿದ್ದಾರೆ ಎಂದು ತಿಳಿಸಿದರು.

> ಅಟಲ್ ಬಿಹಾರಿ ವಾಜಪೇಯಿ ಹಾಗೂ ಅಬ್ದುಲ್ ಕಲಾಂ ಅವರು ಇಡೀ ದೇಶದಲ್ಲಿ ವಿಜ್ಞಾನ–ತಂತ್ರಜ್ಞಾನವನ್ನು ಬೆಳೆಸಿದರು. ಪೊಲೀಸರ ಬಳಿ ಎಷ್ಟೇ ತಂತ್ರ ಜ್ಞಾನವಿದ್ದರೂ ಕಾಡುಗಳ್ಳ ವೀರಪ್ಪನ್‌ನನ್ನು ಹಲವಾರು ವರ್ಷಗಳ ಕಾಲ ಹಿಡಿಯಲು ಸಾಧ್ಯವಾಗಲಿಲ್ಲ. ವಿವೇಕಿಗಳ ಬಳಿ ವಿಜ್ಞಾನವಿದ್ದರೆ, ಅದು ಸದುಪಯೋಗವಾಗುತ್ತದೆ. ಅವಿವೇಕಿಗಳ ಬಳಿ ಇದ್ದರೆ ಹಾಳಾಗುತ್ತದೆ. ವಿಜ್ಞಾನ ಯಾವಾಗಲೂ ಧರ್ಮದ ಜೊತೆಗೆ ಇರಬೇಕೆಂಬ ಕಾರಣಕ್ಕೆ ಮಠದಲ್ಲಿ ವಿಜ್ಞಾನ ಮೇಳ ಮಾಡಲಾಗುತ್ತಿದೆ– ಆರ್.ಅಶೋಕ್

ವೇದಿಕೆಯಲ್ಲಿ ಆದಿಚುಂಚನಗಿರಿ ಮಠಾಧೀಶ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್, ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ, ಹರಿದ್ವಾರದ ಶ್ರೀ ಅವದೇಶಾನಂದಗಿರಿ ಮಹರಾಜ್, ವಡೋದರ್ ಅರ್ಹ ವಿದ್ಯಾ ಮಂದಿರದ ಪರಮಾತ್ಮಾನಂದ ಸರಸ್ವತಿಜೀ, ರಾಮಕೃಷ್ಣ ಆಶ್ರಮದ ಮುಕ್ತಿದಾನಂದಶ್ರೀ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹೇಮಾವತಿ ಒಡಲಲ್ಲಿ ನೀರಿಗೆ ಹಾಹಾಕಾರ

● ಉಸ್ತುವಾರಿ ಸಚಿವರ ತವರಿನಲ್ಲಿ ನೀರಿದ್ದರೂ ಬಿಡದೆ ತಾರತಮ್ಯ ● ಕೆಆರ್‌ಎಸ್ ಭಾಗದ ರೈತರಿಗೆ ಒಂದು ನೀತಿ, ಹೇಮಾವತಿ ಭಾಗಕ್ಕೆ ಇನ್ನೊಂದು ನೀತಿಯೇ!

ಕೆಆರ್.ಪೇಟೆ,ಫೆ.20– ಕಳೆದ ಮುಂಗಾರು ಹಂಗಾಮಿನಲ್ಲಿ ಹೇಮಾವತಿ–ಕಾವೇರಿ ಕಣಿವೆ ಪ್ರದೇಶದಲ್ಲಿ ಅತ್ಯುತ್ತಮ ಮಳೆಯಾಗಿದ್ದು, ಗೊರೂರಿನ ಹೇಮಾವತಿ ಅಣೆಕಟ್ಟೆ, ಶ್ರೀರಂಗಪಟ್ಟಣದ ಕೆಆರ್‌ಎಸ್ ಅಣೆಕಟ್ಟೆ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದ ಎಲ್ಲಾ ಅಣೆಕಟ್ಟೆಗಳು ತುಂಬಿ ತುಳುಕುತ್ತಿದ್ದರೂ ಕೆ.ಆರ್.ಪೇಟೆ, ಪಾಂಡವಪುರ, ನಾಗಮಂಗಲ ತಾಲೂಕಿನ ರೈತರು ಹೇಮಾವತಿ ನೀರಿಗಾಗಿ ಪರಿತಪಿಸುತ್ತಿದ್ದಾರೆ.

ಹಾಸನ ಜಿಲ್ಲೆ ಗೊರೂರಿನ ಹೇಮಾವತಿ ಜಲಾಶಯ ಭರ್ತಿಯಾಗಿದ್ದು, ರಾಜ್ಯ ಸರ್ಕಾರದ ಇಚ್ಛಾಶಕ್ತಿಯ ಕೊರತೆಯಿಂದ ಅಣೆಕಟ್ಟೆಯಲ್ಲಿ ನೀರಿದ್ದರೂ ಅದು ಕೆರೆ ಕಟ್ಟೆಗಳಿಗೆ ಹಾಗೂ ರೈತರ ಹೊಲಗದ್ದೆಗಳಿಗೆ ಬರದಂತಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಈಗಾಗಲೇ ಕೆ.ಆರ್.ಎಸ್ ಜಲಾಶಯ ವ್ಯಾಪ್ತಿಯ ನೀರಾವರಿ ಸಲಹಾ ಸಮಿತಿಯ ಸಭೆ ನಡೆದು ಕೆ.ಆರ್.ಎಸ್ ಜಲಾಶಯದಿಂದ ಕಟ್ಟು ನೀರು ಪದ್ಧತಿಯಡಿ ವಿಶ್ವೇಶ್ವರಯ್ಯ ನಾಲೆಯಲ್ಲಿ ನೀರು ಹರಿಸಲಾಗುತ್ತಿದೆ.

ಹೇಮಾವತಿ ಡ್ಯಾಂನಲ್ಲಿ ನೀರಿದ್ದರೂ ಇದುವರೆಗೂ ಹೇಮಾವತಿ ನಾಲೆಗಳಿಗೆ ನೀರು ಹರಿಸುವ ಸಂಬಂಧ ಒಂದೇ ಒಂದು ನೀರಾವರಿ ಸಲಹಾ ಸಮಿತಿ ಸಭೆ ನಡೆದಿಲ್ಲ. ಇದರಿಂದಾಗಿ ನೀರು ಬಿಡುವ ಬಗ್ಗೆ ಕನಿಷ್ಠ ಮಾಹಿತಿ ನೀಡುವ ಗೋಜಿಗೂ ನೀರಾವರಿ ಇಲಾಖೆ ಮುಂದಾಗಿಲ್ಲ. ಜಲಾಶಯದಲ್ಲಿ ಸಾಕಷ್ಟು ನೀರಿನ ಸಂಗ್ರಹ ಇರುವುದರಿಂದ ನೀರು ಬಿಡುವ ಆಶಾ ಕಿರಣದಿಂದ ರೈತರು ತಮ್ಮ ತಮ್ಮ ಹೊಲಗದ್ದೆಗಳನ್ನು ಭಿತ್ತನೆಗೆ ಸಜ್ಜುಗೊಳಿಸಿಕೊಂಡು ಕಾಯುತ್ತಿದ್ದಾರೆ.



ಹೇಮಾವತಿ ಜಲಾಶಯದ ಎಡದಂಡೆ ನಾಲೆ.

ನೀರು ಬಿಡಲು ಆಗ್ರಹ: ಕೆ.ಆರ್.ಎಸ್ ಜಲಾಶಯ ವ್ಯಾಪ್ತಿಯ ರೈತರಿಗೊಂದು ನೀತಿ, ಹೇಮಾವತಿ ಜಲಾಶಯ ವ್ಯಾಪ್ತಿಯ ರೈತರಿಗೊಂದು ನೀತಿ ಅನುಸರಿಸಿ ರಾಜ್ಯ ಸರ್ಕಾರ ಮಲತಾಯಿ ಧೋರಣೆ ತೋರುತ್ತಿದೆ. ಹೇಮಾವತಿ ಜಲಾಶಯದಿಂದ ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ ಕೆಎನ್.ರಾಜಣ್ಣ ತುಮಕೂರು ಭಾಗಕ್ಕೆ ನೀರು ತೆಗೆದುಕೊಂಡು ಹೋಗುತ್ತಿದ್ದಾರೆ. ಹೇಮೆಯ ನೀರು ತುಮಕೂರು ಭಾಗಕ್ಕೆ ಹರಿದು ಹೋಗುತ್ತಿದ್ದರೂ ಮಂಡ್ಯ ಜಿಲ್ಲೆಯ ರಾಜಕಾರಣಿಗಳು ಧ್ವನಿ ಎತ್ತಿ ತಮ್ಮ ಭಾಗದ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಲು ಮುಂದಾಗುತ್ತಿಲ್ಲ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯಸ್ವಾಮಿ ಅವರ ಸ್ವಕ್ಷೇತ್ರ ನಾಗಮಂಗಲ ಹೇಮಾವತಿ ನೀರಿನಿಂದ ವಂಚಿತವಾಗಿದೆ ಹಾಗಾಗಿ ತಕ್ಷಣವೇ ನೀರಾವರಿ ಸಲಹಾ ಸಮಿತಿಯ ಸಭೆ ಕರೆಸಿ ಮಂಡ್ಯ ಜಿಲ್ಲೆಯ ಕೆಆರ್.ಪೇಟೆ, ಪಾಂಡವಪುರ, ನಾಗಮಂಗಲ ತಾಲೂಕುಗಳ ಕೆರೆಕಟ್ಟೆಗಳು ಹಾಗೂ ರೈತರ ಹೊಲಗದ್ದೆಗಳಿಗೆ ನಿಯಮಾನುಸಾರ ನೀರು ಹರಿಸುವ ಪ್ರಯತ್ನಕ್ಕೆ ಸಚಿವ ಎನ್.ಚೆಲುವರಾಯಸ್ವಾಮಿ ಮುಂದಾಗದಿರುವುದು ಖಂಡನೀಯ ಎಂದಿರುವ ತಾಲೂಕು ರೈತಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ ತಕ್ಷಣವೇ ಹೇಮಾವತಿ ಜಲಾಶಯದ ಎಡದಂಡೆ ನಾಲೆಗೆ ನೀರು ಹರಿಸಬೇಕು. ನದಿ ಅಣೆಕಟ್ಟೆ ನಾಲೆಗಳಾದ ಮಂದಗೆರೆ ಎಡ ಮತ್ತು ಬಲದಂಡೆ ನಾಲೆಗಳು ಹಾಗೂ ಹೇಮಗಿರಿ ನಾಲೆಗಳಿಗೆ ಭತ್ತದ ಬೆಳೆಗೆ ಖಾಯಂ ನೀರು ಹರಿಸಬೇಕು. ಇಲ್ಲದಿದ್ದರೆ ರಾಜ್ಯ ರೈತಸಂಘ ನೀರಿಗಾಗಿ ಬೃಹತ್ ಹೋರಾಟ ಆರಂಭಿಸಲಿದೆ ಎಂದು ಎಚ್ಚರಿಸಿದ್ದಾರೆ.

ಸ್ಫೂರ್ತಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಕೆ.ಎಲ್.ಶಿವರಾಮು ಆಯ್ಕೆ



ಭಾರತೀನಗರ, ಫೆ.20– ಭಾರತೀನಗರದ ಸ್ಫೂರ್ತಿ ಪತ್ತಿನ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಕೆ.ಎಲ್.ಶಿವರಾಮು, ಉಪಾಧ್ಯಕ್ಷರಾಗಿ ಎಸ್.ಬಿ.ಸಿದ್ದರಾಮೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ ಕೆ.ಎಲ್.ಶಿವರಾಮು ಮಾತನಾಡಿ, ಈ ಸಹಕಾರ ಸಂಘವನ್ನು 1999ರಲ್ಲಿ ಸ್ಥಾಪನೆಗೊಳಿಸಿ ಸಿ.ಎ.ಕೆರೆ ಹೋಬಳಿಗೆ ಮಾತ್ರ ಸೀಮಿತವಾಗಿದ್ದ ಸಂಘವನ್ನು, ನಂತರ ದಿನಗಳಲ್ಲಿ ಮದ್ದೂರು–ಮಳವಳ್ಳಿ ತಾಲೂಕುಗಳಿಗೂ ವಿಸ್ತರಿಸಿರುವುದರಿಂದ ಹೆಚ್ಚು ಸದಸ್ಯರನ್ನು ಹೊಂದಿ ವ್ಯವಹಾರಿಕವಾಗಿ ಈಗ ಬಲವರ್ಧನೆ ಗೊಂಡಿದೆ ಎಂದರು. ಇದೇ ವೇಳೆ ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಸಂಘದ ಸದಸ್ಯರು ಮತ್ತು ಮುಖಂಡರು ಅಭಿನಂದಿಸಿ ಗೌರವಿಸಿದರು.

ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಯುವಕ ಸಾವು



ಪಾಂಡವಪುರ, ಫೆ.20– ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಯುವಕನೋರ್ವ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ.

ತಾಲೂಕಿನ ಚಂದ್ರೆ ಗ್ರಾಮದ ಸ್ವಾಮಿಗೌಡರ ಪುತ್ರ ರಾಘವೇಂದ್ರ (34) ಮೃತ ಯುವಕ. ಪಟ್ಟಣದ ಟಿಎಪಿಸಿಎಂಎಸ್ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ರಾಘವೇಂದ್ರ ಕಳೆದ ತಿಂಗಳು ಟ್ರಾಕ್ಟರ್‌ನಲ್ಲಿ ಹುಲ್ಲು ತುಂಬಿಕೊಂಡು ಬರುವ ವೇಳೆ ಬಸ್ ಡಿಕ್ಕಿಯಾಗಿ ಗಂಭೀರವಾಗಿ ಗಾಯಗೊಂಡಿದ್ದ.

ತಕ್ಷಣ ಮೈಸೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಕಳೆದ ಒಂದೂವರೆ ತಿಂಗಳಿನಿಂದಲೂ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದ ರಾಘವೇಂದ್ರ ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಮಧ್ಯಾಹ್ನ ಕೊನೆಯುಸಿರೆಳೆದಿದ್ದಾನೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತನ ಶವ ಅಂತ್ಯ ಸಂಸ್ಕಾರ ಸ್ವಗ್ರಾಮ ಚಂದ್ರೆ ಗ್ರಾಮದಲ್ಲಿ ಗುರುವಾರ ನೆರವೇರಿಸಲಾಯಿತು ಎಂದು ಕುಟುಂಬ ವರ್ಗದವರು ತಿಳಿಸಿದ್ದಾರೆ.

ಮಂಡ್ಯದಲ್ಲಿ ಮಹಿಳಾ ಕ್ರೀಡಾಕೂಟ

ಮಂಡ್ಯ, ಫೆ.20– ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತವಾಗಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಫೆಬ್ರವರಿ 28 ರಂದು ಬೆಳಗ್ಗೆ 9 ಗಂಟೆಗೆ ಮಹಿಳಾ ಕ್ರೀಡಾ ಕೂಟವನ್ನು ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸ್ಪರ್ಧೆಯಲ್ಲಿ ಹಗ್ಗ ಜಗ್ಗಾಟ, ತ್ರೋಬಾಲ್, ಮ್ಯೂಸಿಕಲ್ ಚೇರ್, ಸ್ಲೋ ಸ್ಕೂಟರ್ ರೇಸ್, ಬಿಂದಿಗೆ ಹಿಡಿದು ಓಟ ಮತ್ತು ಲೆಮನ್ ಅಂಡ್ ಸ್ಪೂನ್ ಕ್ರೀಡೆಗಳನ್ನು ಆಯೋಜಿಸಲಾಗಿದ್ದು, ಆಸಕ್ತ 19 ವರ್ಷ ಮೇಲ್ಪಟ್ಟ ಮಹಿಳೆಯರು ಭಾಗವಹಿಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಈಗ ಗೆದ್ದರಾಮಯ್ಯ


ಸುಳ್ಳು ಎಂದಿರುವ ಲೋಕಾಯುಕ್ತ, 14 ನಿವೇಶನಗಳ ಹಂಚಿಕೆ ವಿಷಯದಲ್ಲಿ ಮುಖ್ಯಮಂತ್ರಿ ಕುಟುಂಬ ಮುಡಾ ಮೇಲೆ ಯಾವುದೇ ಪ್ರಭಾವ ಬೀರಿಲ್ಲ.

ಇವರ ಕುಟುಂಬಕ್ಕೆ ಪರ್ಯಾಯವಾಗಿ ಮುಡಾದಿಂದ ಸಿಗಬೇಕಾದದ್ದೂ ದೊರೆತಿಲ್ಲ, ಈಗಾಗಲೇ ಪಾರ್ವತಿ ಅವರು, ತಾವು ಪಡೆದಿದ್ದ 14 ನಿವೇಶನಗಳನ್ನೂ ಹಿಂತಿರುಗಿಸಿದ್ದಾರೆಂದು ಲೋಕಾಯುಕ್ತ ತನ್ನ ವರದಿಯಲ್ಲಿ ತಿಳಿಸಿದೆ. ಮಲ್ಲಿಕಾರ್ಜುನ ಸ್ವಾಮಿ ಮತ್ತು ಪಾರ್ವತಿ ಮಧ್ಯೆ ಜಮೀನು ವರ್ಗಾವಣೆ ಕಾನೂನಾತ್ಮಕವಾಗಿ ನಡೆದಿದೆ. ಆದರೆ, ದೇವರಾಜುಗೆ ಸಂಬಂಧಿಸಿದಂತಹ ಡಿ–ನೋಟಿಫೈ ಪ್ರಕ್ರಿಯೆಯಲ್ಲಿ ಮುಡಾ ಲೋಪ ಎಸಗಿದೆ.


ದೇವರಾಜು ಸರ್ಕಾರಿ ಸೇವೆಯಲ್ಲಿ ಇರುವುದನ್ನು ಮರೆಮಾಚಿರುವುದಲ್ಲದೆ, ಡಿ–ನೋಟಿಫೈ ವೇಳೆ ತಮಗಿರುವ ಆಸ್ತಿ–ಪಾಸ್ತಿಗಳ ಬಗ್ಗೆಯೂ ವಿವರ ನೀಡಿಲ್ಲ. ಆದ್ದರಿಂದ ಪ್ರಕರಣದಲ್ಲಿ ಬೇರೆ ಯಾರ ಪಾತ್ರವೂ ಇಲ್ಲ ಎಂಬುದು ನಮ್ಮ ತನಿಖಾ ವರದಿಯಿಂದ ತಿಳಿದುಬಂದಿದೆ.

ಅಧಿಕಾರಿಗಳ ಮಹಾ ಎಡವಟ್ಟು: ಅಧಿಕಾರಿಗಳು ಮತ್ತು ಖಾಸಗಿ ಸಂಸ್ಥೆ ಬಹಳಷ್ಟು ಎಡವಟ್ಟು ಮಾಡಿವೆ. ಕೆಸರೆ ಗ್ರಾಮದ ಸ್ಥಳವನ್ನು ಮುಡಾದಿಂದ ಬಡಾವಣೆ ಮಾಡಲು ವಶಪಡಿಸಿಕೊಳ್ಳಲಾಗಿತ್ತು. ನಂತರ ರಸ್ತೆ, ನಿವೇಶನಗಳನ್ನು ಮಾಡಲು ಹಾಗೂ ಇತರ ಮೂಲ ಸೌಕರ್ಯ ಕಲ್ಪಿಸಲು ಎಲ್ ಅಂಡ್ ಟಿ ಕಂಪನಿಗೆ ನೀಡಲಾಗಿತ್ತು. ಈ ವೇಳೆ ವಿವಾದಿತ 3.18 ಎಕರೆ ಪ್ರದೇಶ ಡಿ–ನೋಟಿಫೈ ಆಗಿದೆ ಎಂಬುದಾಗಿ ನಕಾಶೆಯಲ್ಲಿ ತೋರಿಸಲಾಗಿತ್ತು. ಆದರೆ, ಎಲ್ ಅಂಡ್‌ಟಿ ಅವರು ಡಿ–ನೋಟಿಫೈ ಆಗಿರುವ ಜಮೀನನ್ನೂ ಅಭಿವೃದ್ಧಿ ಮಾಡಿದ್ದಾರೆ.

ಇಂತಹ ಎಡವಟ್ಟನ್ನು ಮುಡಾ ಅಧಿಕಾರಿಗಳು ಗಮನಿಸದೆ ಭಾರಿ ಲೋಪ ಮಾಡಿದ್ದಾರೆ. ಅಷ್ಟೇ ಅಲ್ಲ, ಅಭಿವೃದ್ಧಿ ಆದ ನಂತರ ನಿವೇಶನಗಳ ಹಂಚಿಕೆಯನ್ನೂ ಮಾಡಿದ್ದಾರೆ. ಹೀಗಾಗಿ ಎಲ್ ಅಂಡ್‌ಟಿ ಮತ್ತು ಮುಡಾ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎನ್ನುವುದು ತನಿಖೆಯಿಂದ ತಿಳಿದುಬಂದಿದೆ. ಕೃಷಿ ಭೂಮಿ ಪರಿವರ್ತನೆ ಸಮಯದಲ್ಲೂ ಕಂದಾಯ ಅಧಿಕಾರಿಗಳು ಲೋಪ ಎಸಗಿದ್ದಾರೆ. ಜಮೀನು ಇರುವ ಸ್ಥಳಕ್ಕೆ ಹೋಗದೆ ಕಚೇರಿಯಲ್ಲೇ ಕುಳಿತು ಭೂ ಪರಿವರ್ತನೆ ಪ್ರಕ್ರಿಯೆ ಪೂರ್ಣಗೊಳಿಸಿ, ನಿರ್ಲಕ್ಷ್ಯ ತೋರಿದ್ದಾರೆ. ಹೈಕೋರ್ಟ್ ತೀರ್ಪನ್ನು ಆಧಾರವಾಗಿಟ್ಟುಕೊಂಡು ಮುಡಾ, ಮುಖ್ಯಮಂತ್ರಿ ಕುಟುಂಬಕ್ಕೆ 14 ನಿವೇಶನಗಳನ್ನು ಹಂಚಿಕೆ ಮಾಡಿರುವುದಷ್ಟೇ ಅಲ್ಲ, ಉಳಿದ 130 ಪ್ರಕರಣಗಳಲ್ಲೂ ಪರ್ಯಾಯ ನಿವೇಶನಗಳನ್ನು ಹಂಚಿದ್ದಾರೆ. ಹೀಗಾಗಿ ಪರ್ಯಾಯ ಪರಿಹಾರ ಕೊಟ್ಟಿರುವ ಬಗ್ಗೆ ಸಮಗ್ರ ತನಿಖೆ ನಡೆಸಬೇಕಿದೆ. ವರದಿಯಲ್ಲಿನ ಅಧಿಕಾರಿಗಳ ತಪ್ಪಿನ ತನಿಖೆ ಬಗ್ಗೆ ಕೋರ್ಟ್ ತೀರ್ಮಾನ ಕೈಗೊಳ್ಳಬೇಕು ಎಂದು ಲೋಕಾಯುಕ್ತ ಮನವಿ ಮಾಡಿದೆ.



ಮುಡಾ ಕೇಸ್‌ನಲ್ಲಿ ಸಿಎಂ ಪಾತ್ರ ಇಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಸಿಎಂ ಪತ್ನಿ ಪಾರ್ವತಿ ಅವರಿಗೆ ಬದಲಿ ನಿವೇಶನ ನೀಡಿರುವ ವಿಚಾರದಲ್ಲಿ ಅವರು ಯಾವುದೇ ಪ್ರಭಾವ ಬೀರಿಲ್ಲ. ಎಲ್ಲರಿಗೂ ಕೊಡುವಂತೆ ಸಿಎಂ ಪತ್ನಿ ಅವರಿಗೂ ಬದಲಿ ನಿವೇಶನ ನೀಡಿದ್ದಾರೆ. ಈ ಕೇಸ್‌ನಿಂದ ಸಿದ್ದರಾಮಯ್ಯ ಅವರಿಗೆ ಕ್ಲೀನ್‌ಚಿಟ್ ಸಿಕ್ಕಿದೆ. ಈ ಅಕ್ರಮ ನಡೆದಿರುವುದು ಬಿಜೆಪಿ ಅವಧಿಯಲ್ಲಿ. ಈಗ ಇದರ ಹೊಣೆ ಬಿಜೆಪಿ–ಜೆಡಿಎಸ್‌ನವರು ಹೊರಬೇಕು. –ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ



ಲೋಕಾಯುಕ್ತ ಸ್ವತಂತ್ರ ಸಂಸ್ಥೆ. ಈ ಸಂಸ್ಥೆಯ ಮೇಲೆಯೇ ಬಿಜೆಪಿ ನಂಬಿಕೆ ಇಲ್ಲ ಎಂದು ಹೇಳಿದರೆ ಅಷ್ಟು ಸರಿ. ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ನಡೆಸಿದರೆ ನಾವೇನು ಮಾಡಬೇಕು. ಮರಣದಂಡನೆ ವಿಧಿಸಬೇಕೆ. ಸರಿಯಾದ ದಾಖಲೆಗಳನ್ನು ನೀಡಿ, ಪ್ರತಿಭಟನೆ ನಡೆಸಲಿ. –ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ

ಅದೃಷ್ಟ ಎರಡೂ ಗಟ್ಟಿಯಾಗಿದೆ

ಎಂದು ನನ್ನ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದೆ ಎಂದರು. ನನ್ನ ಅಕ್ಕನ ಮಗ ಪಡೆದಿರುವ ನಿವೇಶ ನಕ್ಕೂ, ನನಗೂ ಯಾವುದೇ ಸಂಬಂಧವಿಲ್ಲ. ಒಂದು ವೇಳೆ ಸಂಬಂಧ ಇದೆ ಎಂದು ಭಾವಿಸಿದರೆ ಕಾನೂನು ಬದ್ಧವಾಗಿ ತನಿಖೆ ಆಗಲಿ ಎಂದು ಜಿ.ಟಿ.ದೇವೇಗೌಡರು ಸವಾಲು ಹಾಕಿದರು. ಎಲ್ಲಾ ಪಕ್ಷದವರ ಮೇಲೂ ಕೇಸ್ ಇದೆ. ಹಾಗಾದರೆ ಎಲ್ಲರೂ ರಾಜೀ ನಾಮೆ ನೀಡಬೇಕಾಗುತ್ತದೆ. ಈ ಮಾತು ಹೇಳಿದಕ್ಕೆ ನಾನು ಸಿದ್ದರಾಮಯ್ಯ ಪರ ಎಂಬ ಹಣೆಪಟ್ಟಿ ಕಟ್ಟಿದರು. ಮುಡಾ ಸಭೆಯಲ್ಲಿ ಭಾಗಿಯಾಗುವಾಗ ಇದೇ ಮಾತುಗಳನ್ನು ಹೇಳುತ್ತಿದ್ದರು. ಆದರೆ ನಾನು ನೀಡುತ್ತಿದ್ದ ಹೇಳಿಕೆ ಹಾಗೂ ಅಭಿಪ್ರಾಯಗಳು ಪೂರ್ವಾಗ್ರಹ ಪೀಡಿತವಿಲ್ಲದೆ ವಾಸ್ತವವಾಗಿತ್ತು ಎಂದು ಜಿ.ಟಿ.ದೇವೇಗೌಡರು ಹೇಳಿದರು.

20 ಕೋಟಿ ಬಿಡುಗಡೆ

ನೀಡಿದ್ದಲ್ಲದೆ, 200 ಕೋಟಿ ರೂ. ವೆಚ್ಚದಲ್ಲಿ ಅತ್ಯಾಧುನಿಕ ಬಸ್ ನಿಲ್ದಾಣ ನಿರ್ಮಾಣಕ್ಕೂ ಹಸಿರು ನಿಶಾನೆ ತೋರಿತ್ತು. ಇದರ ಬೆನ್ನಲ್ಲೇ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಸದಾಕಾಲ ವಸ್ತು ಪ್ರದರ್ಶನ ನಡೆಸುವ ಉದ್ದೇಶದಿಂದ ಕಾಂಪ್ಲೆಕ್ಸ್ ನಿರ್ಮಾಣ ಮತ್ತು ಅಭಿವೃದ್ಧಿಗೆ ಸರ್ಕಾರ ತೀರ್ಮಾನಿಸಿದೆ. ದಸರಾ ವೇಳೆ ವಸ್ತು ಪ್ರದರ್ಶನಕ್ಕಷ್ಟೇ ಸೀಮಿತಗೊಂಡಿದ್ದ ಈ ಜಾಗದಲ್ಲಿ ಕೆಲವೊಮ್ಮೆ ಇತರೆ ಕಾರ್ಯ ಕ್ರಮಗಳು ನಡೆಯುತ್ತಿದ್ದವು. ಸ್ಥಳೀಯರು ಮತ್ತು ಪ್ರವಾಸಿಗರಿಗೆ ಒಂದೇ ಸೂರಿನಡಿ ದೇಶೀಯ ಮತ್ತು ವಿಶ್ವಮಟ್ಟದ ವಸ್ತು ಪ್ರದರ್ಶನ ಅಭಿವೃದ್ಧಿ ಕೈಗೊಳ್ಳಲಾಗುತ್ತಿದೆ.

ಫೈನಾನ್ಸ್ ಕಂಪನಿಗಳಿಗೆ ಕಡಿವಾಣ: ಮೈಕ್ರೊ ಫೈನಾನ್ಸ್ ಕಂಪನಿ ಮತ್ತು ಖಾಸಗಿ ಲೇವಾದೇವಿಗಾರರಿಗೆ ಕಡಿವಾಣ ಹಾಕುವ ಉದ್ದೇಶದಿಂದ ಕರ್ನಾಟಕ ಅಧಿಕ ಬಡ್ಡಿ ನಿಷೇಧ, ಕರ್ನಾಟಕ ಗಿರವಿದಾರರು, ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕಕ್ಕೆ ಸಂಪುಟ ಅನುಮೋದನೆ ನೀಡಿದೆ.

ಅಂಬೇಡ್ಕರ್ ವಿದ್ಯಾರ್ಥಿ ನಿಲಯ: ಸಮಾಜ ಕಲ್ಯಾಣ ಇಲಾಖೆಯ 63 ಡಾ.ಅಂಬೇಡ್ಕರ್ ವಿದ್ಯಾರ್ಥಿ ನಿಲಯ ಗಳ ಕಟ್ಟಡಗಳನ್ನು 441 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಸಂಪುಟ ಅನುಮೋದನೆ ನೀಡಿದೆ. ಸೂರಿಲ್ಲದ 10,000 ಮೀನುಗಾರರಿಗೆ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಮನೆ ನೀಡಲು ಸಂಪುಟ ಸಮ್ಮತಿಸಿದೆ. ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ಹಾಗೂ ಬೆಂಗಳೂರಿನ ಐಐಟಿ–ಬಿ ಸಂಸ್ಥೆಯ ಮೂಲಸೌಕರ್ಯ ವಿಸ್ತೀರ್ಣ ಯೋಜನೆಗೆ 817 ಕೋಟಿ ರೂ. ಮಂಜೂರು ಮಾಡಲಾಗಿದೆ.

ಹಾಸನ ಜಿಲ್ಲೆ ಅರಸೀಕೆರೆಯ ಬಾಣಾವರ ಪಂಚಾಯತ್ ಅನ್ನು ಪಟ್ಟಣ ಪಂಚಾಯತ್ ಆಗಿ ಉನ್ನತೀಕರಣಕ್ಕೆ ಅನುಮೋದನೆ ನೀಡಲಾಗಿದೆ. ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿ 5,000 ಆಧುನಿಕ ಉಪಕರಣಗಳ ಖರೀದಿಗೆ 175 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

61 ವಸತಿ ಶಾಲೆಗೆ ಸ್ವಂತ ಕಟ್ಟಡ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಡೆಸುವ 61 ವಸತಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ 1,292.50 ಕೋಟಿ ರೂ. ಅಂದಾಜು ವೆಚ್ಚಕ್ಕೆ ಸಂಪುಟ ಅನುಮೋದನೆ ನೀಡಿದೆ.

ಪ್ರಕ್ರಿಯೆ ಆರಂಭ

ಕಲಂ 55 ರಡಿ ಗಲಾಟೆಗೆ ಕಾರಣರೆಂದು ಹೇಳಲಾಗಿರುವ ಸತೀಶ್ ಅವರನ್ನು ಗಡಿಪಾರು ಮಾಡಲು ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿ ಮತ್ತು ಉಪ ಪೊಲೀಸ್ ಆಯುಕ್ತ ಮುತ್ತುರಾಜ್, ನಗರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಗಡಿಪಾರು ಮಾಡಲು ಕಾರಣ ಕೇಳಿ ಸತೀಶ್‌ಗೆ ನ್ಯಾಯಾಲಯ ನೋಟಿಸ್ ಜಾರಿ ಮಾಡಿದೆ.

ಪೊಲೀಸ್ ಗುಪ್ತ ಮಾಹಿತಿ ಸಿಬ್ಬಂದಿ ಹಾಗೂ ಪೊಲೀಸ್ ಬಾತ್ಮೀಯದಾರರಿಂದ ಮಾಹಿತಿ ಕಲೆ ಹಾಕಿದ್ದು, ನಿಮಗೆ ಜೀವ ಹಾನಿ ಹಾಗೂ ಆಸ್ತಿ ಪಾಸ್ತಿಗಳಿಗೆ ನಷ್ಟ ಉಂಟಾಗುವ ಸಂಭವ ವಿದೆ ಕಿಡಿಗೇಡಿಗಳು ಇದೇ ವಿಚಾರ ಮುಂದಿಟ್ಟುಕೊಂಡು ಮತ್ತೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಡಿಸುವ ಸಾಧ್ಯತೆಗಳಿವೆ ಎಂದು ಎಚ್ಚರಿಸಿದ್ದಾರೆ.

ಈ ಪ್ರಕರಣ ಪರಿಶೀಲನೆ ಮಾಡಿದಾಗ ನೀವು ಅಪರಾಧಿ ಹಿನ್ನೆಲೆಯುಳ್ಳ ವ್ಯಕ್ತಿತ್ವ ಹೊಂದಿರುವುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ನಗರ ವ್ಯಾಪ್ತಿಯಿಂದ ನಿರ್ದಿಷ್ಟ ಅವಧಿವರೆಗೆ ಗಡಿಪಾರು ಮಾಡಬೇಕೆಂದು ಉದಯಗಿರಿ ಪೊಲೀಸ್ ಇನ್ಸ್‌ಪೆಕ್ಟರ್ ಸುಧಾಕರ್ ವರದಿ ನೀಡಿದ್ದಾರೆ ಎಂದು ಹೇಳಿದ್ದಾರೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮೈಸೂರು ನಗರದಿಂದ ಬೇರೆಡೆಗೆ ನಿಮ್ಮನ್ನು ಗಡಿಪಾರು ಮಾಡಲು ಆದೇಶಿಸಬೇಕಾಗಿದೆ. ಹಾಗಾಗಿ ನ್ಯಾಯಾಲಯಕ್ಕೆ ಹಾಜರಾಗಿ ನಿಮ್ಮ ವಿವರಣೆ ನೀಡುವಂತೆ ನ್ಯಾಯಾಲಯ ಸತೀಶ್‌ಗೆ ಆದೇಶಿಸಿದೆ. ನ್ಯಾಯಾಲಯದ ಮುಂದೆ ಹಾಜರಾಗದಿದ್ದರೆ ನಿಮ್ಮ ವಿರುದ್ಧ ಏಕಪಕ್ಷೀಯ ಕ್ರಮ ಕೈಗೊಳ್ಳಲಾಗುವುದು ಎಂದು ಮುತ್ತುರಾಜ್ ಎಚ್ಚರಿಸಿದ್ದಾರೆ. ನ್ಯಾಯಾಲಯದ ಆದೇಶದಂತೆ ಸತೀಶ್ ಇಂದು ನ್ಯಾಯಾಲಯದ ಮುಂದೆ ಹಾಜರಾಗಿ ವಿವರಣೆ ನೀಡಲು ಮತ್ತಷ್ಟು ಕಾಲಾವಕಾಶ ಕೇಳಿದರು. ಇದನ್ನು ಪುರಸ್ಕರಿಸಿದ ನ್ಯಾಯಾಲಯ ಕಾಲಾವಕಾಶ ನೀಡಿದೆ.

ದೆಹಲಿ ಮುಖ್ಯಮಂತ್ರಿಯಾಗಿ ರೇಖಾ ಗುಪ್ತಾ ಪ್ರಮಾಣ ವಚನ

ಆರೂ ಸಚಿವರೂ ಶಪಥ

ನವದೆಹಲಿ, ಫೆ.20– ದೆಹಲಿಯ ನೂತನ ಮುಖ್ಯಮಂತ್ರಿಯಾಗಿ ಇಂದು ಗುರುವಾರ ರೇಖಾ ಗುಪ್ತಾ ಪ್ರಮಾಣ ವಚನ ಸ್ವೀಕರಿಸಿದರು. ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರಿಗೆ ಅಧಿಕಾರ ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು. ದೆಹಲಿಯ 9ನೇ ಮುಖ್ಯಮಂತ್ರಿಯಾಗಿ ರೇಖಾ ಗುಪ್ತಾ ಅವರ ಜೊತೆಗೆ ಹೊಸದಾಗಿ ಆಯ್ಕೆಯಾದ ಆರು ಶಾಸಕರು– ಪರ್ವೇಶ್ ವರ್ಮಾ, ಆಶಿಶ್‌ಸೂದ್, ಪಂಕಜ್ ಸಿಂಗ್, ಮಂಜಿಂದರ್ ಸಿಂಗ್ ಸಿರ್ಸಾ, ಕಪಿಲ್ ಮಿಶ್ರಾ ಮತ್ತು ರವೀಂದರ್ ಇಂದ್ರಜ್ ನೂತನ ಸಚಿವರುಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು.

ದೆಹಲಿಗೆ ನಾಲ್ಕನೇ ಮಹಿಳಾ ಮುಖ್ಯ ಮಂತ್ರಿ: ಈ ಮೂಲಕ ದೆಹಲಿಯಲ್ಲಿ ನಾಲ್ಕನೇ ಬಾರಿಗೆ ಮಹಿಳಾ ಶಾಸಕರೊಬ್ಬರು ಮುಖ್ಯಮಂತ್ರಿಯಾಗಿದ್ದಾರೆ. ಈ ಹಿಂದೆ ಬಿಜೆಪಿಯಿಂದ ಸುಷ್ಮಾ ಸ್ವರಾಜ್, ಕಾಂಗ್ರೆಸ್‌ನಿಂದ ಶೀಲಾ ದೀಕ್ಷಿತ್, ಆಮ್ ಆದ್ಮಿ ಪಾರ್ಟಿಯಿಂದ ಆತಿಶಿ ದೆಹಲಿಯ ಮುಖ್ಯ ಮಂತ್ರಿಯಾ ಗಿದ್ದರು. ದೆಹಲಿಯಲ್ಲಿ ಬಿಜೆಪಿ 26 ವರ್ಷಗಳ ನಂತರ ಅಧಿಕಾರಕ್ಕೆ ಮರಳಿದ್ದು, ರಾಮಲೀಲಾ ಮೈದಾನದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ಏರ್ಪಟ್ಟಿದ್ದು, ಪ್ರಧಾನಿ ನರೇಂದ್ರ ಮೋದಿ, ಇತರ ಹಿರಿಯ ಬಿಜೆಪಿ ನಾಯಕರು ಮತ್ತು ಎನ್‌ಡಿಎ ಮಿತ್ರಪಕ್ಷಗಳ ನಾಯಕರು ಭಾಗವಹಿಸಿದ್ದಾರೆ. ನಿನ್ನೆ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ 50 ವರ್ಷದ ಮೊದಲ ಬಾರಿ ಶಾಸಕಿಯಾಗಿರುವ ರೇಖಾ ಗುಪ್ತಾ ಅವರನ್ನು 8ನೇ ದೆಹಲಿ ವಿಧಾನಸಭೆಯ ನಾಯಕಿ ಯಾಗಿ ಆಯ್ಕೆ ಮಾಡಲಾಯಿತು. ಪಕ್ಷದ ನಾಯಕರ ಪ್ರಕಾರ, ರೋಹಿಣಿ ಕ್ಷೇತ್ರದ ಬಿಜೆಪಿ ಶಾಸಕ ವಿಜೇಂದರ್ ಗುಪ್ತಾ ಅವರನ್ನು ದೆಹಲಿ ವಿಧಾನಸಭೆಯ ಹೊಸ ಸ್ಪೀಕರ್ ಆಗಿ ನೇಮಿಸಲಾಗಿದೆ.



ಮುಖ್ಯಮಂತ್ರಿ ರೇಖಾ ಗುಪ್ತಾ

ಮಹಿಳೆಯರಿಗೆ ಮಾಸಿಕ 2,500 ರೂ.: ಮುಖ್ಯಮಂತ್ರಿ ರೇಖಾ ಗುಪ್ತಾ ನೇತೃತ್ವದ ಹೊಸ ಸಚಿವರ ಮಂಡಳಿಯು ಇಂದು ಅಪರಾಹ್ನ 3 ಗಂಟೆ ಸುಮಾರಿಗೆ ದೆಹಲಿ ಸಚಿವಾಲಯದಲ್ಲಿ ತನ್ನ ಮೊದಲ ಸಭೆ ನಡೆಸುವ ಸಾಧ್ಯತೆಯಿದೆ. ಮಹಿಳಾ ಸಮೃದ್ಧಿ ಯೋಜನೆಯನ್ನು ಜಾರಿಗೆ ತರಬಹುದು, ಇದರ ಅಡಿಯಲ್ಲಿ ಅರ್ಹ ಮಹಿಳೆಯರು ಮಾಸಿಕ 2,500 ರೂಪಾಯಿಗಳ ಪಾವತಿಯನ್ನು ಪಡೆ ಯುತ್ತಾರೆ ಮತ್ತು ಆಯುಷ್ಮಾನ್ ಭಾರತ್ ಆರೋಗ್ಯ ವಿಮಾ ಯೋಜನೆ ಸೌಲಭ್ಯ ಪಡೆಯುತ್ತಾರೆ. ಫೆಬ್ರವರಿ 5 ರಂದು ನಡೆದ ವಿಧಾನಸಭಾ ಚುನಾವಣೆಯಲ್ಲಿ 70 ಸ್ಥಾನಗಳಲ್ಲಿ 48 ಸ್ಥಾನ ಗಳನ್ನು ಗೆದ್ದು ದೆಹಲಿಯಲ್ಲಿ ಅರವಿಂದ್ ಕೇಜ್ರಿವಾಲ್ ನೇತೃತ್ವದ ಎಎಪಿಯ ದಶಕದ ಆಡಳಿತವನ್ನು ಬಿಜೆಪಿ ಕೊನೆ ಗೊಳಿಸಿತು. 1993–98ರಲ್ಲಿ ಬಿಜೆಪಿ ಕೊನೆಯ ಬಾರಿಗೆ ದೆಹಲಿಯಲ್ಲಿ ಅಧಿಕಾರದಲ್ಲಿತ್ತು. ರೇಖಾ ಗುಪ್ತಾ ಅವರು, ರಾಷ್ಟ್ರೀಯ ಸ್ವಯಂಸೇವಕ ಸಂಘ ದೊಂದಿಗೆ ನಿಕಟ ಸಂಬಂಧವನ್ನು ಹಂಚಿ ಕೊಂಡಿದ್ದಾರೆ. ದೆಹಲಿ ವಿಶ್ವವಿದ್ಯಾಲಯದ ಮಾಜಿ ವಿದ್ಯಾರ್ಥಿ ಒಕ್ಕೂಟದ (ಡಿಯುಎಸ್‌ಯು) ಅಧ್ಯಕ್ಷೆ ಮತ್ತು ನಾಗರಿಕ ಮಂಡಳಿ ಸದಸ್ಯೆಯಾಗಿರುವ ಅವರು ಮದನ್ ಲಾಲ್ ಖುರಾನಾ, ಸಾಹಿಬ್ ಸಿಂಗ್ ವರ್ಮಾ ಮತ್ತು ಸುಷ್ಮಾ ಸ್ವರಾಜ್ ನಂತರ ದೆಹಲಿಯ ನಾಲ್ಕನೇ ಬಿಜೆಪಿ ಮುಖ್ಯಮಂತ್ರಿಯಾಗಿದ್ದಾರೆ. ಬಿಜೆಪಿ ಆಡಳಿತವಿರುವ ಎಲ್ಲಾ ರಾಜ್ಯಗಳಲ್ಲಿ ಪ್ರಸ್ತುತ ಏಕೈಕ ಮಹಿಳಾ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಅವರಿಗಿದೆ. ಈ ತಿಂಗಳ ಆರಂಭದಲ್ಲಿ ನಡೆದ ದೆಹಲಿ ವಿಧಾನ ಸಭಾ ಚುನಾವಣೆಯಲ್ಲಿ ಅವರು ಎಎಪಿ ಅಭ್ಯರ್ಥಿ ಬಂದಾನ ಕುಮಾರಿ ಅವರನ್ನು 29,000 ಕ್ಕೂ ಹೆಚ್ಚು ಮತಗಳಿಂದ ಸೋಲಿಸಿ ಶಾಲಿಮಾರ್ ಬಾಗ್ ಸ್ಥಾನವನ್ನು ಗೆದ್ದರು.

ಬಜೆಟ್ ನಂತರ ನಂದಿನಿ ಹಾಲಿನ ದರ ಲೀಟರ್‌ಗೆ 5 ರೂ. ಹೆಚ್ಚಳ

ಬೆಂಗಳೂರು, ಫೆ.20– ಈಗಾಗಲೇ ದಿನಬಳಕೆ ವಸ್ತುಗಳ ಏರಿಕೆಯಿಂದ ಕಂಗೆಟ್ಟಿರುವ ಜನರಿಗೆ ಮುಂಬರುವ ದಿನಗಳಲ್ಲಿ ಮತ್ತಷ್ಟು ಕೈ ಸುಡಲಿದೆ. ಮಾರ್ಚ್‌ನಲ್ಲಿ ಚಹಾ, ಕಾಫಿ, ಮೊಸರು ಮತ್ತು ಇತರ ಹಾಲಿನ ಪದಾರ್ಥಗಳ ಬೆಲೆ ಏರಿಕೆ ಯಾಗಲಿದೆ. ಮಾ.7ರಂದು ರಾಜ್ಯ ಬಜೆಟ್ ಮಂಡನೆಯಾದ ಬೆನ್ನಲ್ಲೇ ಲೀಟರ್ ನಂದಿನಿ ಹಾಲಿನ ದರ 5 ರೂ. ಏರಿಕೆಯಾಗಲಿದೆ. ಹಾಲಿನ ಪ್ರಮಾಣವನ್ನು ಸಹ ಹಾಲಿ ಇರುವ 1,050 ಮಿಲಿಯಿಂದ ಒಂದು ಲೀಟರ್‌ಗೆ ಇಳಿಸಲಾಗುವುದು. ಇದರೊಂದಿಗೆ ಒಂದು ಲೀಟರ್ ನಂದಿನಿ ಟೋನ್ಡ್ ಹಾಲಿನ ಬೆಲೆ 47 ರೂ.ಗೆ ಏರಿಕೆಯಾಗಲಿದೆ.

ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಕಳೆದ ಮೂರು ವರ್ಷಗಳಲ್ಲಿ ಮಾಡಿರುವ ಅತೀ ಹೆಚ್ಚು ದೊಡ್ಡ ಬೆಲೆ ಏರಿಕೆ ಇದಾಗಿದೆ. ಈ ಹಿಂದೆ 2022ರಲ್ಲಿ ಪ್ರತಿ ಲೀಟರ್ ಹಾಲಿನ ದರವನ್ನು ಲೀಟರ್‌ಗೆ 3 ರೂ.ಏರಿಸಲಾಗಿತ್ತು. 2024 ರಲ್ಲಿ, ಕೆಎಂಎಫ್ ಹಾಲಿನ ದರವನ್ನು ಪ್ರತಿ ಪ್ಯಾಕೆಟ್‌ಗೆ ರೂ 2 ಹೆಚ್ಚಿಸಿತು ಮತ್ತು ಪ್ರತಿ ಪ್ಯಾಕೆಟ್‌ನ ಪ್ರಮಾಣವನ್ನು 50 ಮಿಲಿ ಹೆಚ್ಚಿಸಿತು. ಆದಾಗ್ಯೂ, 2024ರಲ್ಲಿ ಪೂರೈಕೆಯಾಗುವ ಹಾಲಿನ ಪ್ರಮಾಣವೂ ಹೆಚ್ಚಾಗಿರುವುದರಿಂದ ಬೆಲೆ ಏರಿಕೆಯಾಗಿರಲಿಲ್ಲ ಎಂದು ಕೆಎಂಎಫ್ ಮುಂದುವರಿಸಿತ್ತು.



ಕಾಫಿ ಬ್ರೂವರ್ಸ್ ಅಸೋಸಿಯೇಷನ್ ಮಾರ್ಚ್ ವೇಳೆಗೆ ಕಾಫಿ ಪುಡಿಯ ಬೆಲೆಯನ್ನು ಕೆಜಿಗೆ 200 ರೂಪಾಯಿಗಳಷ್ಟು ಹೆಚ್ಚಿಸುವುದಾಗಿ ಘೋಷಿಸಿದ ನಂತರ ಹಾಲಿನ ಬೆಲೆ ಏರಿಕೆ ನಾಗರಿಕರಿಗೆ ಮತ್ತೊಂದು ಹೊಡೆತವಾಗಿದೆ. ಬಿಎಂಟಿಸಿ ಬಸ್‌ಗಳು ಮತ್ತು ನಮ್ಮ ಮೆಟ್ರೋದ ಟಿಕೆಟ್ ದರವನ್ನು ಸಹ ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾರವೂ ನೀರಿನ ದರ ಹೆಚ್ಚಿಸುವ ಕೆಲಸ ಮಾಡುತ್ತಿದೆ. ಮುಂಬರುವ ಹಣಕಾಸು ವರ್ಷಕ್ಕೆ ವಿದ್ಯುತ್ ದರವನ್ನು 67 ಪೈಸೆ ಹೆಚ್ಚಿಸುವಂತೆ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ಕರ್ನಾಟಕ ವಿದ್ಯುಚ್ಛಕ್ತಿ ಆಯೋಗಕ್ಕೆ ಮನವಿ ಸಲ್ಲಿಸಿವೆ.

ರೈತರು 5 ಲೀಟರ್ ಹೆಚ್ಚಳಕ್ಕೆ ಒತ್ತಾಯಿಸಿದ್ದಾರೆ. ಇನ್ನು ಅಂತಿಮ ನಿರ್ಧಾರ ಮುಖ್ಯಮಂತ್ರಿಯವರದ್ದು. ರಾಜ್ಯ ಬಜೆಟ್ ನಂತರ ಇದು ಜಾರಿಗೆ ಬರಲಿದೆ ಎಂದು KMF ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಳಿಸಿದ್ದಾರೆ.

ಈ ಹಿಂದೆ ನಾವು ದಿನಕ್ಕೆ 85–89 ಲಕ್ಷ ಲೀಟರ್ ಸಂಗ್ರಹಿಸುತ್ತಿದ್ದೆವು. ಈಗ ದಿನಕ್ಕೆ 99 ಲಕ್ಷ ಲೀಟರ್ ಮತ್ತು ಅದಕ್ಕಿಂತ ಹೆಚ್ಚಿಗೆಯಾಗಿದೆ. ಈಗ ನಾವು ದಿನಕ್ಕೆ 79–81 ಲಕ್ಷ ಲೀಟರ್ ಪಡೆಯುತ್ತಿದ್ದೇವೆ. ಆದ್ದರಿಂದ ಗ್ರಾಹಕರಿಗೆ ಸರಬರಾಜು ಮಾಡುವ ಹೆಚ್ಚುವರಿ ಹಾಲು ನಿಲ್ಲಿಸಲಾಗುತ್ತದೆ ಎಂದು ಶಿವಸ್ವಾಮಿ ಹೇಳಿದರು, ಇತರ ರಾಜ್ಯಗಳಿಗೆ ಹೋಲಿಸಿದರೇ ಕರ್ನಾಟಕದಲ್ಲಿ ಹಾಲಿನ ದರವು ಇತರ ರಾಜ್ಯಗಳಲ್ಲಿ ಆನ್‌ಲೈನ್‌ನಲ್ಲಿ ಮಾರಾಟವಾಗುವುದಕ್ಕಿಂತ ಕಡಿಮೆ ಇರುತ್ತದೆ.

ತಾತ್ವಿಕವಾಗಿ, ಹೆಚ್ಚಿದ ವೆಚ್ಚವು ರೈತರಿಗೆ ಹೋಗಬೇಕು, ಆದರೆ ಇತ್ತೀಚಿನ ದಿನಗಳಲ್ಲಿ, ನೌಕರರ ಒಕ್ಕೂಟವು 7ನೇ ವೇತನ ಆಯೋಗದ ವೇತನ ಮತ್ತು ಪಿಂಚಣಿ ಸೇರಿದಂತೆ ಅನೇಕ ಸಮಸ್ಯೆಗಳ ಬಗ್ಗೆ ಬೇಡಿಕೆ ಮುಂದಿರಿಸಿದ್ದಾರೆ. ಹೀಗಾಗಿ ಎಲ್ಲವನ್ನೂ ಲೆಕ್ಕ ಹಾಕಬೇಕು' ಎಂದು ಕೆಎಂಎಫ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 21 ಫೆಬ್ರವರಿ 2025

ಸಿಎಂ ಸಿದ್ದರಾಮಯ್ಯ ಆರೋಗ್ಯ ವಿಚಾರಣೆ...



ಮಂಡಿ ನೋವಿನಿಂದ ಬಳಲುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಅವರ ಪುತ್ರಿ ಪ್ರತಿಮಾ ಪ್ರಸಾದ್ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಈ ವೇಳೆ ಪ್ರಕಾಶಕ ಭರತ್ ರಾಮಸ್ವಾಮಿ, ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿ ಬಳಗದ ಅಧ್ಯಕ್ಷ ಪಿ.ನಂದ ಕುಮಾರ್, ಕೋಟೆಹುಂಡಿ ಮಹದೇವು, ಕಿರಣ್‌ಕುಮಾರ್ ಇತರರು ಉಪಸ್ಥಿತರಿದ್ದರು.

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಣೆ



ಮೈಸೂರಿನ ಬೆಳವಾಡಿಯಲ್ಲಿರುವ ಸೈನಿಕ ಅಕಾಡೆಮಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಚಿಕ್ಕವಯಸ್ಸಿನಿಂದಲೇ ತನ್ನ ತಾಯಿಯಿಂದ ಪ್ರಭಾವಿತರಾಗಿ ಹಿಂದುತ್ವವನ್ನು ಉಳಿಸಿ, ಬೆಳೆಸಿದ ವೀರನಿಗೆ ಗೌರವ ಸಲ್ಲಿಸಲಾಯಿತು. ಸೈನಿಕ ಅಕಾಡೆಮಿ ಸಂಸ್ಥಾಪಕ ಸಿ.ಎಂ.ಶ್ರೀಧರ, ಅಧ್ಯಾಪಕ ವಿಜಯ್‌ಕುಮಾರ್ ಇತರರು ಈ ವೇಳೆ ಉಪಸ್ಥಿತರಿದ್ದರು.

ಮೈಸೂರು ವಿವಿ ನೌಕರರ ವೇದಿಕೆಯಿಂದ ಕ್ಯಾಲೆಂಡರ್ ಬಿಡುಗಡೆ; ಪತ್ರಕರ್ತರು, ವಿದ್ಯಾರ್ಥಿಗಳಿಗೆ ಪುರಸ್ಕಾರ



ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯದ ನೌಕರರ ವೇದಿಕೆ ವತಿಯಿಂದ ಮಾನಸಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಗುರುವಾರ ಪತ್ರಿಕೋದ್ಯಮಿ ರಾಜಶೇಖರ ಕೋಟಿ ಅವರ ಸ್ಮರಣಾರ್ಥ ಪತ್ರಕರ್ತರಿಗೆ ರಾಜಶೇಖರ ಕೋಟಿ ಸ್ಮರಣಾರ್ಥ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಫೆ.20(ಎಂಟಿವೈ)– ವಿಶ್ವ ಮಾನವ ಮೈಸೂರು ವಿಶ್ವವಿದ್ಯಾನಿಲಯದ ನೌಕರರ ವೇದಿಕೆ ವತಿಯಿಂದ ಪತ್ರಿಕೋದ್ಯಮಿ ರಾಜಶೇಖರ ಕೋಟಿ ಅವರ ಸ್ಮರಣಾರ್ಥ 6ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮತ್ತು ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ, ಪ್ರತಿಭಾವಂತ ವಿದ್ಯಾರ್ಥಿಗಳ ಪುರಸ್ಕರಿಸಲಾಯಿತು.

ಮೈಸೂರು ವಿವಿಯ ಇಎಂಆರ್‌ಸಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಪತ್ರಕರ್ತರಾದ ಎಂ.ಟಿ.ಮಹದೇವ, ಎಂ.ಬಿ. ಪವನಮೂರ್ತಿ, ಐತಿಚಂಡ ರಮೇಶ್ ಉತ್ತಪ್ಪ, ಕೆ.ನರಸಿಂಹಮೂರ್ತಿ, ಗಿರೀಶ್ ಹುಣ ಸೂರು, ಆರ್.ವಿರೇಂದ್ರಪ್ರಸಾದ್, ಶೇಖರ್ ಗೋಪಿನಾಥಂ, ಪತ್ರಿಕಾ ಛಾಯಾ ಗ್ರಾಹಕ ಕೆ.ಹೆಚ್.ಚಂದ್ರು ಅವರಿಗೆ ರಾಜಶೇಖರ ಕೋಟಿ ಸ್ಮರಣಾರ್ಥ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಲ್ಲದೆ, ಯುವರಾಜ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ಕೆ.ಮಹೇಶ್, ಪ್ರಧಾನ ಅರ್ಚಕ ಲಕ್ಷ್ಮೀಶ್‌ಶರ್ಮ, ಮೈಸೂರು ವಿವಿಯಿಂದ ಚಿನ್ನದ ಪದಕ ಪಡೆದ ಎಂ.ಆರ್.ಭೂಮಿಕಾ, ಯು.ಎ. ಕಾವ್ಯಶ್ರೀ, ಪಿ.ಕೆ.ಸಂಗೀತಾ, ಎನ್.ಹರ್ಷಿತ್, ಶ್ರೀನಿವಾಸ್, ಸ್ಫೂರ್ತಿ ಮಹೇಶ್, ಬಸಮ್ಮ ವಡ್ಡರಗುಡ್, ಎ.ಎನ್.ಸುಮತಿ, ಆರ್.ದೇವಾನಂದ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಾದ ಎನ್.ರಕ್ಷಿತಾ, ಯು.ಲಿಖಿತಶ್ರೀ, ನಿರ್ಮತ ಮಹೇಶ್, ಎಸ್.ಭೂಮಿಕಾ, ಎ.ಎಸ್.ಪ್ರಾರ್ಥನಾ, ಲಿಖಿತ ಶಿವಕುಮಾರಸ್ವಾಮಿ, ಎಸ್.ವರುಣ್ ಅವರನ್ನು ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ, ಸ್ಮರಣಿಕೆ ನೀಡಿ, ಅಭಿನಂದಿಸಲಾಯಿತು.

ಇದೇ ವೇಳೆ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ವಿಶ್ವಮಾನವ ಹೆಸರಿಗೆ ಚ್ಯುತಿ ಬರದಂತೆ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯದ ನೌಕರರ ವೇದಿಕೆ ಕಾರ್ಯನಿರ್ವಹಿಸುತ್ತಿವೆ. ಮೈಸೂರು ವಿವಿ ಇರುವವರೆಗೂ ವೇದಿಕೆ ಅಸ್ತಿತ್ವದಲ್ಲಿದ್ದು, ಸಮಾಜಮುಖಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮಾತನಾಡಿ, ಮನುಷ್ಯರ ಹುಟ್ಟು ಆಕಸ್ಮಿಕ. ಆದರೆ, ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ತನಿಖಾ ಪತ್ರಿಕೋದ್ಯಮ ತೀರಾ ಕಡಿಮೆಯಾಗಿದೆ. ಇಂದು ಸಮಾಜ ಮುಖಿ ಕೆಲಸ ಕೇವಲ ಮಾಧ್ಯಮಗಳಿಂದ ಮಾತ್ರ ಸಾಧ್ಯವಾಗದು. ಇವುಗಳೊಂದಿಗೆ ಸಾರ್ವಜನಿಕರ ಸಹಕಾರ ಅಗತ್ಯ ಎಂದು ತಿಳಿಸಿದರು.

ಆಂದೋಲನ ದಿನಪತ್ರಿಕೆ ವ್ಯವಸ್ಥಾಪಕ ಸಂಪಾದಕಿ ರಶ್ಮಿ ಕೋಟಿ ಮಾತನಾಡಿ, ಪತ್ರಿಕೋದ್ಯಮ ಉದ್ಯೋಗವಷ್ಟೇ ಅಲ್ಲ. ಸಮಾಜಕ್ಕೆ ಧ್ವನಿಯಾಗಿ ದೊಡ್ಡ ಜವಾಬ್ದಾರಿ ಹೊಂದಿದೆ. ಪ್ರತಿಕೋದ್ಯಮ ಸತ್ಯ, ನ್ಯಾಯ ಪರ ನಿಲ್ಲಬೇಕು. ಕೇವಲ ಸುದ್ದಿ ಪ್ರಕಟಿಸುವ ಮಾಧ್ಯಮವಾಗಬಾರದು. ಸಮಾಜದ ಕನ್ನಡಿಯಾಗಬೇಕು ಎಂದರು.

ಪ್ರಶಸ್ತಿ ಸ್ವೀಕರಿಸಿದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಮಾತನಾಡಿ, ಮೈಸೂರಿನಲ್ಲಿ ಕಳೆದ ಮೂರ್ನಾಲ್ಕು ತಿಂಗಳಿಂದ ಕೆಲಸ ಮಾಡುತ್ತಿದ್ದೇನೆ. ರಾಜಶೇಖರ ಕೋಟಿ ಅವರ ಬಗ್ಗೆ ಬಹುತೇಕರು ಒಳ್ಳೆಯ ಅಭಿಮಾನದ ಮಾತುಗಳನ್ನಾಡುತ್ತಾರೆ. ಅವರ ವ್ಯಕ್ತಿತ್ವ, ಹೆಸರಿನಲ್ಲಿರುವ ಕೋಟಿ ಅಂತೆ ಬೆಳೆಬಾಳುವಂತದ್ದು. ಅವರ ಆದರ್ಶಗಳು ಸಮಾಜಕ್ಕೆ ಮಾದರಿಯಾಗಬೇಕು ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ ಮಾತನಾಡಿ, ಯುವ ಸಮೂಹವನ್ನು ಒಳ್ಳೆಯ ದಾರಿಯೆಡೆಗೆ ಕೊಂಡ್ಯೊಯ್ಯುವ ಜವಾಬ್ದಾರಿ ಪತ್ರಿಕೋದ್ಯಮದ ಮೇಲೆ ಇದೆ. ಆದರೆ, ಇಂದು ಪತ್ರಿಕೋದ್ಯಮದ ಆಯಾಮ ಬದಲಾವಣೆ ಆಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಗಳ ಸತ್ಯಾಸತ್ಯತೆಗಳನ್ನು ಪರಿಷ್ಕರಣೆ ಮಾಡಬೇಕಿದೆ. ದೇಶದ ಪ್ರಗತಿಗೆ ಪೂರಕವಾದ ವರದಿಗಳನ್ನು ಪ್ರಕಟಿಸಿ ವಿದ್ಯಾರ್ಥಿಗಳನ್ನು ಸರಿ ದಾರಿಗೆ ಕರೆದೊಯ್ಯುವ ಕೆಲಸವನ್ನು ಪತ್ರಿಕೋದ್ಯಮ ಮಾಡಬೇಕು ಎಂದರು.

ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮಾಜ ಕಾರ್ಯವಿಭಾಗದ ಪ್ರಾಧ್ಯಾಪಕಿ ಡಾ.ಹೆಚ್.ಪಿ.ಜ್ಯೋತಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕಿ ಡಾ.ಎಂ.ಎಸ್.ಸಪ್ನಾ, ವಿಶ್ವ ಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಅಧ್ಯಕ್ಷ ಆರ್.ವಾಸುದೇವ, ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ಎಸ್.ವಿನೋದ್, ಖಜಾಂಚಿ ಕೆ.ಗಣೇಶ್, ಚೆಲುವಾಂಬಿಕೆ, ಡಾ.ಗಿರೀಶ್, ಹರೀಶ್ ಇತರರಿದ್ದರು. ಡಾ.ಬಿ.ಎಸ್.ದಿನಮಣಿ ಸ್ವಾಗತಿಸಿದರು. ಮಂಜುನಾಥ್ ಸುಬೇದಾರ್ ನಿರೂಪಿಸಿ, ವಂದಿಸಿದರು. ಅಮ್ಮ ರಾಮಚಂದ್ರ ಗೀತಗಾಯನ ನಡೆಸಿಕೊಟ್ಟರು.

ಬಜೆಟ್‌ನಲ್ಲಿ ಆರೋಗ್ಯ, ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನಕ್ಕೆ ಮನವಿ



ಎಲ್.ರಂಗಯ್ಯ

ಮೈಸೂರು,ಫೆ.20(ಜಿಎ)–ರಾಜ್ಯ ಬಜೆಟ್‌ನಲ್ಲಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಅನುದಾನವನ್ನು ನೀಡಿ ಅದನ್ನು ಸದ್ಬಳಕೆ ಮಾಡುವಂತೆ ಆಮ್ ಆದ್ಮಿ ಪಕ್ಷದ ಮೈಸೂರು ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವುದು ನಮ್ಮ ಸೌಭಾಗ್ಯ ಈ ಅಧಿಕಾರ ಇರುವಾಗ ಅದನ್ನು ಶಾಶ್ವತವಾಗಿ ಪ್ರಜೆಗಳ ಮನಸ್ಸಿನಲ್ಲಿ ಉಳಿಯುವಂತ ಕೆಲಸಗಳನ್ನು ಮಾಡಬೇಕಾಗಿದೆ. ಆದ್ದರಿಂದ ಮುಖ್ಯಮಂತ್ರಿಗಳು ಆರೋಗ್ಯ ಮತ್ತು ಶಿಕ್ಷಣಕ್ಕೆ ಕ್ಷೇತ್ರಕ್ಕೆ ಹೆಚ್ಚಿನ ಅನುದಾನವನ್ನು ನೀಡುವುದು. ಖಾಸಗಿ ಸಹಭಾಗಿತ್ವದಲ್ಲಿ ಪ್ರತಿ ಪಂಚಾಯತ್‌ನಲ್ಲಿ ಸುಸಜ್ಜಿತ ಲ್ಯಾಬ್‌ಗಳೊಂದಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಂಚಾರಿ ಆರೋಗ್ಯ ಸೇವೆಗಳನ್ನು ಒದಗಿಸಿದರೆ ಪ್ರಜೆಗಳ ಆರ್ಥಿಕ ಹೊರೆಯನ್ನು ಎಷ್ಟೋ ಇಳಿಸಬಹುದಾಗಿದೆ ಎಂದರು. ಇಂದು ಖಾಸಗಿ ಶಾಲೆಗಳಲ್ಲಿ ಫ್ರೀ ಕೆ.ಜಿ. ಮಕ್ಕಳಿಗೆ 25,000 ರೂ. ಶುಲ್ಕ ಕೊಟ್ಟು ಓದಿಸುವುದು ಫ್ಯಾಷನ್ ಆಗಿ ಬಿಟ್ಟಿದೆ. ಆದ್ದರಿಂದ ಸರ್ಕಾರಿ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡಿ, ಖಾಸಗಿ ಶಾಲೆಗಳಂತೆ ಸರ್ಕಾರಿ ಶಾಲೆಗಳಿಗೆ ಉತ್ತಮ ಬೋಧನೆ ಜೊತೆಗೆ, ಕರಾಟೆ, ಕ್ರೀಡೆ, ಯೋಗ, ಧ್ಯಾನ, ಕಲಿಸುವುದರ ಜೊತೆಗೆ ಬಸ್ಸು ವ್ಯವಸ್ಥೆ ಮಾಡುವುದರ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಒತ್ತು ನೀಡಿ ಪ್ರಜೆಗಳ ಆರ್ಥಿಕ ಹೊರೆ ತಗ್ಗಿಸಿ ಎಂದು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ಫೆ.23, ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಫೆ.20(ಜಿಎ)–ಮೈಸೂರಿನ ವಿಜಯನಗರದ 4ನೇ ಹಂತದಲ್ಲಿರುವ ಕಲಿಕೆ ಎಜುಕೇಷನ್ ಟ್ರಸ್ಟ್‌ನ ಮೊದಲ ವಾರ್ಷಿಕೋತ್ಸವ ಪ್ರಯುಕ್ತ ಫೆ.23ರಂದು ಬೆಳಿಗ್ಗೆ 9ಗಂಟೆಯಿಂದ ಮಧ್ಯಾಹ್ನ 1ರವರೆಗೆ ಆರೋಗ್ಯ ಮತ್ತು ಕಣ್ಣಿನ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಸಹ ಸ್ಥಾಪಕಿ ಅಮೂಲ್ಯ ನಾಗೇಂದ್ರ ಈ ವಿಷಯ ತಿಳಿಸಿ, ಜನತೆಗೆ ಉಚಿತ ಶಿಕ್ಷಣ ಕಾರ್ಯಾಗಾರ, ತಪಾಸಣೆ ಶಿಬಿರ ಉದ್ಘಾಟನೆಯಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ ಭಾಗವಹಿಸುವರು. ಕೆ.ವಿ.ಸಿ ಆಸ್ಪತ್ರೆ ಮತ್ತು ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಸಹಯೋಗ ನೀಡಿವೆ ಎಂದರು.

ಕೌಶಲಾಭಿವೃದ್ಧಿ ಕಾರ್ಯಕ್ರಮ, ವಿದ್ಯಾರ್ಥಿವೇತನ, ವೈದ್ಯಕೀಯ ಸಹಾಯ ಒದಗಿಸುವ ಉದ್ದೇಶವನ್ನು ಟ್ರಸ್ಟ್ ಹೊಂದಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಸಹ ಸ್ಥಾಪಕ ಮದಕರಿ ನಾಯಕ, ರಕ್ತದಾನಿ ಮಂಜು ಉಪಸ್ಥಿತರಿದ್ದರು.

ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಅನೌಪಚಾರಿಕ ಮಾತುಕತೆ



ಮೈಸೂರು ಯಾದವಗಿರಿ ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿಯ ಜ್ಞಾನಪ್ರಕಾಶ ಭವನದಲ್ಲಿ ಮಾಜಿ ಲೋಕಾಯುಕ್ತ ನ್ಯಾಯಾಮೂರ್ತಿ ಸಂತೋಷ್ ಹೆಗ್ಡೆಯವರು ಅನೌಪಚಾರಿಕ ಮಾತುಕತೆ ನಡೆಸಿದರು. ಈ ವೇಳೆ ಪ್ರಾಂಶುಪಾಲ ರಾಜಯೋಗಿ ಬ್ರಹ್ಮಕುಮಾರ ರಂಗನಾಥ್ ಶಾಸ್ತ್ರೀಜೀ, ಚಾಮರಾಜನಗರ ಜಿಲ್ಲಾ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಪ್ರಭಾಮಣೀಜಿ, ರಾಜಯೋಗಿನಿ ಬ್ರಹ್ಮಕುಮಾರಿ ದಾನೇಶ್ವರೀಜೀ, ನಿವೃತ್ತ ಡಿವೈಎಸ್‌ಪಿ ಕೃಷ್ಣಮೂರ್ತಿ ಆತ್ಮಾನಂದ, ವೀರಂಸಿಂಗ್, ಆರಾಧ್ಯ ಇದ್ದರು.

ಮೈಸೂರು ವಕೀಲರಿಂದ ನಟ ಜೆಪಿಗೆ ಸನ್ಮಾನ



ಡೇರಿಂಗ್ ಸ್ಟಾರ್ ಎಸ್.ಜಯಪ್ರಕಾಶ್ ಅವರನ್ನು ಮೈಸೂರಿನ ವಕೀಲರ ಸಂಘದಿಂದ ಅಭಿನಂದಿಸಲಾಯಿತು.

ಮೈಸೂರು,ಫೆ.20–ಸಮಾಜಕ್ಕೆ ಬೇಕಾದ ಪ್ರಬಲವಾದ ಸಂದೇಶಗಳನ್ನು ಹೊಂದಿರುವ ಕನ್ನಡ 'ಭಗೀರಥ' ಚಿತ್ರವನ್ನು ಎಲ್ಲರೂ ನೋಡುವುದರ ಮೂಲಕ ಚಿತ್ರವನ್ನು ಗೆಲ್ಲಿಸಬೇಕೆಂದು ಮೈಸೂರಿನ ವಕೀಲರ ಸಂಘದ ಕಾರ್ಯದರ್ಶಿ ಚರಣ್‌ರಾಜ್ ಕರೆ ನೀಡಿದರು.

ಮೈಸೂರಿನ ಜನಪರ ಹೋರಾಟಗಾರರು, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷರೂ ಆದ ಡೇರಿಂಗ್ ಸ್ಟಾರ್ ಎಸ್.ಜಯಪ್ರಕಾಶ್, ನಾಯಕ ನಟರಾಗಿ ನಟಿಸಿರುವ ಭಗೀರಥ ಚಲನಚಿತ್ರ ತಂಡವು ಮೈಸೂರಿನ ವಕೀಲರ ಸಂಘಕ್ಕೆ ಭೇಟಿ ನೀಡಿತ್ತು. ಈ ವೇಳೆ ಸಂಘದ ವತಿಯಿಂದ ಅವರನ್ನು ಅಭಿನಂದಿಸಲಾಯಿತು. ಮೈಸೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮಾಜಿ ಕಾರ್ಯದರ್ಶಿ ಉಮೇಶ್, ಶೋಭಾ, ಸುನೀತ ಸೇರಿದಂತೆ ವಕೀಲರ ಸಂಘದ ಪದಾಧಿಕಾರಿಗಳು, ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ನಾಗರಾಜು, ನೇಹಾ, ಪ್ರೀತಿ ಸಿಂಗ್ ಇದ್ದರು.

ಮೈಸೂರು ಮೀಡಿಯಾ ಅಸೋಸಿಯೇಷನ್ ತಂಡದ ಜರ್ಸಿ ಬಿಡುಗಡೆ...



ಮೈಸೂರಿನಲ್ಲಿ ಶುಕ್ರವಾರದಿಂದ ಮೂರು ದಿನ ನಡೆಯಲಿರುವ ಎಂಎಲ್‌ಎ ಕ್ರಿಕೆಟ್ ಕಪ್‌ನಲ್ಲಿ ಭಾಗವಹಿಸುತ್ತಿರುವ ಮೈಸೂರು ಮೀಡಿಯಾ ಅಸೋಸಿಯೇಷನ್ (ಎಂಎಂಎ) ತಂಡದ ಜರ್ಸಿಯನ್ನು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬಿಡುಗಡೆ ಮಾಡಿದರು.

ಫೆ.23ರಂದು ಕವನ, ಪ್ರಬಂಧ, ಸಂಕಲನ ಬಿಡುಗಡೆ

ಮೈಸೂರು,ಫೆ.20(ಜಿಎ)–ಕನ್ನಡ ಸಾಹಿತ್ಯ ಕಲಾಕೂಟ ಮತ್ತು ಜಯಂತಿ ಪ್ರಕಾಶನದಿಂದ ನಗರದ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಫೆ.23ರಂದು ಬೆಳಿಗ್ಗೆ 10ಗಂಟೆಗೆ ಲೇಖಕ ಎಂ.ಎಸ್. ರಾಚಪ್ಪ ಅವರ 'ಸಾರಥಿಯ ಸಂಪ್ರೀತಿ' ಕವನ ಸಂಕಲನ, 'ಸಾರಥಿಯ ಸಾಕ್ಷಾತ್ಕಾರ' ಪ್ರಬಂಧ ಸಂಕಲನ, 'ಸಾರಥಿಯ ಕಣ್ಣಲ್ಲಿ ಸಾಧಕರು' ಕವನ ಸಂಕಲನ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಈ ವಿಷಯ ತಿಳಿಸಿ, ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪದ್ಮಾಶೇಖರ್ ಅವರು ಕಾರ್ಯಕ್ರಮ ಉದ್ಘಾಟಿಸಿ ಕೃತಿಗಳನ್ನು ಬಿಡುಗಡೆ ಮಾಡುವರು. ಕೃತಿಗಳ ಕುರಿತು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ವಿಜಯನಗರದ ಸಂತ ಜೋಸೆಫರ ಕೇಂದ್ರೀಯ ಶಾಲೆ ಶಿಕ್ಷಕ ಬಾಗಳಿ ಮಹೇಶ್, ಕವಯಿತ್ರಿ ಎ.ಹೇಮಗಂಗಾ ಮಾತನಾಡುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಟರಾಜ ಶಿಕ್ಷಣ ಸಂಸ್ಥೆಯ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ ವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಯಂತಿ ಪ್ರಕಾಶನದ ಪ್ರಕಾಶಕ ಕೆ.ಸಿ.ಓಂಕಾರಪ್ಪ, ಎಂ.ಎಸ್. ರಾಚಪ್ಪ ಅವರ ತಾಯಿ ನೀಲಮ್ಮ ಸ್ನೇಹಿತ ಮಂಜು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ತಪ್ಪು ಮಾಡಿಲ್ಲ; ಹಾಗಾಗಿ ಲೋಕಾಯುಕ್ತರು ಕ್ಲೀನ್ ಚಿಟ್ ನೀಡಿದ್ದಾರೆ

ಸಮಾಜ ಕಲ್ಯಾಣ ಸಚಿವ ಡಾ.ಮಹದೇವಪ್ಪ ಸಮರ್ಥನೆ



ಮೈಸೂರು, ಫೆ.20(ಬಿಎಲ್‌ಯು)– ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ತಪ್ಪು ಮಾಡದ ಕಾರಣ ಲೋಕಾಯುಕ್ತರು ಕ್ಲೀನ್ ಚಿಟ್ ನೀಡಿದ್ದಾರೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟರು.

ಮೈಸೂರಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಹೆಸರಿಗೆ ಕಳಂಕ ತರಲು ರಾಜಕೀಯ ಪಿತೂರಿ ನಡೆಸಿ, ಕೇಸ್ ಹಾಕಲಾಗಿತ್ತು. ಈ ಸಂಬಂಧ ನಿಷ್ಪಕ್ಷಪಾತ ತನಿಖೆ ನಡೆಸಿರುವ ಲೋಕಾಯುಕ್ತರು ಸಿದ್ದರಾಮಯ್ಯ ನಿರ್ದೋಷಿ ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ ಎಂದರು.

ಸಿದ್ದರಾಮಯ್ಯ ತಪ್ಪು ಮಾಡಿ ದೋಷಿಯೇ ಆಗಿರಲಿಲ್ಲ. ಇದರಿಂದ ಅವರು ನಿರ್ದೋಷಿ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ಕಾರಣದಿಂದಲೇ ಸಿದ್ದರಾಮಯ್ಯ ಗಟ್ಟಿಯಾಗಿದ್ದರು ಎಂದರು.

ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಸಿದ್ದರಾಮಯ್ಯ ಅವರ ಆತ್ಮಸಾಕ್ಷಿ ಹೇಳುತ್ತಿತ್ತು. ಇದರಿಂದ ಸಿದ್ದರಾಮಯ್ಯ ತಪ್ಪು ಮಾಡಿಲ್ಲ ಎಂದು ನಮಗೂ ಗೊತ್ತಿತ್ತು. ನಾವು ನಿರೀಕ್ಷಿಸಿದಂತೆ ಲೋಕಾಯುಕ್ತರು ಸಮಗ್ರ ತನಿಖೆ ನಡೆಸಿ ಸಿದ್ದರಾಮಯ್ಯ ಅವರಿಗೆ ಕ್ಲೀನ್ ಚಿಟ್ ನೀಡಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡುವ ಪ್ರಶ್ನೆಯೇ ಇಲ್ಲ. ಅವರೇ ಸಿಎಂ ಆಗಬೇಕೆಂದು ಶಾಸಕರು ಮುದ್ರೆ ಒತ್ತಿದ್ದಾರೆ. ಹೈಕಮಾಂಡ್ ಕೂಡ ಅವರ ಪರ ಒಲವು ತೋರಿ ಮುಖ್ಯಮಂತ್ರಿ ಮಾಡಿದೆ. ಹೀಗಾಗಿ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಲ್ಲಿ ಗಟ್ಟಿಯಾಗಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯ ಬದಲಾಗುತ್ತಾರೆ ಎಂದು ಬಿಜೆಪಿಯವರು ಭವಿಷ್ಯ ನುಡಿಯುತ್ತಾರೆ. ಆದರೆ ಬಿಜೆಪಿ ಮನೆಯಲ್ಲಿ ಭಿನ್ನಮತ ಪ್ರತಿದಿನ ಸ್ಫೋಟಿಸುತ್ತಿದೆ. ತಮ್ಮ ಮನೆಯ ಗಲಾಟೆ ಸರಿಮಾಡಿಕೊಳ್ಳದೆ ಕಾಂಗ್ರೆಸ್ ಪಕ್ಷದ ಬಗ್ಗೆ ಆಧಾರರಹಿತ ಆರೋಪ ಮಾಡುತ್ತಾರೆ ಎಂದು ಕಿಡಿಕಾರಿದರು.

ಬಿಜೆಪಿಯವರು ಏನೇ ಹೇಳಿದರೂ ನಮ್ಮ ಪಕ್ಷದ ಒಗ್ಗಟ್ಟಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಅವರು ಆರೋಪ ಮಾಡಿದಷ್ಟೂ ನಾವು ಗಟ್ಟಿಯಾಗುತ್ತಾ ಹೋಗುತ್ತೇವೆ ಎಂದು ಹೇಳಿದರು.

ದಲಿತ ಸಮಾವೇಶಕ್ಕೆ ಆಕ್ಷೇಪಣೆ ಇಲ್ಲ

ರಾಜ್ಯದಲ್ಲಿ ದಲಿತ ಸಮಾವೇಶ ಮಾಡಬಾರದು, ಸಭೆ ನಡೆಸಬಾರದು ಎಂಬ ನಿಯಮ ಎಲ್ಲಿದೆ ಎಂದು ಡಾ.ಮಹದೇವಪ್ಪ ಪ್ರಶ್ನಿಸಿದರು.

ದಲಿತ ಸಮಾವೇಶ ಮಾಡುವುದಾದರೆ ದೊಡ್ಡ ಮಟ್ಟದಲ್ಲೇ ಮಾಡುತ್ತೇವೆ. ಯಾರು ಏನೇ ಅಂದರೂ ನಾವು ಅಂದುಕೊಂಡಂತೆ ಮಾಡುತ್ತೇವೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರವನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಆದರೆ ಈ ಕುರಿತಂತೆ ರಾಜಣ್ಣ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಡಾ.ಮಹದೇವಪ್ಪ ಸ್ಪಷ್ಟಪಡಿಸಿದರು.

ನಟನದಲ್ಲಿ ಹೊಸ ನಾಟಕ ಮಕ್ಕಳ ಮಹಾಭಾರತ

ಮೈಸೂರು, ಫೆ.20–ಮಂಡ್ಯ ರಮೇಶ್ ಅವರ ನಟನ ರಂಗಶಾಲೆಯಲ್ಲಿ ಮೈಸೂರು ಮತ್ತು ಸುತ್ತಮುತ್ತಲಿನ ರಂಗಾಸಕ್ತರಿಗಾಗಿ ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಇದೇ ಫೆಬ್ರವರಿ 22 ಮತ್ತು 23ರಂದು ಸಂಜೆ 6.30ಕ್ಕೆ ರಾಮಕೃಷ್ಣ ನಗರದಲ್ಲಿರುವ ನಟನ ರಂಗಶಾಲೆಯಲ್ಲಿ ನಟನ ವಾರಾಂತ್ಯ ರಂಗಶಾಲೆಯ ಮಕ್ಕಳ ಅಭ್ಯಾಸಿ ಪ್ರಯೋಗ ಡಾ.ಪಿ.ಕೆ.ರಾಜಶೇಖರ ಅವರ ಜನಪದ ಮಹಾಭಾರತ ಆಧಾರಿತ ನಾಟಕ ಮಕ್ಕಳ ಮಹಾಭಾರತ ಪ್ರದರ್ಶನಗೊಳ್ಳಲಿದೆ. ನಾಟಕದ ರಚನೆ ರಂಗಾಯಣ ರಾಮನಾಥ, ನಿರ್ದೇಶನ ಡಿ.ಸಿ.ಸುದರ್ಶನ್, ಮಳವಳ್ಳಿ ಅವರದ್ದು. ಮಾಹಿತಿಗಾಗಿ 7259537777, 9480468327, 9845595505 ಸಂಪರ್ಕಿಸಿ.

ದೇಶ - ವಿದೇಶ

ತಾಯಿ–ಮಕ್ಕಳು ಸೇರಿ ನಾಲ್ವರು ಇಸ್ರೇಲಿಗಳ ಶವ ಹಿಂತಿರುಗಿಸಿದ ಹಮಾಸ್

ಗಾಜಾ: ಗಾಜಾ ಯುದ್ಧವನ್ನು ಕೊನೆಗೊಳಿಸುವ ಗುರಿಯನ್ನು ಹೊಂದಿರುವ ಕದನ ವಿರಾಮ ಒಪ್ಪಂದದ ಭಾಗವಾಗಿ ಹಮಾಸ್ ನಾಲ್ವರು ಇಸ್ರೇಲಿ ಒತ್ತೆಯಾಳುಗಳ ಶವಗಳನ್ನು ಗುರುವಾರ ಹಸ್ತಾಂತರಿಸಿದೆ. ಇದರಲ್ಲಿ ಅಕ್ಟೋಬರ್ 2023ರಲ್ಲಿ ಇಸ್ರೇಲ್ ಮೇಲಿನ ದಾಳಿಯ ಸಮಯದಲ್ಲಿ ಅಪಹರಿಸಲ್ಪಟ್ಟ ಒಬ್ಬ ಮಹಿಳೆ ಮತ್ತು ಆಕೆಯ ಇಬ್ಬರು ಚಿಕ್ಕ ಮಕ್ಕಳು ಸೇರಿದ್ದಾರೆ.

ಕದನ ವಿರಾಮದ ನಡುವೆ ಹಮಾಸ್ ಒತ್ತೆಯಾಳುಗಳ ಶವಗಳನ್ನು ಹಿಂದಿರುಗಿಸುತ್ತಿರುವುದು ಇದೇ ಮೊದಲು. ಡಿಎನ್‌ಎ ಪರೀಕ್ಷೆ ಪೂರ್ಣಗೊಳ್ಳುವವರೆಗೆ ಅವರ ಗುರುತನ್ನು ಅಧಿಕೃತವಾಗಿ ದೃಢೀಕರಿಸುವುದಿಲ್ಲ ಎಂದು ಇಸ್ರೇಲ್ ಸ್ಪಷ್ಟಪಡಿಸಿದೆ.

ಶವಗಳಲ್ಲಿ ಶಿರಿ ಬಿಬಾಸ್ (32), ಅವರ ಪುತ್ರರಾದ ಏರಿಯಲ್ (4) ಮತ್ತು ಕ್ಫಿರ್ ಮತ್ತು ಓಡೆಡ್ ಲಿಫ್ಶಿಟ್ಜ್ (83) ಅವರ ಮೃತ ದೇಹಗಳು ಸೇರಿವೆ. ತನ್ನ ತಾಯಿ ಮತ್ತು ಸಹೋದರನೊಂದಿಗೆ ಅಪಹರಿಸಲ್ಪಟ್ಟ ಕೆಫೀರ್ ಆ ಸಮಯದಲ್ಲಿ ಕೇವಲ ಒಂಬತ್ತು ತಿಂಗಳ ಮಗು. ಇದೇ ವೇಳೆ, ಪ್ಯಾಲೆಸ್ಟೀನಿಯನ್ ಹಕ್ಕುಗಳು ಮತ್ತು ಶಾಂತಿಗಾಗಿ ಪ್ರಚಾರ ಮಾಡುತ್ತಿದ್ದ ನಿವೃತ್ತ ಪತ್ರಕರ್ತ ಲಿಫ್ಶಿಟ್ಜ್ ಅವರನ್ನೂ ಅಪಹರಿಸಲಾಗಿತ್ತು. ನವೆಂಬರ್ 2023ರಲ್ಲಿ ಶಿರಿ ಮತ್ತು ಅವರ ಮಗ ಇಸ್ರೇಲಿ ವೈಮಾನಿಕ ದಾಳಿಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಹಮಾಸ್ ಘೋಷಿಸಿತ್ತು,

ಅನಾರೋಗ್ಯಪೀಡಿತ ತಾಯಿಯನ್ನು ಮನೆಯಲ್ಲಿ ಲಾಕ್ ಮಾಡಿ ಕುಂಭಮೇಳಕ್ಕೆ ಹೋದ ಮಗ



ರಾಂಚಿ: ವ್ಯಕ್ತಿಯೊಬ್ಬ 68 ವರ್ಷದ ಅನಾರೋಗ್ಯ ಪೀಡಿತ ತನ್ನ ತಾಯಿಯನ್ನು ಮನೆಯಲ್ಲಿ ಕೂಡಿ ಹಾಕಿ ಉತ್ತರಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಹೋದ ಆಘಾತಕಾರಿ ಘಟನೆ ಜಾರ್ಖಂಡ್‌ನಲ್ಲಿ ನಡೆದಿದೆ. ರಾಮಗಢದ ಸಿಸಿಎಲ್ ಕ್ವಾರ್ಟರ್ಸ್‌ನ ಮನೆಯೊಂದರಲ್ಲಿ ಬಂಧಿಯಾಗಿದ್ದ ವೃದ್ಧ ಮಹಿಳೆ 4 ದಿನಗಳ ನಂತರ, ಬುಧವಾರ ಸಹಾಯಕ್ಕಾಗಿ ಕೂಗಿಕೊಂಡಾಗ ಈ ಘಟನೆ ಬೆಳಕಿಗೆ ಬಂದಿದೆ. ನಂತರ ಮಹಿಳೆಯನ್ನು ಸ್ಥಳೀಯರು ರಕ್ಷಿಸಿದ್ದಾರೆ. ಮಹಿಳೆಯ ಮಗ ಅಖಿಲೇಶ್ ಪ್ರಜಾಪತಿ ತನ್ನ ತಾಯಿಯನ್ನು ಮನೆಯೊಳಗೆ ಲಾಕ್ ಮಾಡಿ, ತನ್ನ ಪತ್ನಿ ಹಾಗೂ ಮಕ್ಕಳೊಂದಿಗೆ ಪ್ರಯಾಗ್‌ರಾಜ್‌ಗೆ ತೆರಳಿದ್ದರು.

ಒಳಗಿನಿಂದ ಯಾರೋ ಗೇಟ್ ಬಡಿಯುತ್ತಿರುವುದನ್ನು ಕೇಳಿದ ಸ್ಥಳೀಯರು ಬೀಗ ಒಡೆದು ವೃದ್ಧ ಮಹಿಳೆಯನ್ನು ರಕ್ಷಿಸಿದರು. 3 ದಿನಗಳ ಕಾಲ ಆ ವೃದ್ಧೆ ಅನ್ನ, ನೀರಿಲ್ಲದೆ ಸಂಕಟಪಟ್ಟಿದ್ದಾರೆ. ಹಸಿವು ಮತ್ತು ದೌರ್ಬಲ್ಯದಿಂದ ಬಳಲುತ್ತಿದ್ದಾರೆ ಎಂದು ನೆರೆಹೊರೆಯವರು ಮಾಹಿತಿ ನೀಡಿದ್ದಾರೆ. ವೃದ್ಧೆ ಅತ್ಯಂತ ದುರ್ಬಲವಾಗಿದ್ದಳು, ತುಂಬಾ ಹಸಿದಿದ್ದಳು ಮತ್ತು ಅವಳ ಬಲಗಾಲು ಮತ್ತು ಕೈಯಲ್ಲಿ ಗಂಭೀರ ಗಾಯಗಳಾಗಿದ್ದವು.

ಪುಟ್ಟ ಬಾಲಕನ ಥಳಿಸಿ ಲಿಫ್ಟಿನಿಂದ ಹೊರದಬ್ಬಿದ ಮಹಿಳೆ



ನೋಯ್ಡಾ: ನಾಯಿಯನ್ನು ಲಿಫ್ಟ್ ಒಳಗೆ ತರಬೇಡಿ ಎಂದು ಹೇಳಿದ ಪುಟ್ಟ ಬಾಲಕನನ್ನು ಮಹಿಳೆಯೊಬ್ಬರು ಥಳಿಸಿ ಬಲವಂತವಾಗಿ ಲಿಫ್ಟ್‌ನಿಂದ ಹೊರಗೆ ದಬ್ಬಿರುವ ವಿಡಿಯೋವೊಂದು ವ್ಯಾಪಕ ವೈರಲ್ ಆಗುತ್ತಿದೆ. ಗ್ರೇಟರ್ ನೋಯ್ಡಾದ ಗೌರ್ ಸಿಟಿ 2 ಅಪಾರ್ಟ್‌ಮೆಂಟ್ ಸಂಕೀರ್ಣದಲ್ಲಿ ಈ ಘಟನೆ ನಡೆದಿದ್ದು, ಇಡೀ ದೃಶ್ಯ ಲಿಫ್ಟ್‌ನಲ್ಲಿ ಅಳವಡಿಸಲಾಗಿರುವ ಸಿಸಿಟಿವಿಯಲ್ಲಿ ದಾಖಲಾಗಿದೆ. ಟ್ಯೂಷನ್‌ನಿಂದ ಹಿಂದಿರುಗಿದ ಎಂಟು ವರ್ಷದ ಬಾಲಕ ಲಿಫ್ಟ್‌ನಲ್ಲಿ ತನ್ನ ಮನೆಗೆ ತೆರಳುತ್ತಿದ್ದ. ಈ ವೇಳೆ ಒಂದು ಮಹಡಿಯಲ್ಲಿ ಬಾಗಿಲು ತೆರೆದಿದ್ದು, ಈ ವೇಳೆ ಮಹಿಳೆಯೊಬ್ಬರು ಸಾಕು ನಾಯಿ ಸಹಿತ ಲಿಫ್ಟ್‌ಗೆ ಪ್ರವೇಶ ಮಾಡುತ್ತಾರೆ. ಆಕೆಯ ಬಳಿ ನಾಯಿ ಇರುವುದನ್ನು ಕಂಡು ಬೆದರಿದ ಬಾಲಕ ನಾಯಿ ಕಚ್ಚುತ್ತದೆ. ನನಗೆ ನಾಯಿ ಎಂದರೆ ಭಯ.. ದಯವಿಟ್ಟು ನಾಯಿಯನ್ನು ಒಳಗೆ ತರಬೇಡಿ ಎಂದು ಕೈ ಮುಗಿದು ಕೇಳುತ್ತಾನೆ. ಆದರೆ ಬಾಲಕನ ಮಾತು ಕೇಳದ ಮಹಿಳೆ ಆತನನ್ನೇ ನಿಂದಿಸಿ ಆತನನ್ನು ಬಲವಂತವಾಗಿ ಲಿಫ್ಟ್‌ನಿಂದ ಹೊರಗೆಳೆದು ಥಳಿಸಿ ಕಳುಹಿಸುತ್ತಾರೆ ಎಂದು ಕೇಂದ್ರ ನೋಯ್ಡಾದ ಹಿರಿಯ ಪೊಲೀಸ್ ಅಧಿಕಾರಿ ಶಕ್ತಿ ಮೋಹನ್ ಅವಸ್ಥಿ ವರದಿಗಾರರಿಗೆ ತಿಳಿಸಿದ್ದಾರೆ.

ಬಾಲಕಿ ಮೇಲೆ 75 ವರ್ಷದ ಮಠಾಧೀಶ, ಸಹಚರನಿಂದ ಅತ್ಯಾಚಾರ; ಮೂವರ ಬಂಧನ



ಮುಂಬೈ: ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ಮಠವೊಂದರ 75 ವರ್ಷದ ಮಠಾಧೀಶ ಮತ್ತು ಆತನ ಸಹಚರನನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಗುರುವಾರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 17 ವರ್ಷದ ಸಂತ್ರಸ್ತೆಯ ಸಂಬಂಧಿ ಮಹಿಳೆಯನ್ನೂ ಬಂಧಿಸಲಾಗಿದೆ. ವೈದ್ಯಕೀಯ ಪರೀಕ್ಷೆಯಲ್ಲಿ ಬಾಲಕಿ ಎಂಟು ತಿಂಗಳ ಗರ್ಭಿಣಿ ಎಂಬುದು ಬೆಳಕಿಗೆ ಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೂರುದಾರರ ಪ್ರಕಾರ ಬಾಲಕಿ ತನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮನೊಂದಿಗೆ ಕಳೆದ 1 ವರ್ಷದಿಂದ ಸೇವೆಗಾಗಿ ಮಠದಲ್ಲಿಯೇ ತಂಗಿದ್ದಳು. ಈ ವೇಳೆ ತನ್ನನ್ನು ಭೇಟಿಯಾಗಲು ಬಾಲಕಿಯನ್ನು ಕಳುಹಿಸುವಂತೆ 2024ರ ಏಪ್ರಿಲ್ 2 ರಂದು ಮಠಾಧೀಶರು ಸಂತ್ರಸ್ತೆಯ ಚಿಕ್ಕಮ್ಮನಿಗೆ ಕೇಳಿದ್ದಾರೆ. ಆಕೆಯ ಚಿಕ್ಕಮ್ಮ ಬಾಲಕಿಯನ್ನು ಮಠಾಧೀಶರಾದ ಸುರೇಂದ್ರಮುನಿ ತಾಳೇಗಾಂವ್ಕರ್ ಅವರ ಕೋಣೆಗೆ ಕಳುಹಿಸಿದ್ದಾರೆ. ಅಲ್ಲಿ ಅವರು ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಭಾರತದಲ್ಲಿ ಬೇರೊಬ್ಬರ ಅಧಿಕಾರಕ್ಕೇರಿಸಲು ಬೈಡನ್ ಯತ್ನ: ಟ್ರಂಪ್ ಸ್ಫೋಟಕ ಹೇಳಿಕೆ



ವಾಷಿಂಗ್ಟನ್: ಭಾರತದಲ್ಲಿ ನಡೆಯುವ ಮತದಾನಕ್ಕೆ 21 ಮಿಲಿಯನ್ ಡಾಲರ್ ನೆರವು ನೀಡುವ ಅಮೆರಿಕದ ನಿರ್ಧಾರವನ್ನು ಹಾಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಶ್ನಿಸಿದ್ದರು. ಇದರ ಜೊತೆಗೆ ಭಾರತೀಯ ಚುನಾವಣೆಗಳಲ್ಲಿ ಅಮೆರಿಕಾದ ಸಂಭವನೀಯ ಹಸ್ತಕ್ಷೇಪದ ಬಗ್ಗೆಯೂ ಟ್ರಂಪ್ ಸುಳಿವು ನೀಡಿದ್ದಾರೆ.

ಈ ಬಗ್ಗೆ ಸ್ಫೋಟಕ ಮಾಹಿತಿ ಹಂಚಿಕೊಂಡಿರುವ ಡೊನಾಲ್ಡ್ ಟ್ರಂಪ್, ಅಮೆರಿಕದಿಂದ ಭಾರತಕ್ಕೆ ಹರಿದು ಬರುತ್ತಿದ್ದ ಅನುದಾನದ ನೈತಿಕತೆಯನ್ನೂ ಪ್ರಶ್ನೆ ಮಾಡಿದ್ದಾರೆ. ಅಲ್ಲದೇ, ಬಹುಶ: ಈ ಹಿಂದೆ ಅಧಿಕಾರದಲ್ಲಿದ್ದ ಜೋ ಬೈಡನ್ ಸರ್ಕಾರ ಭಾರತದ ಚುನಾವಣೆಯಲ್ಲಿ ಹಸ್ತಕ್ಷೇಪ ಮಾಡುವ ಮೂಲಕ ಬೇರೊಂದು ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ಪ್ರಯತ್ನ ನಡೆಸಿತ್ತು ಎಂದು ಹೇಳುವ ಮೂಲಕ ಟ್ರಂಪ್ ಅಚ್ಚರಿಯ ಹೇಳಿಕೆ ನೀಡಿದ್ದಾರೆ. 2024ರ ಸಾರ್ವತ್ರಿಕ ಚುನಾವಣೆಯಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರಲು ಸಾಧ್ಯವಾಗಲಿಲ್ಲ. ಕೊನೆಗೆ ಬಿಜೆಪಿ ಸರ್ಕಾರ ರಚಿಸಲು ತಮ್ಮ ಎನ್‌ಡಿಎ ಮಿತ್ರಪಕ್ಷಗಳ ಬೆಂಬಲವನ್ನು ಪಡೆಯಬೇಕಾಯಿತು. ಬಹುತೇಕ ಎಲ್ಲಾ ಸಮೀಕ್ಷೆಗಳು ಬಿಜೆಪಿ ಲೋಕಸಭಾ ಚುನಾವಣೆಯಲ್ಲಿ ಗೆಲ್ಲುತ್ತದೆ ಎಂದು ಹೇಳಿದ್ದವು.

ವಿವಿ ಮುಚ್ಚಲು ಮುಂದಾದರೆ ಕೊಡಗು ಬಂದ್

● ರಾಜ್ಯ ಸರ್ಕಾರ ನಿರ್ಧಾರ ಕೈಬಿಡಲಿ ● ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಎಚ್ಚರಿಕೆ


ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿದರು.

> ಅಹಿಂದ ಪರ ಮುಖ್ಯಮಂತ್ರಿಗಳೆಂದು ಹೇಳಿಕೊಳ್ಳುವ ಸಿದ್ದರಾಮಯ್ಯ ಕೊಡಗು ವಿವಿಯಲ್ಲಿ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ಮತ್ತು ಹಿಂದುಳಿದ ವಿದ್ಯಾರ್ಥಿಗಳ ಬಗ್ಗೆ ಚಿಂತಿಸದೆ, ವಿವಿ ಮುಚ್ಚಲು ಮುಂದಾಗಿದ್ದಾರೆ. ಮಕ್ಕಳ ಬಗ್ಗೆ ಕಾಳಜಿ ಇದ್ದಲ್ಲಿ ಕೊಡಗು ವಿವಿ ಉಳಿಸಿ ತೋರಿಸಲಿ.
> –ಸುನಿಲ್ ಸುಬ್ರಮಣಿ, ಮಾಜಿ ಎಂಎಲ್‌ಸಿ

ಮಡಿಕೇರಿ, ಫೆ.20–ಮಕ್ಕಳಿಗೆ ಯೋಗ್ಯ ಹಾಗೂ ಉನ್ನತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಕಳೆದ 2 ದಶಕಗಳ ನಿರಂತರ ಪರಿಶ್ರಮದಿಂದ ಜಿಲ್ಲೆಯಲ್ಲಿ ಸ್ಥಾಪಿಸಿರುವ ಕೊಡಗು ವಿಶ್ವವಿದ್ಯಾನಿಲಯವನ್ನು ಮುಚ್ಚುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಬಿಡಬೇಕು. ಇದಕ್ಕೆ ಸ್ಪಂದಿಸದಿದ್ದಲ್ಲಿ 'ಕೊಡಗು ಬಂದ್' ನಡೆಸುವುದಕ್ಕೂ ಸಿದ್ಧವಿರುವುದಾಗಿ ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1994ರಲ್ಲಿ ನಾನು ಶಾಸಕನಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮಂಗಳೂರು ವಿಶ್ವವಿದ್ಯಾನಿಯದ ಸೆನೆಟ್ ಸದಸ್ಯನಾಗಿ 3 ಅವಧಿ ಕಾರ್ಯ ನಿರ್ವಹಿಸಿದ್ದೇನೆ. ಈ ಅವಧಿಯಲ್ಲಿ ವಿವಿಯ ಶಾಖೆಯನ್ನು ಕೊಡಗಿನಲ್ಲಿ ಮಕ್ಕಳ ಹಿತದೃಷ್ಟಿಯಿಂದ ತೆರೆಯಬೇಕೆನ್ನುವ ವಿಚಾರವನ್ನು ಮಂಡಿಸುತ್ತಲೆ ಬಂದಿದ್ದೆ. ಇದರ ಫಲವಾಗಿ 2010ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕುಶಾಲನಗರದ ಚಿಕ್ಕಅಳುವಾರದಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ಸ್ಥಾಪನೆಗೆ ಭೂಮಿಪೂಜೆ ನೆರವೇರಿಸಿ, 15 ಕೋಟಿ ರೂ. ಅನುದಾನ ನೀಡಿದ್ದರು. ಇದರ ಉದ್ಘಾಟನೆ 2012ರಲ್ಲಿ ನಡೆಯುವುದರೊಂದಿಗೆ 100 ಎಕರೆ ಪ್ರದೇಶದಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ಆರಂಭಗೊಳ್ಳುವ ಮೂಲಕ ಕೊಡಗಿನ ಶಿಕ್ಷಣಾಕಾಂಕ್ಷಿ ಬಡಮಕ್ಕಳಿಗೆ ಹೆಚ್ಚಿನ ಅನುಕೂಲವಾಗಿತ್ತು ಎಂದು ತಿಳಿಸಿದರು.

ಚಿಕ್ಕಾಸನ್ನು ನೀಡದ ಸರ್ಕಾರ: ನಮ್ಮ ನಿರೀಕ್ಷೆಯಂತೆ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಕೊಡಗು ಸೇರಿದಂತೆ ರಾಜ್ಯದಲ್ಲಿ 9 ನೂತನ ವಿವಿಗಳ ಆರಂಭಕ್ಕೆ ಹಸಿರು ನಿಶಾನೆ ತೋರಿದ್ದರು. ಕಳೆದ 3 ವರ್ಷಗಳಿಂದ ರಾಜ್ಯ ಸರ್ಕಾರ ಕೊಡಗು ವಿವಿಗೆ ಚಿಕ್ಕಾಸನ್ನು ನೀಡದಿದ್ದರೂ, ಇರುವ ಸಂಪನ್ಮೂಲಗಳನ್ನು ಬಳಸಿಕೊಂಡು ಕೊಡಗು ವಿವಿ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಭಿಕ್ಷೆ ಎತ್ತಿ ವಿವಿ ನಡೆಸುತ್ತೇವೆ: ಕೊಡಗು ವಿವಿಗೆ ಸರ್ಕಾರ ಚಿಕ್ಕಾಸನ್ನು ನೀಡುವುದು ಬೇಡ. ಇದಕ್ಕೆ ಅಗತ್ಯವಾದ ಆರ್ಥಿಕ ಸಂಪನ್ಮೂಲಗಳಿಗಾಗಿ ಈಗಾಗಲೇ ಟಾಟಾ ಕಾಫಿ, ಇನ್ಫೋಸಿಸ್, ಎಸ್‌ಬಿಐ ಅಂತಹ ಬೃಹತ್ ಸಂಸ್ಥೆಗಳನ್ನು ಈಗಾಗಲೇ ಸಂಪರ್ಕಿಸಿ ಮಾತುಕತೆ ನಡೆಸಲಾಗಿದೆ. ಅವರಿಂದಲೂ ಉತ್ತಮ ಸ್ಪಂದನೆ ದೊರೆತಿದೆ. ಅಗತ್ಯವಿದ್ದಲ್ಲಿ ಭಿಕ್ಷೆ ಎತ್ತಿಯಾದರೂ ಕೊಡಗು ವಿವಿಯನ್ನು ನಡೆಸುತ್ತೇವೆ. ಮುಂದಿನ 5 ವರ್ಷದಲ್ಲಿ ರಾಜ್ಯದಲ್ಲೇ ಅತ್ಯುತ್ತಮ ವಿವಿಯಾಗಿ ಇದನ್ನು ಮಾರ್ಪಡಿಸುತ್ತೇವೆ. ಆದರೆ, ಕೊಡಗು ವಿವಿಯನ್ನು ಮಾತ್ರ ಯಾವುದೇ ಕಾರಣಕ್ಕೂ ಮುಚ್ಚಲು ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಕಾಲೇಜು ಮಟ್ಟದಿಂದ ಹೋರಾಟ: ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಕೊಡಗು ವಿವಿಗೆ ಒಳಪಟ್ಟ ಕಾಲೇಜುಗಳ ವಿದ್ಯಾರ್ಥಿ ಸಂಘ, ಹಳೇ ವಿದ್ಯಾರ್ಥಿ ಸಂಘ ಮತ್ತು ವಿವಿಧ ಸಂಘ ಸಂಸ್ಥೆಗಳ ಮೂಲಕ ಕಾಲೇಜು ಹಂತದಲ್ಲಿ ಪ್ರತಿಭಟನೆ ರೂಪಿಸಲಾಗುವುದು. ಇದಕ್ಕೆ ಸರ್ಕಾರ ಸ್ಪಂದಿಸದಿದ್ದಲ್ಲಿ ಕೊಡಗು ಬಂದ್‌ಗೆ ಮುಂದಾಗುವುದಾಗಿ ತಿಳಿಸಿದರು.

ಎಂಎಲ್‌ಸಿ ಸುಜಾ ಕುಶಾಲಪ್ಪ ಮಾತನಾಡಿ, ಶಿಕ್ಷಣದ ಮೂಲಕ ರಾಷ್ಟ್ರದ ಅಭಿವೃದ್ಧಿ ಎನ್ನುವುದನ್ನು ಮನಗಾಣುವ ಮೂಲಕ ರಾಜ್ಯ ಸರ್ಕಾರ ಕೊಡಗು ವಿವಿಯನ್ನು ಮುಚ್ಚದೆ ಅದಕ್ಕೆ 5 ಕೋಟಿ ರೂ. ಅನುದಾನ ನೀಡಬೇಕೆಂದು ಒತ್ತಾಯಿಸಿದರು.

ಮಾಜಿ ಎಂಎಲ್‌ಸಿ ಎಸ್.ಜಿ.ಮೇದಪ್ಪ ಮಾತನಾಡಿ, ಕೊಡಗು ವಿವಿ ನಮ್ಮ ಹೆಮ್ಮೆಯಾಗಿದೆ. ಇದರ ಉಳಿವಿಗೆ ಪ್ರಬಲ ಹೋರಾಟ ರೂಪಿಸುವುದಾಗಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ವಕ್ತಾರ ಬಿ.ಕೆ.ಅರುಣ್ ಕುಮಾರು ಉಪಸ್ಥಿತರಿದ್ದರು.

ಕುಶಾಲನಗರದಲ್ಲಿ ಎಬಿವಿಪಿ ಪ್ರತಿಭಟನೆ


ಕೊಡಗು ವಿವಿ ಮುಚ್ಚದಂತೆ ಒತ್ತಾಯಿಸಿ ಎಬಿವಿಪಿ ಕಾರ್ಯಕರ್ತರು ಕುಶಾಲನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿದರು.

ಕುಶಾಲನಗರ: ತೊರೆನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕಅಳುವಾರ ಗ್ರಾಮದಲ್ಲಿರುವ ಕೊಡಗು ವಿಶ್ವವಿದ್ಯಾನಿಲಯವನ್ನು ಮುಚ್ಚದೆ ಮುಂದುವರೆಸಬೇಕು ಎಂದು ಒತ್ತಾಯಿಸಿ ಎಬಿವಿಪಿ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ವಿವಿಧ ಕಾಲೇಜುಗಳಿಂದ ಮೆರವಣಿಗೆ ಮೂಲಕ ಪಟ್ಟಣದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತಕ್ಕೆ ಆಗಮಿಸಿ ಬೃಹತ್ ಸಂಖ್ಯೆಯಲ್ಲಿ ಸೇರಿದ ವಿದ್ಯಾರ್ಥಿಗಳು, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೊಡಗು ವಿವಿಯನ್ನು ಯಾವುದೇ ಕಾರಣಕ್ಕೂ ಮುಚ್ಚಬಾರದು ಎಂದು ಮಾನವ ಸರಪಳಿ ರಚಿಸಿ, ಕೆಲಕಾಲ ರಸ್ತೆ ತಡೆ ನಡೆಸಿದರು.

ಎಬಿವಿಪಿ ವಿಭಾಗೀಯ ಸಂಘಟನಾ ಕಾರ್ಯದರ್ಶಿ ಚಂದ್ರಶೇಖರ್ ಮಾತನಾಡಿ, ರಾಜ್ಯ ಸರ್ಕಾರ ವಿದ್ಯಾರ್ಥಿ ವಿರೋಧಿ ನೀತಿ ಅನುಸರಿಸುತ್ತಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಬದಲಾಗಿ, ಅನಾನುಕೂಲ ಉಂಟುಮಾಡುವ ನಿರ್ಧಾರ ಕೈಗೊಳ್ಳುತ್ತಿರುವುದು ಖಂಡನೀಯ. ಸ್ವಾತಂತ್ರ್ಯ ನಂತರ ಕೊಡಗಿಗೆ ಪ್ರಥಮವಾಗಿ ದಕ್ಕಿರುವ ವಿವಿಯನ್ನು ಮುಚ್ಚುವ ನಿರ್ಧಾರದ ಮೂಲಕ ಕೊಡಗಿನ ಜನತೆಗೆ ಅನ್ಯಾಯ ವೆಸಗಲು ಮುಂದಾಗಿದೆ. ಹಣಕಾಸಿನ ಕೊರತೆ ಕಾರಣ ನೀಡಿ ವಿವಿ ಮುಚ್ಚಲು ಹೊರಟಿರುವ ಸರ್ಕಾರದ ನಿರ್ಧಾರ ಶೋಭೆ ತರುವಂತಹದ್ದಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಎಬಿವಿಪಿ ಜಿಲ್ಲಾ ಸಂಚಾಲಕ ರೋಹಿತ್, ತಾಲೂಕು ಸಂಚಾಲಕ ಗಂಧರ್ವ, ಪ್ರಮುಖ ಪ್ರಮೋದ್ ಹಾಗೂ ಲಯನ್, ಪವನ್, ಬಿಪಿನ್, ಕನ್ನಡ ಭಾರತಿ, ಅನುಗ್ರಹ, ವಿವೇಕಾನಂದ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಫೆ26ರಂದು ಮಹಾಶಿವರಾತ್ರಿ ಆರಾಧನೆ

ನಾಪೋಕ್ಲು, ಫೆ.20– ಈಸ್ಟ್ ಕೊಳಕೇರಿ ಗ್ರಾಮದ ಬಿದ್ದಾಟಂಡ ವಾಡೆ ಸಮೀಪದ ಶ್ರೀ ಮಹಾದೇವ ಕೋಟ ಈಶ್ವರ ದೇವಸ್ಥಾನದಲ್ಲಿ ಫೆ.26ರಂದು ಮಹಾಶಿವರಾತ್ರಿ ಆರಾಧನೆ ನಡೆಯಲಿದೆ.

ಅಂದು ಬೆಳಗ್ಗೆ 9 ಗಂಟೆಗೆ ರುದ್ರಾಭಿಷೇಕ, ಮಹಾಪೂಜೆ ಹಾಗೂ ಅನ್ನದಾನ ಏರ್ಪಡಿಸಲಾಗಿದೆ ಎಂದು ದೇವಾಲಯ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಅಳಿಯನ ಮೇಲೆ ಮಾವ ಹಲ್ಲೆ


ರಂಜಿತ್

ವಿರಾಜಪೇಟೆ, ಫೆ.20–ಅಳಿಯನ ಮೇಲೆ ಮಾವ ಹಲ್ಲೆ ನಡೆಸಿರುವ ಘಟನೆ ಪಟ್ಟಣದಲ್ಲಿ ಗುರುವಾರ ನಡೆದಿದೆ.

ಮಾವ ಚಂದ್ರಶೇಖರ್ ಅಳಿಯ ರಂಜಿತ್ (35) ಮೇಲೆ ಹಲ್ಲೆ ನಡೆಸಿದ್ದು, ಗಾಯಗೊಂಡ ರಂಜಿತ್ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ರಂಜಿತ್ ವಿವಾಹ ವಿಚ್ಛೇದನ ಪ್ರಕರಣದ ವಿಚಾರಣೆಗೆ ನ್ಯಾಯಾಲಯಕ್ಕೆ ಆಗಮಿಸಿದ್ದರು. ಈ ಸಂದರ್ಭ ಮಾವ ಚಂದ್ರಶೇಖರ್ ಹಲ್ಲೆ ನಡೆಸಿದ್ದಾರೆ. ಹಲ್ಲೆಯಿಂದ ಗಾಯಗೊಂಡ ರಂಜಿತ್ ರಕ್ತ ಸುರಿಸಿಕೊಂಡೇ ನ್ಯಾಯಾಧೀಶರ ಬಳಿ ಬಂದಿದ್ದರು. ನಂತರ ನ್ಯಾಯಾಧೀಶರು ಮಾವ ಚಂದ್ರಶೇಖರ್ ವಿರುದ್ಧ ಪ್ರಕರಣ ದಾಖಲಿಸುವಂತೆ ಪೊಲೀಸರಿಗೆ ಸೂಚಿಸಿದರು. ಈ ಕುರಿತು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಾವ ಚಂದ್ರಶೇಖರ್ ಅಳಿಯ ರಂಜಿತ್ ವಿರುದ್ಧ ಪ್ರತಿ ದೂರು ನೀಡಿದ್ದಾರೆ.

ಮಕ್ಕಳ ಸಾಹಿತ್ಯ ರಚನೆಗೆ ಪಂಜೆ ಮಂಗೇಶರಾಯರು ಪ್ರೇರಣೆ

● ಕಸಾಪ ಮೈಸೂರು ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಭಿಮತ ● ಮಂಗೇಶರಾಯರ 150ನೇ ವರ್ಷಾಚರಣೆ

ಮಡಿಕೇರಿ: ಮಕ್ಕಳ ಸಾಹಿತ್ಯ ರಚನೆಗೆ ಕವಿಶಿಷ್ಯ ಪಂಜೆ ಮಂಗೇಶರಾಯರೇ ಪ್ರೇರಣೆಯಾಗಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಕೊಡಗು ಜಿಲ್ಲಾ ಕಸಾಪ ವತಿಯಿಂದ ಆಯೋಜಿಸಿದ್ದ ಪಂಜೆ ಮಂಗೇಶರಾಯರ 150ನೇ ವರ್ಷಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪಂಜೆ ಮಂಗೇಶರಾಯರ ಆಡು ಭಾಷೆ ಕೊಂಕಣಿಯಾಗಿದ್ದು, ಹುಟ್ಟಿದ್ದು ತುಳುನಾಡಿನ ಬಂಟ್ವಾಳದಲ್ಲಿಯಾದರೂ, ಕನ್ನಡದಲ್ಲಿ ಸಾಹಿತ್ಯ ಕೃಷಿ ನಡೆಸಿದ್ದಾರೆ. ಮಂಗೇಶರಾಯರು ಮಕ್ಕಳ ಸಾಹಿತ್ಯದ ಮಾವುತರೆನಿಸಿಕೊಂಡರೆ, ನವೋದಯ ಸಾಹಿತ್ಯದ ನಾವಿಕರೇ ಆಗುವ ಮೂಲಕ ಸಾಹಿತಿಗಳಿಗೆ ಪ್ರೇರಣೆ ನೀಡಿದ ಮಹಾನ್ ಚೈತನ್ಯ ಎಂದು ಬಣ್ಣಿಸಿದರು.


ಮಡಿಕೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 150ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಪಂಜೆ ಮಂಗೇಶರಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಜಿಲ್ಲೆಯ ಸಾಹಿತಿ ಜಲಜಾ ಶೇಖರ್ ಅವರ ಅಗ್ನಿಕುಂಡ ಕಥಾ ಸಂಕಲನ ಅನಾವರಣಗೊಳಿಸಿದ ಕಸಾಪ ಹಾಸನ ಜಿಲ್ಲಾಧ್ಯಕ್ಷ ಮಲ್ಲೇಶಗೌಡ ಮಾತನಾಡಿ, 20ನೇ ಶತಮಾನದ ಆರಂಭಿಕ ಕಾಲಘಟ್ಟದ ಸಾಹಿತಿ ನಂದಳಿಕೆಯ ನಾರಣಪ್ಪ ಅವರು ಹೊಸಗನ್ನಡದ ಮುಂಗೋಳಿ ಎಂದು ಕರೆಸಿಕೊಂಡರೆ, ಪಂಜೆ ಮಂಗೇಶರಾಯರು ಕನ್ನಡ ಸಾಹಿತ್ಯ ಕೃಷಿ ಮೂಲಕ ರಾಗವಾಗಿ ಹಾಡಿದ ಕೋಗಿಲೆಯಾಗಿದ್ದಾರೆ ಎಂದರು. ಇಂದು ಜೋಗವನ್ನು ನೆನಪಿಸಿಕೊಳ್ಳುವಾಗ ನಿಸಾರ್ ಅಹಮ್ಮದ್ ಅವರ 'ಜೋಗದ ಸಿರಿ ಬೆಳಕಿನಲ್ಲಿ' ನೆನಪಿಗೆ ಬರುತ್ತದೆ. ಅದೇ ರೀತಿ ಕೊಡಗಿನ ಸಿರಿಯ ಬಗ್ಗೆ ಗಮನಿಸಿದಾಗ ಪಂಜೆ ಮಂಗೇಶರಾಯರು 'ಹುತ್ತರಿ' ಹಾಡಿನ ಮೂಲಕ ನಮ್ಮ ಕಣ್ಮುಂದೆ ಬರುತ್ತಾರೆ ಎಂದು ಸ್ಮರಿಸಿದರು.

ಹುತ್ತರಿ ಹಾಡು ದೃಶ್ಯ ನಮನ ಉದ್ಘಾಟನೆ: ನಾಡಿನ ಹಿರಿಯ ಸಾಹಿತಿ ಅರವಿಂದ ಚೊಕ್ಕಾಡಿ ಅವರು ಹೆಚ್.ಟಿ.ಅನಿಲ್ ಅವರ ಪರಿಕಲ್ಪನೆ ಮತ್ತು ಜೀವಿತಾ ಶೇಖರ್ ಸಂಕಲನದಲ್ಲಿ ಸಿದ್ಧಗೊಳಿಸಲಾದ 'ಹುತ್ತರಿ ಹಾಡು' ದೃಶ್ಯ ನಮನವನ್ನು ಸಾಮಾಜಿಕ ಜಾಲತಾಣದಲ್ಲಿ ಬಿಡುಗಡೆಗೊಳಿಸಿದರು.

ಕಸಾಪ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್ ಮಾತನಾಡಿ, ಪಂಜೆ ಮಂಗೇಶರಾಯರು ಕನ್ನಡ ಸಾಹಿತ್ಯ ಲೋಕಕ್ಕೆ ಹಲ ಹೊಸತುಗಳನ್ನು ನೀಡಿದ್ದಾರೆ. ಅವರ 125ನೇ ವರ್ಷಾಚರಣೆ ಇಲ್ಲೇ ನಡೆದಿತ್ತು. ಜಿಲ್ಲಾ ಕಸಾಪ 35 ದತ್ತಿ ನಿಧಿಗಳನ್ನು ಸ್ಥಾಪಿಸಿದ್ದು, ಆ ಮೂಲಕ ಕನ್ನಡ ಸಾಹಿತ್ಯ ಪರಂಪರೆ, ಸಾಹಿತಿಗಳನ್ನು ಯುವ ಸಮೂಹಕ್ಕೆ ಪರಿಚಯಿಸುವ ಕಾರ್ಯಕ್ರಮ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಉಳುವಂಗಡ ಕಾವೇರಿ ಅವರ 'ಮುಕ್ತಕ ಮಾಣಿಕ್ಯ' ಪುಸ್ತಕವನ್ನು ಕಸಾಪ ಮಾಜಿ ಜಿಲ್ಲಾಧ್ಯಕ್ಷ ಟಿ.ಪಿ.ರಮೇಶ್ ಅನಾವರಣಗೊಳಿಸಿದರು. ಸಮಾರಂಭದ ಆರಂಭದಲ್ಲಿ 'ಎಲ್ಲಿ ಭೂರಮೆ' ಹಾಡಿಗೆ ಗಾಯಕ ಟಿ.ಡಿ.ಮೋಹನ್ ಮತ್ತು ಕಲಾವಿದ ಬಿ.ಆರ್.ಸತೀಶ್ ಕಾವ್ಯ–ಕುಂಚ ಗಾಯನ ನಡೆಸಿಕೊಟ್ಟರು. ಎಸ್.ಐ.ಮುನೀರ್ ಅಹಮ್ಮದ್, ಎಸ್.ಡಿ.ವಿಜೇತಾ, ಕಡ್ಲೇರ ತುಳಸಿ, ರಾಜೇಶ್ ಪದ್ಮನಾಭ ಕೆ.ಎಸ್.ನಾಗೇಶ್, ರೇವತಿ ರಮೇಶ್, ವೆಂಕಟೇಶ್ವರ ಪ್ರಸನ್ನ, ಅಜ್ಜಿನಿಕಂಡ ಮಹೇಶ್ ನಾಚಯ್ಯ ಹಾಜರಿದ್ದರು.

ಮದುವೆಯಾಗುವುದಾಗಿ ನಂಬಿಸಿ ನರ್ಸ್ ಮೇಲೆ ಅತ್ಯಾಚಾರ

ಪ್ರಿಯಕರ, ಆತನ ತಂದೆ-ಅಕ್ಕನ ವಿರುದ್ಧ ಕೇಸ್

ಕೊಳ್ಳೇಗಾಲ, ಫೆ.20–ಮದುವೆಯಾಗುವುದಾಗಿ ನಂಬಿಸಿ ನರ್ಸ್ ಮೇಲೆ ಅತ್ಯಾಚಾರವೆಸಗಿ, ಗರ್ಭಪಾತ ಮಾಡಿಸಿದ ನಂತರ ವಂಚಿಸಿದ ಪ್ರಿಯಕರ ಸೇರಿದಂತೆ ಆತನ ತಂದೆ, ಅಕ್ಕನ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ತಾಲೂಕಿನ ತೆಳ್ಳನೂರು ಗ್ರಾಮದ ಸಿದ್ದಪ್ಪಾಜಿ ಅಲಿಯಾಸ್ ಶಿವು ಹಾಗೂ ಈತನ ತಂದೆ ದೊಡ್ಡಸಿದ್ದಯ್ಯ ಮತ್ತು ಅಕ್ಕ ಲಕ್ಷ್ಮೀ ವಿರುದ್ಧ ಪ್ರಕರಣ ದಾಖಲಾಗಿದೆ.

ಮೂಲತಃ ಯಳಂದೂರು ತಾಲೂಕಿನ ಮದ್ದೂರು ಗ್ರಾಮದವರಾಗಿದ್ದು, ಹಾಲಿ ಬೆಂಗಳೂರಿನ ಆರ್.ಆರ್.ನಗರದಲ್ಲಿ ಶುಶ್ರೂಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಯುವತಿ ಮತ್ತು ಸಂಬಂಧಿಕರೇ ಆದ ತೆಳ್ಳನೂರು ಗ್ರಾಮದ ಸಿದ್ದಪ್ಪಾಜಿ ಅಲಿಯಾಸ್ ಶಿವು ನಡುವೆ ಪ್ರೇಮಾಂಕುರವಾಗಿತ್ತು. ನಮ್ಮಿಬ್ಬರ ಪ್ರೀತಿ, ಸಲುಗೆ ಹಿನ್ನೆಲೆ ಬೈಕ್, ಲ್ಯಾಪ್‌ಟ್ಯಾಪ್ ಖರೀದಿ ಮತ್ತು ಜಮೀನಿನಲ್ಲಿ ಕೊಳವೆ ಬಾವಿ ಅಳವಡಿಕೆಗಾಗಿ 4.50 ಲಕ್ಷ ರೂ. ನೀಡಲಾಗಿದೆ ಎಂದು ಯುವತಿ ದೂರಿನಲ್ಲಿ ತಿಳಿಸಿದ್ದಾಳೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿ ರೂಂ ಮಾಡಿಕೊಂಡಿದ್ದ ಸಿದ್ದಪ್ಪಾಜಿ ಆಕೆಯನ್ನು ದಸರಾ ವೇಳೆ ಮೈಸೂರಿಗೆ ಕರೆಸಿಕೊಂಡು ಮದುವೆಯಾಗುವುದಾಗಿ ನಂಬಿಸಿ 2024ರ ಅಕ್ಟೋಬರ್‌ನಲ್ಲಿ 12 ರಿಂದ 29ನೇ ತಾರೀಕಿನ ತನಕ ಅತ್ಯಾಚಾರ ಎಸಗಿದ್ದಾನೆ. ನಂತರ ಗರ್ಭವತಿಯಾದ ತನ್ನನ್ನು ಮದುವೆಯಾಗಲು ನಿರಾಕರಿಸಿದ್ದಾನೆ.

ಈ ವಿಚಾರವನ್ನು ತೆಳ್ಳನೂರು ಗ್ರಾಮದಲ್ಲೇ ಇರುವ ಅವರ ತಂದೆ ಮತ್ತು ಅಕ್ಕ ಲಕ್ಷ್ಮೀಗೆ ತಿಳಿಸಿ, ನಾನು ಗರ್ಭವತಿಯಾಗಿದ್ದು ಮದುವೆ ಮಾಡಿಸಿ ಎಂದು ಕೇಳಿದಾಗ ಗರ್ಭವತಿಯಾಗಿರುವ ನಿನ್ನ ಮದುವೆಯಾಗಲು ನಮ್ಮ ಕುಲಸ್ಥರು, ಕುಟುಂಬ ವರ್ಗ ಒಪ್ಪಲ್ಲ. ಗರ್ಭಪಾತ ಮಾಡಿಸಿಕೊಂಡರೆ ಮದುವೆ ಮಾಡಿಸುತ್ತೇವೆ ಎಂದು ಹೇಳಿದರು.

ಇವರ ಮಾತು ನಂಬಿ ಗರ್ಭನಿರೋಧಕ ಮಾತ್ರೆ ತೆಗೆದುಕೊಂಡೆ. ಬಳಿಕ ಸಿದ್ದಪ್ಪಾಜಿ ನನ್ನ ಮದುವೆಯಾಗುವುದಿಲ್ಲ ಎಂದು ವಂಚಿಸಿದ್ದಾರೆ. ನಾನು ಜೈಲಿಗೆ ಹೋದರೂ ಮದುವೆ ಆಗಲ್ಲ ಎಂದು ನಿರಾಕರಿಸಿದ್ದಾನೆ. ಹಾಗಾಗಿ ನನಗೆ ಮೋಸ ಮಾಡಿದ್ದು, ಅಲ್ಲದೆ ಗರ್ಭಪಾತಕ್ಕೆ ಕಾರಣನಾದ ಸಿದ್ದಪ್ಪಾಜಿ, ಆತನ ತಂದೆ ದೊಡ್ಡಸಿದ್ದಯ್ಯ ಹಾಗೂ ತಾಯಿ ಲಕ್ಷ್ಮೀ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ನೊಂದ ಯುವತಿ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

2ನೇ ಹಂತದ 'ಸಂತಸಮಯ ವೃದ್ಧಾಪ್ಯ'ಕ್ಕೆ ಚಾಲನೆ

● ಮೊದಲ ಹಂತದ ಯೋಜನೆ ಯಶಸ್ವಿ ● ಜಿಪಂ ಸಿಇಓ ಮೋನಾ ರೋತ್ ಮಾಹಿತಿ

ಚಾಮರಾಜನಗರ, ಫೆ.20–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಸತ್ಯ ಎಜುಕೇರ್ ಕಾಂಪಿಟೆನ್ಸಿ ಟ್ರಸ್ಟ್ ಸಹಯೋಗದೊಂದಿಗೆ ಜಿಲ್ಲೆಯಲ್ಲಿ ಪೈಲಟ್ ಪ್ರಾಜೆಕ್ಟ್ ಆಗಿ ಅನುಷ್ಠಾನಗೊಳಿಸುತ್ತಿರುವ ಸಂತಸಮಯ ವೃದ್ಧಾಪ್ಯ ಎರಡನೇ ಹಂತದ ಕಾರ್ಯಕ್ರಮಕ್ಕೆ ಗುರುವಾರ ನಗರದಲ್ಲಿ ಚಾಲನೆ ದೊರೆಯಿತು.

ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ಚಾಲನೆ ನೀಡಿದರು.


ಚಾಮರಾಜನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಸಂತಸಮಯ ವೃದ್ಧಾಪ್ಯ 2ನೇ ಹಂತದ ಕಾರ್ಯಕ್ರಮಕ್ಕೆ ಜಿಪಂ ಸಿಇಓ ಮೋನಾ ರೋತ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಹಿರಿಯ ನಾಗರಿಕರು ದೈಹಿಕ, ಮಾನಸಿಕ ಯೋಗಕ್ಷೇಮ ಗಮನದಲ್ಲಿಟ್ಟುಕೊಂಡು ವೃದ್ಧಾಪ್ಯದಲ್ಲಿ ಸಂತಸವಾಗಿ ಚಟುವಟಿಕೆಯಿಂದ ಇರಲು ಜಿಲ್ಲೆಯಲ್ಲಿ ಪೈಲಟ್ ಕಾರ್ಯಕ್ರಮವಾಗಿ ಸಂತಸಮಯ ವೃದ್ಧಾಪ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಕಳೆದ ಸೆಪ್ಟೆಂಬರ್‌ನಲ್ಲಿ ತಾಲೂಕಿನ 10 ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯಕ್ರಮ ಆರಂಭಿಸಲಾಯಿತು. ಸತ್ಯ ಎಜುಕೇರ್ ಕಾಂಪಿಟೆನ್ಸಿ ಟ್ರಸ್ಟ್ ಸಹಯೋಗದೊಂದಿಗೆ ಯೋಜನೆ ಮೊದಲ ಹಂತ ಯಶಸ್ವಿಯಾಗಿ ನಡೆದಿದೆ. ಗ್ರಾಮ ಪಂಚಾಯಿತಿಗಳಲ್ಲಿರುವ ಗ್ರಂಥಾಲಯಗಳಲ್ಲಿ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಈ ಯೋಜನೆಯಿಂದ ಗ್ರಂಥಾಲಯಗಳನ್ನು ಅರಿವು ಕೇಂದ್ರಗಳೆಂದು ಮಾರ್ಪಡಿಸಲಾಗಿದೆ ಎಂದು ತಿಳಿಸಿದರು.

ಹಿರಿಯ ನಾಗರಿಕರು ವೃದ್ಧಾಪ್ಯದಲ್ಲಿ ಸಂತೋಷದಿಂದ ಇರಬೇಕು. ಒಂಟಿತನ, ಬೇಸರ ಹಿರಿಯರನ್ನು ಕಾಡಬಾರದು. ಅವರ ಆರೋಗ್ಯ ಸಮಸ್ಯೆಗಳನ್ನು ಆಲಿಸಿ ಉತ್ತಮ ಜೀವನಶೈಲಿ, ಆಹಾರ ಪದ್ಧತಿಗೆ ಸಲಹೆ ನೀಡುವುದು, ಯೋಗ, ವಯಸ್ಸಿಗನುಗುಣವಾದ ದೈಹಿಕ ಚಟುವಟಿಕೆಗಳಿಗೆ ಪ್ರೋತ್ಸಾಹಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಎರಡನೇ ಹಂತದಲ್ಲಿ ಇನ್ನೂ 10 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಲಾಗಿದ್ದು, ಕಾರ್ಯಕ್ರಮದ ಸಫಲತೆಯ ಆಧಾರದ ಮೇಲೆ ಜಿಲ್ಲಾದ್ಯಂತ ಯೋಜನೆ ವಿಸ್ತರಣೆಯಾಗಲಿದೆ ಎಂದರು.

ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಪಿ.ಲಕ್ಷ್ಮೀ ಮಾತನಾಡಿ, ಸಂತಸಮಯ ವೃದ್ಧಾಪ್ಯ ಕಾರ್ಯಕ್ರಮ ರಾಜ್ಯದಲ್ಲೇ ಮೊದಲಿಗೆ ಚಾಮರಾಜನಗರ ಜಿಲ್ಲೆಯಲ್ಲಿ ಪೈಲಟ್ ಆಗಿ ಜಾರಿಗೊಳಿಸಲಾಗಿದೆ. ಈಗಾಗಲೇ ತಾಲೂಕಿನ ಸಂತೇಮರಹಳ್ಳಿ, ಮಂಗಲ, ಭೋಗಾಪುರ, ಮಾದಾಪುರ, ಉಮ್ಮತ್ತೂರು, ಹೆಗ್ಗೋಠಾರ, ಚಂದಕವಾಡಿ, ಕುಲಗಾಣ, ದೇಮಹಳ್ಳಿ ಹಾಗೂ ಕುದೇರು ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯಕ್ರಮ ನಡೆದಿದೆ ಎಂದರು.

ಎರಡನೇ ಹಂತದಲ್ಲಿ ತಾಲೂಕಿನ ಶಿವಪುರ, ಉಡಿಗಾಲ, ಹರದನಹಳ್ಳಿ, ವೆಂಕಟಯ್ಯನ ಛತ್ರ, ಕೊತ್ತಲವಾಡಿ, ಅರಕಲವಾಡಿ, ಬದನಗುಪ್ಪೆ, ನಂಜದೇವನಪುರ, ಹರವೆ, ಕೆಂಪನಪುರ ಗ್ರಾಮ ಪಂಚಾಯಿತಿಯಲ್ಲಿ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ. ಈ ಮಹತ್ವದ ಕಾರ್ಯಕ್ರಮಕ್ಕೆ ಗ್ರಾಮ ಪಂಚಾಯಿತಿ ಗ್ರಂಥಪಾಲಕರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸ್ವಸಹಾಯ ಗುಂಪುಗಳು ಸಹಕಾರ ನೀಡಲಿವೆ. ಎರಡನೇ ಹಂತದಲ್ಲೂ ಯಶಸ್ವಿಯಾಗಿ ಕಾರ್ಯಕ್ರಮ ಪೂರ್ಣಗೊಳಿಸಬೇಕಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಚಿದಂಬರ, ಸೆಂಟ್ ಜಾನ್ ವೈದ್ಯಕೀಯ ಕಾಲೇಜಿನ ಸಮುದಾಯ ವೈದ್ಯಕೀಯ ವಿಭಾಗದ ಡಾ.ಪ್ರೀತೇಶ್ ಕಿರಣ್, ಮನೋನಿಧಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಸಿಬಿನ್ ವರ್ಗಿಸ್, ಸತ್ಯ ಎಜುಕೇರ್ ಕಾಂಪಿಟೆನ್ಸಿ ಟ್ರಸ್ಟ್‌ನ ಡಾ.ಶಶಾಂಕ್ ಇತರರು ಉಪಸ್ಥಿತರಿದ್ದರು.

ಗ್ಯಾಸ್ ರೀಫಿಲ್ಲಿಂಗ್: ಗ್ರಾಪಂ ಸದಸ್ಯನ ಬಂಧನ

ಕೊಳ್ಳೇಗಾಲ: ಆಟೋಗಳಿಗೆ ಅಕ್ರಮವಾಗಿ ಗ್ಯಾಸ್ ರೀಫಿಲ್ಲಿಂಗ್ ಮಾಡುತ್ತಿದ್ದ ತಾಲೂಕಿನ ಸತ್ತೇಗಾಲ ಗ್ರಾಮ ಪಂಚಾಯಿತಿ ಸದಸ್ಯನನ್ನು ಗ್ರಾಮಾಂತರ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಸತ್ತೇಗಾಲ ಹ್ಯಾಂಡ್‌ಪೋಸ್ಟ್‌ನ ನಿವಾಸಿ ಹಾಗೂ ಗ್ರಾಪಂ ಸದಸ್ಯ ಸಿದ್ದು ಬಂಧಿತ. ಈತ ತನ್ನ ಮನೆಯಲ್ಲಿ ಅಕ್ರಮವಾಗಿ ಆಟೋಗಳಿಗೆ ಗ್ಯಾಸ್ ರೀಫಿಲ್ಲಿಂಗ್ ಮಾಡುತ್ತಿದ್ದ.

ಗ್ರಾಮಾಂತರ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ವರ್ಷಾ, ಎಎಸ್‌ಐ ತಖೀಉಲ್ಲಾ, ಸಿಬ್ಬಂದಿ ರವಿ, ವೆಂಕಟೇಶ್, ಬಿಳಿಗೌಡ, ಶಿವಕುಮಾರ್ ಮತ್ತು ಆಹಾರ ಇಲಾಖೆ ಇನ್ಸ್‌ಪೆಕ್ಟರ್ ಪ್ರಸಾದ್ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿ, 5ಕ್ಕೂ ಅಧಿಕ ಸಿಲಿಂಡರ್‌ಗಳನ್ನು ವಶಪಡಿಸಿಕೊಂಡಿದ್ದಾರೆ.


ಸತ್ತೇಗಾಲ ಹ್ಯಾಂಡ್‌ಪೋಸ್ಟ್‌ನಲ್ಲಿ ಗ್ಯಾಸ್ ರೀಫಿಲ್ಲಿಂಗ್ ಮಾಡುತ್ತಿದ್ದ ಸಿಲಿಂಡರ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿರುವುದು.

ಜಯಮ್ಮ ನಿಧನ



ಕೊಳ್ಳೇಗಾಲ, ಫೆ.20–ಪಟ್ಟಣದ ಮಾನಸ ಶಿಕ್ಷಣ ಸಂಸ್ಥೆ ಸಹಾಯಕಿ ಜಯಮ್ಮ (65) ಅನಾರೋಗ್ಯದಿಂದ ಗುರುವಾರ ನಿಧನರಾದರು.

ಮೃತರು, ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಪಟ್ಟಣದ ಬಸ್ತಿಪುರದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಸಂತಾಪ: ಮಾನಸ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ಪ್ರಾಂಶುಪಾಲರಾದ ಚನ್ನಶೆಟ್ಟಿ, ಕೃಷ್ಣೇಗೌಡ, ಮುಖ್ಯ ಶಿಕ್ಷಕ ಶಂಕರ್, ಶಿಕ್ಷಕರಾದ ಪ್ರಿಯಾ, ರಮ್ಯ, ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ.

ಉಡಿಗಾಲ ಬಳಿ ಆಕಸ್ಮಿಕ ಬೆಂಕಿಗೆ ಕಾರು ಭಸ್ಮ



ಬೆಂಕಿಗೆ ಕಾರು ಸಂಪೂರ್ಣವಾಗಿ ಸುಟ್ಟುಹೋಗಿರುವುದು.

ಚಾಮರಾಜನಗರ, ಫೆ.20–ಚಲಿಸುತ್ತಿದ್ದ ಕಾರಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡು ಕಾರು ಸಂಪೂರ್ಣ ಸುಟ್ಟು ಕರಕಲಾದ ಘಟನೆ ಚಾಮರಾಜನಗರ–ಗುಂಡ್ಲುಪೇಟೆ ಹೆದ್ದಾರಿಯ ಉಡಿಗಾಲ ಬಳಿ ಗುರುವಾರ ನಡೆದಿದೆ.

ಗುಂಡ್ಲುಪೇಟೆ ತಾಲೂಕಿನ ಲಕ್ಕೂರು ಗ್ರಾಮದ ಗಣೇಶ್ ಅವರ ಕಾರು ಸುಟ್ಟು ಹೋಗಿದ್ದು, ಚಾಮರಾಜನಗರದಲ್ಲಿ ಸರ್ವಿಸ್ ಮಾಡಿಸಲು ಗುಂಡ್ಲುಪೇಟೆ–ಚಾಮರಾಜನಗರ ಮುಖ್ಯರಸ್ತೆ ಮಾರ್ಗವಾಗಿ ಬೆಳಗ್ಗೆ ಗಣೇಶ್ ಒಬ್ಬರೇ ಕಾರಿನಲ್ಲಿ ಹೋಗುತ್ತಿದ್ದರು. ಈ ವೇಳೆ ಉಡಿಗಾಲ ಸಮೀಪವಿರುವ ವೃದ್ಧಾಶ್ರಮದ ಹತ್ತಿರ ಕಾರಿನ ಇಂಜಿನ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಗಣೇಶ್ ತಕ್ಷಣ ಇಳಿದು ಬಚಾವ್ ಆಗಿದ್ದಾರೆ.

ತಕ್ಷಣ ಗ್ರಾಮಸ್ಥರು ಅಗ್ನಿಶಾಮಕ ಠಾಣೆಗೆ ತಿಳಿಸಿದ್ದಾರೆ. ಅಗ್ನಿ ಶಾಮಕ ಸಿಬ್ಬಂದಿ ಬರುವ ವೇಳೆಗೆ ಕಾರು ಸಂಪೂರ್ಣವಾಗಿ ಸುಟ್ಟುಹೋಗಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಯಳಂದೂರು: ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತುರ್ತು ನಿರ್ವಹಣೆ ಕಾರ್ಯ ನಿಮಿತ್ತ ಫೆ.22 ರಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಯಳಂದೂರು ಪಟ್ಟಣ, ಗುಂಬಳ್ಳಿ, ಮದ್ದೂರು, ಆಲ್ಕೆರೆ ಅಗ್ರಹಾರ, ಬೂದಿತಿಟ್ಟು, ಎ.ದೇವರಹಳ್ಳಿ, ಟಿ.ಹೊಸೂರು, ಶಿವಕಹಳ್ಳಿ, ಅಗರ, ಮಾಂಬಳ್ಳಿ, ಬನ್ನಿಸಾರಿಗೆ, ವೈ.ಕೆ.ಮೋಳೆ, ಹೆಗ್ಗಡೆಹುಂಡಿ, ಗುಂಬಳ್ಳಿ, ಯರಗಂಬಳ್ಳಿ, ಬಿಳಿಗಿರಿರಂಗನಬೆಟ್ಟ, ಗೌಡಹಳ್ಳಿ, ಗಣಿಗನೂರು, ವಡಗೆರೆ, ಕೊಮಾರನಪುರ ಸೇರಿದಂತೆ ಇತರೆ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್‌ನ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಲಿಂಗರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹದೇಶ್ವರಬೆಟ್ಟದ ಹುಂಡಿಯಲ್ಲಿ 1.94 ಕೋಟಿ ಸಂಗ್ರಹ

ಹನೂರು, ಫೆ.20–ಮಲೆಮಹದೇಶ್ವರಬೆಟ್ಟದ ದೇವಸ್ಥಾನದ ಹುಂಡಿಗಳ ಹಣ ಎಣಿಕೆ ಕಾರ್ಯ ನಡೆದಿದ್ದು, ಈ ಬಾರಿ 28 ದಿನಗಳಲ್ಲಿ 1.94 ಕೋಟಿ ರೂ. ಸಂಗ್ರಹವಾಗಿದೆ.

ಮ.ಬೆಟ್ಟದ ಬಸ್ ನಿಲ್ದಾಣದ ಬಳಿಯ ವಾಣಿಜ್ಯ ಸಂಕೀರ್ಣದಲ್ಲಿ ಸಾಲೂರು ಬೃಹನ್ಮಠದ ಪೀಠಾಧ್ಯಕ್ಷರಾದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖದಲ್ಲಿ ಹುಂಡಿಗಳ ಎಣಿಕೆ ಕಾರ್ಯ ಪ್ರಾರಂಭಿಸಲಾಯಿತು. ಈ ಬಾರಿ ಕ್ಷೇತ್ರಕ್ಕೆ ಭಕ್ತರು ಅಮಾವಾಸ್ಯೆ, ಸರ್ಕಾರಿ ರಜೆ ದಿನಗಳ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರಿಂದ ಹರಕೆ ರೂಪದಲ್ಲಿ ಹಣ, ಚಿನ್ನ ಹಾಗೂ ಬೆಳ್ಳಿ ಪದಾರ್ಥಗಳನ್ನು ಹುಂಡಿಗೆ ಹಾಕಿದ್ದಾರೆ.

ಹುಂಡಿಗಳಲ್ಲಿ 1,94,49,243 ರೂ., ಚಿನ್ನ 63 ಗ್ರಾಂ ಮತ್ತು 1 ಕೆಜಿ 510 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ. ಅಲ್ಲದೆ, ವಿದೇಶಿ ನೋಟುಗಳು, ಚಲಾವಣೆಯಲ್ಲಿ ಇಲ್ಲದ 2000 ರೂ. ಮುಖಬೆಲೆಯ 6 ನೋಟುಗಳು ಸಂಗ್ರಹವಾಗಿವೆ.


ಮಲೆಮಹದೇಶ್ವರಬೆಟ್ಟದ ದೇವಸ್ಥಾನ ಹುಂಡಿ ಹಣ ಎಣಿಕೆ ಮಾಡಲಾಯಿತು.

ಎಣಿಕೆ ಕಾರ್ಯದಲ್ಲಿ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಈ.ರಘು, ಉಪಕಾರ್ಯದರ್ಶಿ ಚಂದ್ರಶೇಖರ್, ಲೆಕ್ಕಾಧೀಕ್ಷಕ ಗುರುಮಲ್ಲಯ್ಯ, ನಾಮನಿರ್ದೇಶಿತ ಸದಸ್ಯರಾದ ಗಂಗನ ತಿಮ್ಮಯ್ಯ, ಭಾಗ್ಯಮ್ಮ, ಮಹದೇವಪ್ಪ, ಚಾಮರಾಜನಗರ ಜಿಲ್ಲಾಡಳಿತ ಕಚೇರಿ ಶಶಿಕುಮಾರ್, ಬ್ಯಾಂಕ್ ನೌಕರರು, ಪೊಲೀಸ್ ಹಾಗೂ ಪ್ರಾಧಿಕಾರದ ಸಿಬ್ಬಂದಿ ಭಾಗವಹಿಸಿದ್ದರು.



ಸೈಕಲ್ ಚಿತ್ರದ ಟ್ರೇಲರ್ ಬಿಡುಗಡೆ

ಪುರೋಹಿತ್ ಫಿಲಂಸ್ ನಿರ್ಮಾಣದ ನಾಲ್ಕನೇ ಚಿತ್ರ 'ಸೈಕಲ್'. ಈ ಚಿತ್ರಕ್ಕೆ ಸಚ್ಚಿನ್ ಪುರೋಹಿತ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ, ನಿರ್ಮಾಣದ ಜತೆಗೆ ನಾಯಕನಾಗೂ ಅಭಿನಯಿಸಿದ್ದಾರೆ. ಹಿಂದಿನ ಕಾಲದಲ್ಲಿ ಪ್ರತಿಯೊಬ್ಬರೂ ಸೈಕಲ್ ಬಳಸುತ್ತಿದ್ದರು. ಹಾಗಾಗಿ ಎಲ್ಲರೂ ಆರೋಗ್ಯವಾಗಿದ್ದರು. ಆದರೆ ತಂತ್ರಜ್ಞಾನ ಬೆಳೆದಂತೆ ಈಗ ಸೈಕಲ್ ದೂರವಿಟ್ಟು, ಬೈಕ್, ಸ್ಕೂಟರ್ ಉಪಯೋಗಿಸುತ್ತಿದ್ದಾರೆ. ಈಗ ಸೈಕಲ್ ಉಪಯೋಗಿಸುವವರನ್ನು ಬಡವರೆಂದು ತುಚ್ಛವಾಗಿ ಕಾಣುತ್ತಾರೆ. ಆದರೆ ವಿದೇಶದಲ್ಲಿ ಸಚಿವರೊಬ್ಬರು ಸೈಕಲ್‌ನಲ್ಲೇ ಬಂದು ಪ್ರಮಾಣವಚನ ಸ್ವೀಕರಿಸಿದ್ದು ದೊಡ್ಡ ಸುದ್ದಿಯಾಗಿತ್ತು. ಇಂಥ ಅನೇಕ ವಿಷಯಗಳನ್ನಿಟ್ಟುಕೊಂಡು ಸೈಕಲ್ ಚಿತ್ರದ ಸನ್ನಿವೇಶಗಳನ್ನು ನಿರ್ದೇಶಕ ಸಚಿನ್ ಪುರೋಹಿತ್ ಅವರು ಸೃಷ್ಟಿಸಿದ್ದಾರೆ. ಮಧ್ಯಮ ವರ್ಗದ ಸೈಕಲ್ ಪ್ರೇಮಿಯೊಬ್ಬ ಬೈಸಿಕಲ್ ಉಪಯೋಗದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುತ್ತಾ, ಸೈಕಲ್ ಉಪಯೋಗದ ಕುರಿತಂತೆ ಒಂದು ಕೆಲಸದಲ್ಲಿ ಯಶಸ್ಸು ಗಳಿಸುತ್ತಾನೆ. ಅದು ಏನು? ಎನ್ನುವುದೇ ಚಿತ್ರದ ಎಳೆ. ಇದರ ಜತೆಗೆ ಸುಂದರ ಪ್ರೀತಿಯ ಕಥೆಯೂ ಈ ಚಿತ್ರದಲ್ಲಿದೆ. ಸಚ್ಚಿನ್ ಪುರೋಹಿತ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ನಟಿ ಸತ್ಯಶ್ರೀ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ, ಖಳನಟನಾಗಿ ದಯ, ಇವರೊಂದಿಗೆ ಚೇತನ್ ಕನ್ನಡಿಗ, ಮರುದಯ, ಮಮತ, ಶಾಲಿನಿ ಮುಂತಾದವರು ಅಭಿನಯಿಸಿದ್ದಾರೆ. ಈ ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು ಸಾಹಿತ್ಯ ರಚಿಸಿರುವ ಆರೋನ್ ಕಾರ್ತಿಕ್ ಅವರು ಸಂಗೀತ ಸಂಯೋಜನೆ ಕೂಡ ಮಾಡಿದ್ದಾರೆ. ಎ2 ಮ್ಯೂಸಿಕ್ ಕಂಪನಿಯು ಹೆಚ್ಚು ಮೊತ್ತ ನೀಡಿ ಸೈಕಲ್ ಚಿತ್ರದ ಆಡಿಯೋ ಹಕ್ಕುಗಳನ್ನು ಖರೀದಿಸಿದೆ. ಮೊನ್ನೆಯಷ್ಟೇ ನಾಯಕ ಸಚ್ಚಿನ್ ಪುರೋಹಿತ್ ಅವರ ಹುಟ್ಟುಹಬ್ಬ ಇತ್ತು. ಆ ಪ್ರಯುಕ್ತ ಚಿತ್ರದ ಟ್ರೇಲರ್ ಮತ್ತು ಹಾಡುಗಳನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ಬೆಂಗಳೂರು, ಕನಕಪುರ, ಬಾಗಲಕೋಟೆ, ಚಿಕ್ಕಮಗಳೂರು ಮತ್ತು ಮಂಡ್ಯದ ಸುತ್ತಮುತ್ತಲ ಸುಂದರ ತಾಣಗಳಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಅಂದುಕೊಂಡಂತೆ ಆದರೆ ಇದೇ ತಿಂಗಳು ಕೊನೆಯ ವಾರ ಸೈಕಲ್ ಚಿತ್ರವು ಬಿಡುಗಡೆಯಾಗುವ ಸಾಧ್ಯತೆಯಿದೆ.

'ಅಪಾಯವಿದೆ' ಎಚ್ಚರಿಕೆ ಟ್ರೇಲರ್ ಬಿಡುಗಡೆ



ಅಭಿಜಿತ್ ತೀರ್ಥಹಳ್ಳಿ ಅವರ ನಿರ್ದೇಶನದ ಅಪಾಯವಿದೆ ಎಚ್ಚರಿಕೆ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಸಾಮಾನ್ಯವಾಗಿ ಯಾರಾದರೂ ಸ್ಟಾರ್ ಕರೆಸಿ ಚಿತ್ರದ ಟೀಸರ್ ಇಲ್ಲವೇ ಟ್ರೇಲರ್ ಬಿಡುಗಡೆ ಮಾಡಿಸುವುದು ವಾಡಿಕೆ, ಆದರೆ 'ಅಪಾಯವಿದೆ ಎಚ್ಚರಿಕೆ' ಚಿತ್ರತಂಡ ಸದಾ ಸಾರ್ವಜನಿಕ ಸೇವೆಯಲ್ಲಿ ನಿರತರಾಗಿರುವ ಸಾಮಾನ್ಯ ವ್ಯಕ್ತಿಗಳ ಕೈಲಿ ಟ್ರೇಲರ್ ಬಿಡುಗಡೆ ಮಾಡಿಸಿದ್ದು ವಿಶೇಷವಾಗಿತ್ತು, ಆಟೋ ಚಾಲಕರು, ಕ್ಯಾಬ್ ಡ್ರೈವರ್‌ಗಳು, ಸ್ವಿಗ್ಗಿ ಡಿಲವರಿ ಬಾಯ್ಸ್, ಕನ್ನಡಪರ ಹೋರಾಟಗಾರರು ಹಾಗೂ ಮಾಧ್ಯಮ ಮಿತ್ರರನ್ನು ವೇದಿಕೆಗೆ ಕರೆಸಿ ಅವರಿಂದ ಚಿತ್ರದ ಟ್ರೇಲರ್‌ಗೆ ಚಾಲನೆ ನೀಡಲಾಯಿತು, ತುಂಬಾ ದಿನಗಳ ನಂತರ ಕನ್ನಡದಲ್ಲಿ ಸಸ್ಪೆನ್ಸ್, ಹಾರರ್, ಥ್ರಿಲ್ಲರ್ ಸಿನಿಮಾ ಮೂಡಿಬರುತ್ತಿದೆ. ಈ ಚಿತ್ರಕ್ಕೆ ಮೊದಲ ಬಾರಿಗೆ ಕಥೆ ಬರೆದು, ನಿರ್ದೇಶಿಸಿರುವ ಅಭಿಜಿತ್ ತೀರ್ಥಹಳ್ಳಿ ಅವರು ಅಪಾಯವಿದೆ ಎಚ್ಚರಿಕೆ ಚಿತ್ರದ ಬಹುತೇಕ ಭಾಗವನ್ನು ದಟ್ಟವಾದ ಕಾಡಲ್ಲಿ ಅದೂ ರಾತ್ರಿ ವೇಳೆಯಲ್ಲೇ ಚಿತ್ರೀಕರಿಸಿದ್ದಾರೆ. ಮ್ಯೂಸಿಕ್, ಮೇಕಿಂಗ್ ಹೀಗೆ ಎಲ್ಲ ವಿಭಾಗದಲ್ಲೂ ಸದ್ದು ಮಾಡುತ್ತಿರೋ ಅಪಾಯವಿದೆ ಎಚ್ಚರಿಕೆ ಚಿತ್ರವನ್ನು ವಿ.ಜಿ. ಮಂಜುನಾಥ್ ಮತ್ತು ಪೂರ್ಣಿಮಾ ಎಂ.ಗೌಡ ಅವರು ನಿರ್ಮಿಸಿದ್ದಾರೆ. ಸುನಾದ್ ಗೌತಮ್ ಈ ಚಿತ್ರಕ್ಕೆ ಸಂಗೀತ ಸಂಯೋಜನೆಯ ಜತೆಗೆ ಛಾಯಾಗ್ರಹಣ ಕೂಡ ನಿಭಾಯಿಸಿದ್ದಾರೆ.

ಅಣ್ಣಯ್ಯ ಸೀರಿಯಲ್ ಖ್ಯಾತಿಯ ನಟ ವಿಕಾಶ್ ಉತ್ತಯ್ಯ, ಅಮೃತಧಾರೆ ಖ್ಯಾತಿಯ ರಾಧಾ ಭಗವತಿ ಈ ಚಿತ್ರದ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ರಾಘವ್ ಕೊಡಚಾದ್ರಿ, ಮಿಥುನ್ ತೀರ್ಥಹಳ್ಳಿ ಉಳಿದ ಪಾತ್ರದಲ್ಲಿದ್ದಾರೆ. ಮೂವರು ಬೇಜವಾಬ್ದಾರಿ ಹುಡುಗರ ಸುತ್ತ ನಡೆಯುವ ಕಥಾಹಂದರ ಇರುವ ಈ ಚಿತ್ರಕ್ಕೆ ತೀರ್ಥಳ್ಳಿ ಸುತ್ತಮುತ್ತಲಿನ ಕಾಡಿನಲ್ಲೇ ಚಿತ್ರೀಕರಿಸಲಾಗಿದೆ. ಈ ಮೂರೂ ಜನ ಹಣದ ಆಸೆಗೆ ಬಿದ್ದು ಜೀವನದಲ್ಲಿ ಅಡ್ಡದಾರಿ ಹಿಡಿಯುತ್ತಾರೆ. ಆನಂತರ ಏನೇನೆಲ್ಲಾ ಆಗುತ್ತದೆ ಎನ್ನುವುದೇ ಚಿತ್ರದ ಕಾನ್ಸೆಪ್ಟ್, ಪಂಚಭೂತಗಳು ಈ ಚಿತ್ರದ ಒಂದೊಂದು ಪಾತ್ರವಾಗಿ ಮೂಡಿ ಬಂದಿವೆ. ಬೆಂಕಿಯ ಪಾತ್ರವನ್ನು ರೆಪ್ರೆಸೆಂಟ್ ಮಾಡುವ ಸೂರಿಯಾಗಿ ವಿಕಾಶ್ ಉತ್ತಯ್ಯ ಕಾಣಿಸಿಕೊಂಡಿದ್ದು, ರಾಘವ ಕೊಡಚಾದ್ರಿ ಗಾಳಿಯನ್ನು, ನೀರನ್ನು ಪ್ರತಿನಿಧಿಸುವ ಗಾಬರಿ ಪಾತ್ರದಲ್ಲಿ ಮಿಥುನ್ ತೀರ್ಥಳ್ಳಿ ಕಾಣಿಸಿಕೊಂಡಿದ್ದಾರೆ. ಈ ಮೂವರೂ ಆಕಾಶದ ಗೋಲು ತಲುಪುವ ಪ್ರಯತ್ನ ಮಾಡುತ್ತಾರೆ. ಮುದ್ದು ಬ್ರಾಹ್ಮಣ ಹುಡುಗಿಯಾಗಿ ರಾಧಾ ಭಗವತ್ ಕಾಣಿಸಿಕೊಂಡಿದ್ದಾರೆ. ಅಪಾಯವಿದೆ ಎಚ್ಚರಿಕೆ ಚಿತ್ರವು ತಾಂತ್ರಿಕವಾಗಿ, ಕ್ರಿಯಾತ್ಮಕವಾಗಿ ಕೂಡ ಅದ್ಭುತವಾಗಿದೆ ಎನ್ನುವುದು ಬಿಡುಗಡೆಯಾಗಿರುವ ಟ್ರೇಲರ್‌ನಲ್ಲಿ ಕಂಡ ದೃಶ್ಯಗಳು, ಮ್ಯೂಸಿಕ್ ಮೂಲಕ ತಿಳಿಯುತ್ತದೆ.



ಡಾ.ರಾಜಕುಮಾರ್ ಅಭಿನಯದ ಚಿತ್ರಗಳಲ್ಲಿ ವಿಲನ್‌ಗಳಿಗೆ ಅವರು ಸಾಮಾನ್ಯವಾಗಿ ಬಳಸುತ್ತಿದ್ದ ಪದ ಬಡ್ಡಿಮಗನೇ, ಇದೇ ಪದ 'ಶಭಾಷ್ ಬಡ್ಡಿಮಗ್ನೆ' ಶೀರ್ಷಿಕೆಯಡಿ ಸಿನಿಮಾ ನಿರ್ಮಾಣವಾಗಿದೆ. ಕಾಂತಾರ ಖ್ಯಾತಿಯ ಪ್ರವೋದ್ ಶೆಟ್ಟಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ ಈ ಚಿತ್ರ ಬಿಡುಗಡೆಯ ಹಂತದಲ್ಲಿದೆ, ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಹಾಗೂ ಹಾಡುಗಳ ಬಿಡುಗಡೆ ಸಮಾರಂಭ ಕಲಾವಿದರ ಸಂಘದಲ್ಲಿ ನೆರವೇರಿತು. ಕಿಶನ್ ಪ್ರೊಡಕ್ಷನ್ ಅಡಿ ಚೈತ್ರಾ ಪ್ರಕಾಶ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಬಿ.ಎಸ್. ರಾಜಶೇಖರ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು 90ರ ದಶಕದಲ್ಲಿ ನನ್ನ ಪರಿಚಿತರೊಬ್ಬರು ಹೇಳಿದ ಘಟನೆಯ ಎಳೆ ಈ ಚಿತ್ರಕ್ಕೆ ಪ್ರೇರಣೆ. ಸೋಮಾರಿ ಪೊಲೀಸ್ ಅಧಿಕಾರಿಯೊಬ್ಬನ ಬೇಜವಾಬ್ದಾರಿ ನಡವಳಿಕೆ ಹಾಗೂ ಆತನ ಸುತ್ತ ನಡೆಯುವ ಘಟನೆಗಳೇ ಈ ಚಿತ್ರದ ಕಥಾಹಂದರ. ಆತ ತನ್ನ ಕರ್ತವ್ಯಕ್ಕಿಂತ ವೈಯಕ್ತಿಕ ಬದುಕಿನಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತಾ ವೃತ್ತಿ ಬದುಕನ್ನು ಗಂಭೀರವಾಗಿ ತೆಗೆದುಕೊಳ್ಳದೆ ನಿರ್ಲಕ್ಷಿಸುತ್ತಾನೆ. ಆನಂತರ ಈತನ ಠಾಣಾ ವ್ಯಾಪ್ತಿಯಲ್ಲಿ ಅಪರಾಧವೊಂದು ನಡೆದಾಗ ಅದನ್ನು ಈತ ಹೇಗೆ ತನಿಖೆ ಮಾಡುತ್ತಾನೆ ಎಂದು ಚಿತ್ರದಲ್ಲಿ ಹೇಳಲಾಗಿದೆ. ಚಿಕ್ಕಮಗಳೂರು, ಕಳಸ, ಹೊರನಾಡು ಅಲ್ಲದೆ ಎರಡು ಹಾಡುಗಳನ್ನು ಬ್ಯಾಂಕಾಕ್‌ನಲ್ಲಿ ಚಿತ್ರೀಕರಿಸಲಾಗಿದೆ ಎಂದು ಹೇಳಿದರು. ನಾಯಕ ಪ್ರವೋದ್ ಶೆಟ್ಟಿ ಮಾತನಾಡುತ್ತ, ಇದುವರೆಗೆ ನಾನು ಭ್ರಷ್ಟ, ಪ್ರಾಮಾಣಿಕ, ಮುಗ್ಧ ಖಳ ಪೊಲೀಸ್ ಅಧಿಕಾರಿ ಯಾಗಿ ಕಾಣಿಸಿಕೊಂಡಿದ್ದೆ. ಇದೇ ಮೊದಲ ಬಾರಿಗೆ ಒಬ್ಬ ಸೋಂಬೇರಿ ಪೋಲೀಸ್ ಆಫೀಸರ್ ಆಗಿ ನಟಿಸಿದ್ದೇನೆ. ನಿರ್ದೇಶಕರು ಹೇಳಿದ ಕತೆಯಲ್ಲಿ ಕುತೂಹಲ, ಹಾಸ್ಯ ತುಂಬಿತ್ತು. ಇಲ್ಲ ಎನ್ನಲಾಗದೆ ಒಪ್ಪಿದೆ, ಇಡೀ ಸಿನಿಮಾದ ಕಥೆ ಒಂದು ಪೊಲೀಸ್ ಠಾಣೆಯ ಸುತ್ತ ನಡೆಯುತ್ತದೆ. ಅಲ್ಲಿನ ಜನ, ಸಿಬ್ಬಂದಿಯಿಂದ ನಿಷ್ಪ್ರಯೋಜಕನೆಂದು ಕರೆಸಿಕೊಂಡಿದ್ದ ನನಗೆ ಒಂದು ಕೇಸಿನಲ್ಲಿ ಜಯ ಸಿಗುತ್ತದೆ. ಅದು ಏನು ಎಂಬುದನ್ನು ತಿಳಿಯಲು ಚಿತ್ರ ನೋಡಬೇಕು ಎಂದರು.

ಇದೇ ತಿಂಗಳ ಕೊನೆವಾರ ತೆರೆಕಾಣುತ್ತಿರುವ ಈ ಚಿತ್ರದ ಛಾಯಾಗ್ರಾಹಕರಾಗಿ ಅಣಜಿ ನಾಗರಾಜ್, ಸಂಗೀತ ನಿರ್ದೇಶಕರಾಗಿ ಸಂತೋಷ್ ಜೋಶ್ವ ಕೆಲಸ ಮಾಡಿದ್ದಾರೆ. ಚಿತ್ರದ ನಾಯಕಿಯಾಗಿ ಆದ್ಯಪ್ರಿಯಾ, ಶಂಕರ್ ಅಶ್ವಥ್, ಪ್ರಕಾಶ್ ತುಮ್ಮಿನಾಡು, ಸಾಮ್ರಾಟ್ ಶೆಟ್ಟಿ, ಕಾವ್ಯಪ್ರಕಾಶ್, ರವಿತೇಜ, ಮಿತ್ರ, ಮೂಗು ಸುರೇಶ್ ಹಾಗೂ ಇತರರು ನಟಿಸಿದ್ದಾರೆ.

ಸಿನಿಪದಬಂಧ-565



ಉಮ್ಮತ್ತೂರು ಇಂದುಶೇಖರ್
ಮೊ.9880820462

1			2	■	3	4	■	5		6
	■	■		■	■		■		■	
7		■	8						■	■
	■	■		■	■	■	■		■	9
	■	10					11	■	■	
12		■		■	■	■		■	13	
	■	■	■	■	14	■		■	■	
■	■	15						16	■	
17	■		■	■	■	■	■		■	
18						■	19			
	■	■	■	■	■	■	■		■	■

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ದಿನೇಶ್‌ಬಾಬುವಿನ ಬೆಳಗಿನ ಹಾಡು! 4
3." _ _ ನೀನು ಆಗಸದಿಂದ ಮರೆಯಾಗಿ ಹೋಗದೆ..... " 2
5.ನದಿಯೊಂದರ ಹೆಸರುಳ್ಳ ನಟಿ 3
7.ಆಂಗ್ಲದ ಬಂದೂಕು ಇಲ್ಲಿ ತಿರುಗಿದೆ 2
8.ಸರದಾರ ಅಂಬರೀಷ್‌ಗೆ ಪೇರಾಲ ನಿರ್ದೇಶಕ 6
10.ಕಮಲ್, ರಮೇಶ್, ಶೃತಿ ಅಭಿನಯದ ಚಿತ್ರ 7
12.ಸ್ವರ್ಗಕ್ಕೆ ದಾರಿ ತೋರಿದಾಕೆ 2
13.ಶಿವರಾಜ್ ಕುಮಾರ್ – ಸಂಧ್ಯಾ ಅಭಿನಯದ ಚಿತ್ರ 2
15.ಕಲ್ಲಿನಕೋಟೆ ಎಂದೊಡನೆ ನೆನಪಾಗುವ ವೀರ 7
18.ಜಿ. ವಿ. ಅಯ್ಯರ್ ಅವರ ವಕೀಲನ ಪುತ್ರಿ 6
19.ಸಲೀಂ ಜೊತೆಗಾರ್ತಿ 4

ಮೇಲಿನಿಂದ ಕೆಳಕ್ಕೆ

1.ಇಲ್ಲೇ ಎಡದಿಂದ ಬಲಕ್ಕೆ 8ರಲ್ಲಿರುವ ನಾಯಕಿ 7
2.ಉಪೇಂದ್ರ ನಿರ್ದೇಶನದಲ್ಲಿ ಜಗ್ಗೇಶ್ ನಾಟಿ ಫೆಲೋ 6
4.ನೂರು ನೂರು ತರಹದ ವೇದನೆ 3
5.ನಾಯಕ ನಟ ಜಗ್ಗೇಶ್ ನಲ್ಲಿ ಒಂಬತ್ತು ಬಗೆಯ ಸ್ವಾದವಿದೆ 4
6.ವಿಷ್ಣುವರ್ಧನ್ – ಸುಪರ್ಣ ಅಭಿನಯದ ಚಿತ್ರ 2
9.ಮಾಸವೊಂದರಲ್ಲಿ ಇಬ್ಬರು ನಟಿಯರಿರಲು ಚಿತ್ರವೊಂದು ಪ್ರತ್ಯಕ್ಷ! 7
11.ದೊಡ್ಡ ಹೊಟ್ಟೆಯುವನಿಗೆ ಹೀಗೊಂದು ಪದ 4
14.ಶಶಿಕುಮಾರ್ – ಪದ್ಮಿನಿ ಅಭಿನಯದ ಚಿತ್ರ 2
15.ವಿಶುಕುಮಾರ್ ಅವರ ಆಂಗ್ಲ ತಾಯಿ 3
16.ಶಂಕರ್‌ನಾಗ್ ಅಭಿನಯದ ಕಪ್ಪನೆಯ ಹಾವು 4
17.ಭಾಗ್ಯದ ಬಳೆಗಾರನ ಬಳೆಯ ಗೊಂಚಲು 3

ಸಿನಿ ಪದಬಂಧ 564ರ ಉತ್ತರ

ಪ್ರೇ	ಮ	ಲೋ	ಕ	■	ರಾ	ಮು	■	ಜಿ	ಬೂಂ	ಬಾ
ಮಿ	■	■	ನ	■	■	ಕುಂ	■	ಮ್ಮಿ	■	ಲೆ
ಗ	ಜ	■	ಸು	ರ	ಸುಂ	ದ	ರಾಂ	ಗ	■	■
ಳ	■	■	ನ	■	■	■	■	ಲ್ಲಿ	■	ಇಂ
ಸ	■	ಮ	ನ	ಮಿ	ಡಿ	ಯಿ	ತು	■	■	ದಿ
ವಾ	ಲಿ	■	ಸು	■	■	■	ತ್ತಾ	■	ಮೌ	ನ
ಲ್	■	■	■	■	ಬ	■	ಮು	■	■	ರಾ
■	■	ಚಿ	ಲು	ವಿ	ನ	ಚಿ	ತ್ತಾ	ರ	■	ಮಾ
ಅಂ	■	ಲು	■	■	■	■	■	ವಿ	■	ಯ
ಬ	ಡ	ವ	ರಾ	ಸ್ಕ	ಲ್	■	ಪ್ರೇ	ಮಾ	ಯ	ಣ
ರ	■	■	■	■	■	■	■	ಮ	■	■

ವಿಜೇತರು: ಆರ್.ಸೋಮಶೇಖರ್ (ಸಹ ಶಿಕ್ಷಕ) ಸ.ಕಿ.ಪ್ರಾ.ಶಾಲೆ, ಪಟ್ಟೇಹುಂಡಿ, ರಂಗಸಮುದ್ರ ಅಂಚೆ, ತಿ.ನರಸೀಪುರ ತಾಲೂಕು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015



ಯುವಕನೊಬ್ಬ ಗರ್ಭ ಧರಿಸಿದ ಕಥೆ

ಇಂದು ರಾಜ್ಯಾದ್ಯಂತ ತೆರೆ ಕಾಣುತ್ತಿರುವ 'ನಿಮಗೊಂದು ಸಿಹಿ ಸುದ್ದಿ' ಚಿತ್ರದ ಟ್ರೇಲರ್, ಇತ್ತೀಚೆಗೆ ಬಿಡುಗಡೆಯಾಗಿದೆ.

ಯುವಕನೊಬ್ಬ ಗರ್ಭಧರಿಸಿ ಅಚ್ಚರಿ ಹುಟ್ಟಿಸುವ ವಿಷಯದ ಸುತ್ತ ಸಾಗುವ ಕಥೆ ಈ ಚಿತ್ರದಲ್ಲಿದ್ದು ನಾಯಕ ಕಂ ನಿರ್ದೇಶಕ ರಘು ಭಟ್ ಅವರಿಗೆ ಚಿತ್ರತಂಡ ಸೀಮಂತ ಶಾಸ್ತ್ರ ಮಾಡುವ ಮೂಲಕ ಟ್ರೇಲರ್ ಬಿಡುಗಡೆ ಮಾಡಲಾಯ್ತು.

ನಾಯಕ ರಘು ಭಟ್ ಮಾತನಾಡುತ್ತ, ಇದಕ್ಕೂ ಮೊದಲು ಪುರುಷರು ಗರ್ಭ ಧರಿಸಿದ ಚಿತ್ರವೊಂದು ಹಲವು ವರ್ಷಗಳ ಹಿಂದೆ ಹಾಲಿವುಡ್‌ನಲ್ಲಿ ಬಂದಿತ್ತು. ಕೇರಳದಲ್ಲಿ ಇಂಥದ್ದೊಂದು ಪ್ರಯತ್ನ ಆಗಿದ್ದು, ಅಲ್ಲೊಂದು ಕಥೆ ಇದೆ. ಆದರೆ, ನಮ್ಮ ಕಥೆಗೂ, ಇದ್ಯಾವುದಕ್ಕೂ ಸಂಬಂಧವಿಲ್ಲ. ಇದೊಂದು ವಿಭಿನ್ನ ಪ್ರಯತ್ನ, ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ಇಂಥದ್ದೊಂದು ಪರಿಕಲ್ಪನೆಯನ್ನು ಹಾಸ್ಯಮಯವಾಗಿ ಹೇಳುವ ಪ್ರಯತ್ನ ಮಾಡಿದ್ದೇವೆ. ಚಿತ್ರದ ಬಗ್ಗೆ ಸ್ವಲ್ಪ ಬಿಟ್ಟುಕೊಟ್ಟರೂ, ಸ್ವಾರಸ್ಯವಿರುವುದಿಲ್ಲ. ಅದನ್ನು ಚಿತ್ರಮಂದಿರದಲ್ಲೇ ನೋಡಿದರೆ ಚೆನ್ನಾಗಿರುತ್ತದೆ ಎಂದರು.

ಈ ಚಿತ್ರವನ್ನು ಎಲ್ಲ ಮಹಿಳೆಯರಿಗೆ ಅರ್ಪಿಸುವುದಾಗಿ ಹೇಳುವ ರಘು ಭಟ್, ಚಿತ್ರದ ಕಥೆ ಬರೆಯುವುದಕ್ಕೆ ನಮ್ಮ ತಾಯಿಯೇ ಸ್ಫೂರ್ತಿ. ನಿನ್ನನ್ನು ಒಂಬತ್ತು ತಿಂಗಳು ಹೆತ್ತು-ಹೊತ್ತಿದ್ದಕ್ಕೆ ಈ ರೀತಿ ಮಾಡಿದ ಎಂಬ ಮಾತು ಸಹಜವಾಗಿ ಎಲ್ಲರ ಮನೆಯಲ್ಲೂ ಸಾಮಾನ್ಯವಾಗಿ ಕೇಳಿಬರುತ್ತದೆ. ನಾನು ಒಮ್ಮೆ ಇಂಥದ್ದೊಂದು ಮಾತು ಕೇಳ ಬೇಕಾಯಿತು. ಒಬ್ಬ ತಾಯಿ ಇಷ್ಟೊಂದು ನೋವು ಅನಭವಿಸಬೇಕಾದರೆ, ಯಾಕೆ ಈ ವಿಷಯನ್ನು ಇಟ್ಟುಕೊಂಡು ಚಿತ್ರ ಮಾಡಬಾರದು ಎಂಬ ಯೋಚನೆ ಹೊಳೆದು, ಈ ಕಥೆ ಬರೆದೆ. ಇದನ್ನು ಎಲ್ಲಾ ತಾಯಂದಿರು, ಅಕ್ಕಂದಿರಿಗೆ ಅರ್ಪಿಸುತ್ತಿದ್ದೇವೆ ಎಂದರು. ಈ ತರಹದ ಹೊಸ ಪ್ರಯತ್ನಗಳಿಗೆ ಪ್ರೇಕ್ಷಕರಿಂದ ಖಂಡಿತಾ ಮೆಚ್ಚುಗೆ ಸಿಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸುವ ರಘು ಭಟ್, ಹೊಸ ಥರದ ಪ್ರಯೋಗಗಳನ್ನು ಪ್ರೇಕ್ಷಕರು ಬೆಂಬಲಿಸುತ್ತಾರೆ ಎಂಬ ನಂಬಿಕೆಯಿಂದ ಸಿನಿಮಾ ಮಾಡಿರುತ್ತೇವೆ. ಅವರು ಇಂತಹ ಪ್ರಯೋಗಗಳನ್ನು ಗುರುತಿಸುವುದಷ್ಟೇ ಅಲ್ಲ, ಬೆಂಬಲಿಸುತ್ತಾ ಬಂದಿದ್ದಾರೆ. ಇದೊಂದು ಪಕ್ಕಾ ಮನರಂಜನಾತ್ಮಕ ಚಿತ್ರ. ಜನ ಬೆಂಬಲಿಸುತ್ತಾರೆ ಎಂಬ ನಂಬಿಕೆಯಿದೆ ಎಂದರು. ಅವ್ಯಕ್ತ ಸಿನಿ ಮಾಸ್ ಸಂಸ್ಥೆಯಡಿ ಹರೀಶ್ ಎನ್. ಗೌಡ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಥ್ರಿಲ್ಲರ್ 'ಪ್ರತ್ಯರ್ಥ'ಕ್ಕೆ ಶ್ರೀಮುರುಳಿ ಸಾಥ್



ಉಡುಪಿ ಮೂಲದ ಅರ್ಜುನ್ ಕಾಮತ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಥ್ರಿಲ್ಲರ್ ಕಾನ್ಸೆಪ್ಟ್ ಇರೋ ಚಿತ್ರ "ಪ್ರತ್ಯರ್ಥ" ಫೆ.28ರಂದು ತೆರೆಗೆ ಬರಲಿದೆ. ಇತ್ತೀಚೆಗೆ ಈ ಚಿತ್ರದ ಟ್ರೇಲರನ್ನು ರೋರಿಂಗ್‌ಸ್ಟಾರ್ ಶ್ರೀಮುರಳಿ ಅವರು ಅನಾವರಣಗೊಳಿಸಿದರು.

ನಿರ್ದೇಶಕ ಅರ್ಜುನ್ ಕಾಮತ್ ಮಾತನಾಡುತ್ತ, ಇದೊಂದು ಇನ್ವೆಸ್ಟಿಗೇಶನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ಪ್ರತಿಯೊಂದಕ್ಕೂ ಅರ್ಥ ಇರುವುದನ್ನು ಪ್ರತ್ಯರ್ಥ ಎನ್ನಲಾಗುತ್ತದೆ. ಹಾಗಾಗಿ ಇದು ಹಳೆಯ ಟೈಟಲ್ ಆದರೂ ಸಹ, ನಮ್ಮ ಸಿನಿಮಾಗೆ ಇದೇ ಶೀರ್ಷಿಕೆ ಸೂಕ್ತ ಎನಿಸಿತು. ಈಗಿನ ಯುವಜನತೆಗೆ ಯಾವ ಥರದ ಕಥೆ ಬೇಕು, ಅವರೇನು ಇಷ್ಟಪಡುತ್ತಾರೆ ಎಂದು ತಿಳಿದುಕೊಂಡು, ಒಂದು ವರ್ಷ ಟೈಂ ತೆಗೆದುಕೊಂಡು, ನಾನು, ರಾಮ್ ಹಾಗೂ ಸ್ನೇಹಿತರೆಲ್ಲ ಸೇರಿ ಈ ಚಿತ್ರದ ಕಥೆಯನ್ನು ಬರೆದಿದ್ದೇವೆ. ನಮ್ಮ ಕಥೆಯನ್ನು ಸಿನಿಮಾ ರೂಪಕ್ಕೆ ತರಲು ನಿರ್ಮಾಪಕರಾದ ನಾಗೇಶ್ ಎಂ, ಜಯ್ ಆರ್.ಪ್ರಭು ಸಹಕಾರ ನೀಡಿದ್ದಾರೆ. ನಿತ್ಯಾನಂದ ಪೈ ಹಾಗೂ ಪ್ರೇಮಕುಮಾರ್ ವಿ, ಭರತ್‌ಶೆಟ್ಟಿ ಸಹ ನಿರ್ಮಾಪಕರಾಗಿ ಕೈ ಜೋಡಿಸಿದ್ದಾರೆ. ಎರಡು ಶೇಡ್‌ಗಳಲ್ಲಿ ಸಾಗುವ ಈ ಕಥೆಯ ನಾಯಕರಾಗಿ ರಾಮ್, ಅಕ್ಷಯ್ ಕಾರ್ಕಳ ಹಾಗೂ ನಾಯಕಿಯಾಗಿ ಶೃತಿ ಚಂದ್ರಶೇಖರ್ ಅಭಿನಯಿಸಿದ್ದಾರೆ. ಫೆ.28ರಂದು ನಮ್ಮ ಚಿತ್ರ ತೆರೆಗೆ ಬರುತ್ತಿದೆ ಎಂದು ನಿರ್ದೇಶಕ ಅರ್ಜುನ್ ಕಾಮತ್ ಹೇಳಿದರು.

ಬಿಲಿಗೆರೆಹುಂಡಿಯಲ್ಲಿ ಶ್ರೀಗುರುಮಲ್ಲೇಶ್ವರ ಭವನ ಉದ್ಘಾಟನೆ

ದಾಸೋಹ ಕಾಯಕದಿಂದ ಮನುಷ್ಯನಿಗೆ ಮೋಕ್ಷ

ಸುತ್ತೂರು ಮಠದ ಪೀಠಾಧ್ಯಕ್ಷ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ


ಕಾರ್ಯಕ್ರಮವನ್ನು ಸುತ್ತೂರು ಮಠದ ಪೀಠಾಧ್ಯಕ್ಷ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ತಿ.ನರಸೀಪುರ, ಫೆ.20– ದಾಸೋಹ ಕಾಯಕ ಮನುಷ್ಯನನ್ನು ಮೋಕ್ಷದ ಹಾದಿಗೆ ಕೊಂಡೊಯ್ಯಲಿದೆ. ಜಗತ್ತನ್ನು ಸೃಷ್ಟಿಸಿ, ನಿಯಂತ್ರಿಸುತ್ತಿರುವ ಅಗೋಚರ ಶಕ್ತಿಯಂತೆ ದಾಸೋಹದಿಂದಲೂ ಅಲ್ಪ ಶಕ್ತಿ ಪಡೆಯಲು ಸಾಧ್ಯವಿದೆ ಎಂದು ಸುತ್ತೂರು ಮಠದ ಪೀಠಾಧ್ಯಕ್ಷ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಬಿಲಿಗೆರೆಹುಂಡಿಯಲ್ಲಿ ಗುರುವಾರ ಶ್ರೀಗುರುಮಲ್ಲೇಶ್ವರ ದಾಸೋಹ ಮಠದ ಕಟ್ಟಡ ಜೀರ್ಣೋದ್ಧಾರ ಹಾಗೂ ಶ್ರೀಗುರುಮಲ್ಲೇಶ್ವರ ಭವನ ಉದ್ಘಾಟಿಸಿ, ಧಾರ್ಮಿಕ ಸಭೆ ಸಾನಿಧ್ಯ ವಹಿಸಿ ಮಾತನಾಡಿದ ಅವರು, ದಾಸೋಹ ಸೇವೆಯಿಂದ ಭಗವಂತನ ಕೃಪೆಗೆ ಸನಿಹವಾಗಬಹುದು ಎಂದರು.

ಸೃಷ್ಟಿಯಲ್ಲಿ ಹೊಸತನ್ನು ಸೃಷ್ಟಿಸುವ ಶಕ್ತಿ ಯಾರಿಗೂ ಇಲ್ಲ. ಪ್ರಕೃತಿದತ್ತವಾಗಿರುವುದನ್ನು ಮರು ಸ್ಥಾಪಿಸುವುದು ಸಾಧ್ಯವಿದೆ. ಸಾಂಪ್ರದಾಯಿಕವಾಗಿ ಸರಳತೆಯಿಂದ ಧರ್ಮವನ್ನು ಆಚರಣೆ ಮಾಡಬೇಕೆಂದು ಪವಾಡ ಸಿದ್ಧಿಪುರುಷ ಶ್ರೀಗುರು ಮಲ್ಲೇಶ್ವರರು ಅಂದಿನ ಕಾಲದಲ್ಲಿಯೇ ತಿಳಿಸಿಕೊಟ್ಟಿರುವುದು ಜನಜನಿತವಾಗಿದೆ. ಅವರ ಹೆಸರಲ್ಲಿ ದಾಸೋಹ ಕಾಯಕವನ್ನು ಮಠಗಳಲ್ಲಿ ನಡೆಸಿಕೊಂಡು ಬರಲಾಗುತ್ತಿದೆ ಎಂದರು. ದೇವನೂರು ದಾಸೋಹ ಮಠದ ಮಹಾಂತ ಸ್ವಾಮೀಜಿ ಮಾತನಾಡಿ, ಮಠ ಕಟ್ಟಿ, ದಾಸೋಹ ಕಾರ್ಯ ನಿತ್ಯವೂ ನಿರ್ವಹಿಸುವುದು ನಿಜಕ್ಕೂ ಸವಾಲಿನ ಕಾರ್ಯವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಶ್ರೀಗುರು ಮಲ್ಲೇಶ್ವರರ ಹೆಸರಿನಲ್ಲಿ ಮಠ ಕಟ್ಟಿ, ಜೀರ್ಣೋದ್ಧಾರಗೊಳಿಸಿರುವ ಗುರುಸ್ವಾಮಿ ಸ್ವಾಮೀಜಿಯವರ ಶ್ರಮ ನಿಜಕ್ಕೂ ಮೆಚ್ಚುವಂತಹದ್ದು. ಭಕ್ತರನ್ನು ಒಗ್ಗೂಡಿಸಿ ದಾಸೋಹ ಕಾರ್ಯ ಆಯೋಜಿಸುತ್ತಿರುವುದು ಮಠ ಮಾನ್ಯಗಳ ಹಿರಿಮೆ ಹೆಚ್ಚಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದಾಸೋಹದ ರೂವಾರಿ, ಪವಾಡ ಪುರುಷ ಶ್ರೀಗುರುಮಲ್ಲೇಶ್ವರರ ಕುರಿತು ಹಲವಾರ ಮಠದ ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ಉಪನ್ಯಾಸ ನೀಡಿದರು. ಮಡ್ರಳ್ಳಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಷಟ್ಸ್ಥಲ ಧ್ವಜಾರೋಹಣ ನೆರವೇರಿಸಿದರು. ವಾಟಾಳು ಮಠದ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಬಸವರಾಜು, ತಾಲೂಕು ಅಧ್ಯಕ್ಷ ಸಿ.ಎಂ.ಪ್ರಕಾಶ್ ಹಾಗೂ ಯುವ ಘಟಕದ ಅಧ್ಯಕ್ಷ ಕೆ.ಎನ್.ಅಶೋಕ್ ಮಾತನಾಡಿದರು. ಶಿಕ್ಷಕಿ ಜ್ಯೋತಿ ಪರಮೇಶ್ ನಿರೂಪಿಸಿದರು.

ಕುರುಬೂರು ಮಠದ ಮಲ್ಲಿನಾಥ ಶಿವಾಚಾರ್ಯ ಸ್ವಾಮೀಜಿ, ಮಹದೇವ ಸ್ವಾಮೀಜಿ, ಹೊಸೂರುಂಡಿ ಮಠದ ರಾಜಶೇಖರ ಸ್ವಾಮೀಜಿ, ನಿಲಸೋಗೆ ಮಠದ ಮಲ್ಲಪ್ಪ ಸ್ವಾಮೀಜಿ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ, ಕಸಬಾ ಪಿಎಸಿಎಸ್ ಅಧ್ಯಕ್ಷ ಮಲ್ಲಣ್ಣ, ಡೈರಿ ಅಧ್ಯಕ್ಷ ಮಹದೇವಸ್ವಾಮಿ, ಹೋಟೆಲ್ ರಾಜಣ್ಣ, ಗುತ್ತಿಗೆದಾರ ಬಿ.ಮಂಟೇಲಿಂಗಪ್ಪ, ಜಿಲ್ಲಾಧ್ಯಕ್ಷ ಬಸವರಾಜು, ತಾಲೂಕು ಅಧ್ಯಕ್ಷ ಎಸ್ಎಂಆರ್ ಪ್ರಕಾಶ್, ವಕೀಲ ಜ್ಞಾನೇಂದ್ರ ಮೂರ್ತಿ, ಬೆಟ್ಟ ಮಂಜುನಾಥ್, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ನಟರಾಜು, ಪುರಸಭೆ ಸದಸ್ಯ ಎಸ್.ಕೆ. ಕಿರಣ್, ಮಂಜುನಾಥ್, ಎಸ್.ಬಿ.ಸುಗಂಧರಾಜು ಇತರರಿದ್ದರು.

ಬಾಳೆಗೆ ಭಂಗಭೀತಿ; ಮಾಡೆಲ್ಸ್ ಕಾವಲು






ನಂಜನಗೂಡು, ಫೆ.20– ಕಷ್ಟಪಟ್ಟು ಬೆಳೆದ ಬಾಳೆ ಬೆಳೆಗೆ ಸಾರ್ವಜನಿಕರ ಕಣ್ಣು ಬೀಳಬಾರದೆಂದು ರೈತರೊಬ್ಬರು ತಮ್ಮ ಜಮೀನಿನ ಸುತ್ತಲೂ ದೃಷ್ಟಿ ಬೊಂಬೆ ಬದಲು ಮಾಡೆಲ್‌ಗಳ ಅರೆಬೆತ್ತಲೆ ಫೋಟೋ ಹಾಕಿದ್ದಾರೆ.

ತಾಲೂಕಿನ ಕಕ್ಕರಹಟ್ಟಿ ಗ್ರಾಮದ ಸೋಮೇಶ್ ದೃಷ್ಟಿ ಗೊಂಬೆ ಬದಲು ಮಾಡೆಲ್‌ಗಳ ಭಾವಚಿತ್ರ ಅಳವಡಿಸಿರುವ ರೈತ. ನಂಜನಗೂಡಿನಿಂದ ಮಡಹಳ್ಳಿ ಹಾಗೂ ತಗಡೂರು ಮಾರ್ಗ ತೆರಳುವ ಮಾರ್ಗಮಧ್ಯೆ ಕಕ್ಕರಹಟ್ಟಿ ಗ್ರಾಮದ ಬಳಿ ಮುಖ್ಯ ರಸ್ತೆಯಲ್ಲಿ ಸೋಮೇಶ್ ಅವರ ಜಮೀನಿದ್ದು, ತನ್ನ 4 ಎಕರೆ ಜಮೀನಿನಲ್ಲಿ ಬಾಳೆ ಬೆಳೆದಿದ್ದಾರೆ. ಬಾಳೆ ಬೆಳೆ ಫಲವತ್ತಾಗಿದ್ದು, ನೋಡುಗರನ್ನು ತನ್ನತ್ತ ಆಕರ್ಷಿಸುತ್ತಿವೆ. ತನ್ನ ಬೆಳೆಗಳಿಗೆ ಸಾರ್ವಜನಿಕರ ದೃಷ್ಟಿ ಬೀಳಬಾರದು ಎಂಬ ಉದ್ದೇಶದಿಂದ ಜಮೀನಿನ ಸುತ್ತಲೂ ಹತ್ತಾರು ಕಡೆ ಮಾಡೆಲ್‌ಗಳ ಅರೆಬೆತ್ತಲೆ ಭಾವಚಿತ್ರ ಅಳವಡಿಸಿದ್ದಾರೆ. ರಸ್ತೆ ಮಾರ್ಗದಲ್ಲಿ ಚಲಿಸುವ ಸಾರ್ವಜನಿಕರು ಬಾಳೆಗಿಡದತ್ತ ಕಣ್ಣು ಹಾಯಿಸದೆ ಸುತ್ತಲೂ ಅಳವಡಿಸಿರುವ ಮಾಡೆಲ್‌ಗಳ ಭಾವಚಿತ್ರ ಗಳನ್ನು ಕಣ್ತುಂಬಿಕೊಂಡು ಸಾಗುತ್ತಿದ್ದಾರೆ. ರೈತನ ಈ ವಿನೂತನ ಪ್ರಯೋಗ ಕೆಲ ಪಡ್ಡೆ ಹುಡುಗರ ನಿದ್ದೆಗೆಡಿಸಿದ್ದರೇ, ಇನ್ನೂ ಕೆಲವರಿಗೆ ಇರಿಸು ಮುರಿಸು ಉಂಟಾಗಿ ಗ್ರಾಮಸ್ಥರನ್ನು ಕೆರಳಿಸಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.20–ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಫೆ.21 ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಜಯಪುರ ಗ್ರಾಪಂ, ಮಾರ್ಬಳ್ಳಿ ಗ್ರಾಪಂ, ಗೋಪಾಲಪುರ ಗ್ರಾಪಂ, ಉದ್ಬೂರು ಗ್ರಾಪಂ, ಧನಗಳ್ಳಿ ಗ್ರಾಪಂ, ಹಾರೋಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.



ಬಿ.ಮಟಕೆರೆ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ಬಿ.ಮಟಕೆರೆ ಪಿಎಸಿಎಸ್ ಅಧ್ಯಕ್ಷರಾಗಿ ಗುಣಪಾಲ್, ಉಪಾಧ್ಯಕ್ಷರಾಗಿ ಕೆ.ಎ.ರಾಜಪ್ಪ ಆಯ್ಕೆಯಾದರು.

ಸರಗೂರು, ಫೆ.20– ತಾಲೂಕಿನ ಬಿ.ಮಟಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಗುಣಪಾಲ್, ಉಪಾಧ್ಯಕ್ಷರಾಗಿ ಕೆ.ಎ.ರಾಜಪ್ಪ, ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗುಣಪಾಲ್, ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಎ.ರಾಜಪ್ಪ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರೇಣುಕಾ ಘೋಷಿಸಿದರು. ಈ ವೇಳೆ ನಿರ್ದೇಶಕರಾದ ಕೆ.ಪಿ.ನಿಜಲಿಂಗಪ್ಪ, ಬಿ.ಕೂಸಪ್ಪ, ಶಿವನಂಜಪ್ಪ, ಹೆಚ್.ವಿ.ಶ್ರೀನಿವಾಸ್, ರಂಜನಿ, ಜಯಮ್ಮ, ಸಿ.ಜವರಯ್ಯ, ಕಾಳ, ಎಂ.ಎ.ಸಂತೋಷ್, ಭಾಗ್ಯ, ಸಿಇಓ ಪಿ.ಜಂಬುಕುಮಾರ್, ಬಿ.ಮಟಕೆರೆ ಗ್ರಾಪಂ ವ್ಯಾಪ್ತಿಯ ಎಲ್ಲಾ ಸಮಾಜದ ಯಜಮಾನರು, ಮುಖಂಡರು ಭಾಗಿಯಾಗಿದ್ದರು.

ನಿಗಮ ಮಂಡಳಿ ನಿರ್ದೇಶಕ ಸ್ಥಾನ ನೀಡಲು ಮನವಿ

ತಿ.ನರಸೀಪುರ, ಫೆ.20– ನಿಗಮ ಮಂಡಳಿ ನಿರ್ದೇಶಕರ ಹುದ್ದೆ ನೀಡುವಂತೆ ಮೈಸೂರು ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಎಂ.ಮಹೇಶ್ ಮನವಿ ಮಾಡಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು ಕಳೆದ 20 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷಕ್ಕಾಗಿ ದುಡಿದಿದ್ದೇನೆ. ಅಲ್ಲದೇ ತಳಮಟ್ಟದಿಂದ ಪಕ್ಷ ಸಂಘಟಿಸಿ ಈ ಭಾಗದಲ್ಲಿ ಪಕ್ಷ ಕಟ್ಟಲು ಶ್ರಮಿಸಿದ್ದೇನೆ. ಹೀಗಾಗಿ ನನ್ನ ಸೇವೆ ಪರಿಗಣಿಸಿ ನಿಗಮ ಮಂಡಳಿಯ ಯಾವುದಾದರೊಂದು ನಿರ್ದೇಶಕ ಸ್ಥಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರಿಗೆ ಮಹೇಶ್ ಮನವಿ ಸಲ್ಲಿಸಿದ್ದಾರೆ.

ಗ್ಯಾಸ್ ಪೈಪ್‌ಗಳಿಗೆ ಬೆಂಕಿ: ಭಸ್ಮ


ಪ್ಲಾಸ್ಟಿಕ್ ಪೈಪ್‌ಗಳಿಗೆ ಬೆಂಕಿ ತಗುಲಿರುವುದು.

ನಂಜನಗೂಡು, ಫೆ.20– ನಗರದ ಶ್ರೀಕಂಠಪುರಿ ಬಡಾವಣೆಯ 19ನೇ ಕ್ರಾಸ್ ಬಳಿ ಗುರುವಾರ ಮನೆಗಳಿಗೆ ಗ್ಯಾಸ್ ಪೈಪ್‌ಲೈನ್ ಅಳವಡಿಸಲು ಸಂಗ್ರಹಿಸಲಾಗಿದ್ದ ಪ್ಲಾಸ್ಟಿಕ್ ಪೈಪ್‌ಗಳಿಗೆ ಬೆಂಕಿ ತಗುಲಿ ಸಂಪೂರ್ಣ ಭಸ್ಮವಾಗಿದೆ.

ಕಸದ ರಾಶಿ ಸುಡಲು ಹಚ್ಚಿದ ಬೆಂಕಿ ಪೈಪ್‌ಗಳಿಗೆ ತಗುಲಿ ಬೆಂಕಿ ಹೊತ್ತಿದೆ. ಬೆಂಕಿಯಿಂದ ಸಮೀಪದ ಮನೆಯ ಸಿಸಿ ಟಿವಿ ಹಾಗೂ ವೈರ್‌ಗಳು ಸುಟ್ಟು ಹೋಗಿದ್ದು, 3 ಲಕ್ಷ ರೂಪಾಯಿ ನಷ್ಟವಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಥಾಮಸ್ ಮತ್ತು ತಂಡ ಬೆಂಕಿ ನಂದಿಸಿದರು. ಪೈಪ್‌ಲೈನ್ ಅಳವಡಿಕೆ ಗುತ್ತಿಗೆ ಪಡೆದಿದ್ದ ಕಂಪನಿ ಖಾಸಗಿ ವ್ಯಕ್ತಿಯೊಬ್ಬರಿಗೆ ಪೈಪ್‌ಲೈನ್ ಅಳವಡಿಕೆ ತುಂಡು ಗುತ್ತಿಗೆ ನೀಡಿದ್ದರು ಎನ್ನಲಾಗಿದ್ದು, ಸಂಬಂಧ ದೂರು ದಾಖಲಾಗಿಲ್ಲ.

ಇಂದಿನಿಂದ ಆಂಜನೇಯಸ್ವಾಮಿ ಪಲ್ಲಕ್ಕಿ ಉತ್ಸವ, ಹಜರತ್ ಜಮಾಲ್ ಬಿಬಿ ಗಂಧೋತ್ಸವ ಉರುಸ್

ಹುಣಸೂರು, ಫೆ.20– ತಾಲೂಕಿನ ರತ್ನಪುರಿ ಗ್ರಾಮದಲ್ಲಿ ಹಿಂದೂ–ಮುಸ್ಲಿಂ ಭಾವೈಕ್ಯತೆ ಸಾರುವ ಶ್ರೀಆಂಜನೇಯ ಸ್ವಾಮಿಯವರ 61ನೇ ಮಹಾಭಿಷೇಕ ಮತ್ತು ಪಲ್ಲಕ್ಕಿ ಉತ್ಸವ ಹಾಗೂ ಹಜರತ್ ಜಮಾಲ್ ಬಿಬಿ ಮಾ ಸಹೇಬಾ ಗಂಧೋತ್ಸವ ಉರುಸ್ ಜಾತ್ರಾ ಮಹೋತ್ಸವ ಫೆ.21ರಿಂದ 24 ರವರೆಗೆ ನಡೆಯಲಿದೆ ಎಂದು ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷ ಪ್ರಭು ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರತ್ನಪುರಿಯತ್ತ ಇಡೀ ರಾಜ್ಯವೇ ತಿರುಗಿ ನೋಡುವಂತೆ ಹಿಂದೂ–ಮುಸ್ಲಿಂ ಸಮುದಾಯಗಳು ಸಾಮರಸ್ಯ ಮತ್ತು ಸೌಹಾರ್ದತೆಯಿಂದ ಜಾತ್ರೆ ಮತ್ತು ಉರುಸ್ ಅನ್ನು ಅದ್ಧೂರಿಯಾಗಿ ಆಚರಿಸುತ್ತೇವೆ ಎಂದರು.

ಜಾತ್ರೆ ಅಂಗವಾಗಿ ವಿವಿಧ ಕ್ರೀಡೆಗಳನ್ನು ನಡೆಸಿಕೊಂಡು ಬರುತ್ತಿದ್ದು, ಈ ಬಾರಿ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ ಹಾಗೂ ಹಗ್ಗ–ಜಗ್ಗಾಟ ಪಂದ್ಯಾವಳಿಯನ್ನು, ಪುರುಷ, ಮಹಿಳೆಯರಿಗೆ ಆಯೋಜಿಸಲಾಗಿದೆ. ಅಲ್ಲದೇ ದನಗಳ ಜಾತ್ರೆ ಸೇರಿದಂತೆ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ ಎಂದರು.

ಕುಸ್ತಿ ಪಂದ್ಯಾವಳಿಯಲ್ಲಿ ಮುಂಬೈ, ದೆಹಲಿ, ಹರಿಯಾಣ ಸೇರಿದಂತೆ ಹಲವು ರಾಜ್ಯಗಳಿಂದ ಕುಸ್ತಿ ಪಟುಗಳು ಆಗಮಿಸಲಿದ್ದು, ಹಗ್ಗ–ಜಗ್ಗಾಟ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧೆಡೆಗಳಿಂದ ಪುರುಷ ಹಾಗೂ ಮಹಿಳಾ ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಅಲ್ಲದೇ ವಿವಿಧೆಡೆಗಳಿಂದ ಜಾನಪದ ಕಲಾ ತಂಡಗಳು ಆಗಮಿಸಲಿದ್ದು, ಉಡುಪಿಯ ಅಶೋಕ್ ರಾಜ್ ಅವರ ಹುಲಿವೇಷ ಕುಣಿತದ ತಂಡ ಮೆರವಣಿಗೆಗೆ ಮೆರಗು



ತರಲಿದೆ ಎಂದರು. ಹಳ್ಳದಕೊಪ್ಪಲ್ ಸುಧಾಕರ್ ಅವರಿಂದ ಮಿಮಿಕ್ರಿ ಮತ್ತು ರಸಮಂಜರಿ ಕಾರ್ಯಕ್ರಮ ಹಾಗೂ ಬಿಗ್‌ಬಾಸ್ 2ನೇ ರನ್ನರ್ ಅಪ್ ರಜತ್ ಭಾಗವಹಿಸಲಿದ್ದಾರೆ.

ಫೆ.21ರಂದು ಬೆಳಗ್ಗೆ 6 ಗಂಟೆಗೆ ಶ್ರೀ ಆಂಜನೇಯಸ್ವಾಮಿಗೆ ಹೋಮ ಹವನ ಮತ್ತು ಮಹಾಭಿಷೇಕ, ಮಧ್ಯಾಹ್ನ 3 ಗಂಟೆಗೆ ಪುರುಷರ ರಾಜ್ಯ ಮಟ್ಟದ ಹಗ್ಗ–ಜಗ್ಗಾಟ ಪಂದ್ಯಾವಳಿ ನಡೆಯಲಿದೆ ಕಾರ್ಯಕ್ರಮವನ್ನು ಸಂಸದ ಯದುವೀರ್ ಉದ್ಘಾಟಿಸಲಿದ್ದು, ಶಾಸಕ ಜಿ.ಡಿ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಆಗಮಿಸಲಿದ್ದಾರೆ ಎಂದರು.

ಫೆ.22ರಂದು ಬೆಳಗ್ಗೆ 7 ಗಂಟೆಗೆ ಧರ್ಮಾಪುರ ಗ್ರಾಮಸ್ಥರಿಂದ ಕೊಂಡೋತ್ಸವ ಹಾಗೂ ಆಂಜನೇಯಸ್ವಾಮಿಗೆ ಮಹಾ ಮಂಗಳಾರತಿ, ಮಧ್ಯಾಹ್ನ 12ರಿಂದ 3ರವರೆಗೆ ಅನ್ನಸಂತರ್ಪಣೆ, ಬಳಿಕ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಗೆ ಚಾಲನೆ ದೊರೆಯಲಿದೆ. ಸಂಜೆ 6ಕ್ಕೆ ಶ್ರೀಆಂಜನೇಯ ಸ್ವಾಮಿ ಅವರ ಪಲ್ಲಕ್ಕಿ ಉತ್ಸವ ನಡೆಯಲಿದ್ದು, ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಲಿವೆ ಎಂದರು.

ಫೆ.23ರಂದು ರಾತ್ರಿ 8 ಗಂಟೆಗೆ ಗ್ರಾಮ ದೇವತೆ ಜಮಾಲಮ್ಮನವರ ಉರುಸ್ ಮತ್ತು ಗಂಧೋತ್ಸವ ನಡೆಯಲಿದೆ. ಈ ವೇಳೆ ಸುಗಮ ಸಂಗೀತ ನಡೆಯಲಿದೆ. ಅಲ್ಲದೇ ಹಗ್ಗ–ಜಗ್ಗಾಟ ಪಂದ್ಯಾವಳಿ ನಡೆಯಲಿದೆ.

ಫೆ.24ರಂದು ಬೆಳಗ್ಗೆ 11 ಗಂಟೆಗೆ ದನಗಳ ಜಾತ್ರೆಯಲ್ಲಿ ಉತ್ತಮ ರಾಸುಗಳಿಗೆ ಎಪಿಎಂಸಿ ವತಿಯಿಂದ ಪ್ರಥಮ 15 ಸಾವಿರ, ಬಹುಮಾನ, ದ್ವಿತೀಯ 10 ಸಾವಿರ ಮತ್ತು ತೃತೀಯ 7 ಸಾವಿರ ಸೇರಿದಂತೆ 9 ರಾಸುಗಳಿಗೆ ಸಮಾಧಾನಕರ ಬಹುಮಾನ ನೀಡಲಾಗುವುದು. ಅಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಆಸ್ಪತ್ರೆ ಕಾವಲ್ ಗ್ರಾಪಂ ಅಧ್ಯಕ್ಷ ನಾಗೇಶ್ ರಾವ್ ಮೇಂಗಾಣೆ ಮತ್ತು ಉದ್ದೂರ್ ಕಾವಲ್ ಗ್ರಾಪಂ ಅಧ್ಯಕ್ಷೆ ಪದ್ಮಮ್ಮ ಬಹುಮಾನ ವಿತರಣೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ಹಾಲು ಒಕ್ಕೂಟದ ಶಿವಾಮಿ, ನಗರಸಭಾ ಸದಸ್ಯರಾದ ಗಣೇಶ್ ಕುಮಾರಸ್ವಾಮಿ, ಎಪಿಎಂಸಿ ಕಾರ್ಯದರ್ಶಿ ಹಂಪಣ್ಣ ಭಾಗವಹಿಸಲಿದ್ದಾರೆ ಎಂದರು.

ಚಿಕ್ಕಕೆರೆಯೂರಲ್ಲಿ 546ನೇ ಶುದ್ಧಗಂಗಾ ಘಟಕ ಉದ್ಘಾಟನೆ


546ನೇ ಶುದ್ಧಗಂಗಾ ಘಟಕವನ್ನು ಬಿ.ಜಯರಾಮ ನೆಲ್ಲಿತ್ತಾಯ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಫೆ.20– ಮನುಷ್ಯನ ಜೀವಿತಾವಧಿಯಲ್ಲಿ ನೀರು ಬಹಳ ಪಾತ್ರ ವಹಿಸಿದ್ದು, ಕಲುಷಿತ ಮತ್ತು ಗಡಸು ನೀರಿನಿಂದ ಅನೇಕ ರೋಗಗಳಿಗೆ ತುತ್ತಾಗುತ್ತಿದ್ದಾರೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೈಸೂರು ವಿಭಾಗದ ಪ್ರಾದೇಶಿಕ ನಿರ್ದೇಶಕ ಬಿ.ಜಯರಾಮ ನೆಲ್ಲಿತ್ತಾಯ ತಿಳಿಸಿದರು.

ತಾಲೂಕಿನ ಚಿಕ್ಕಕೆರೆಯೂರು ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಹೆಚ್.ಡಿ.ಕೋಟೆ ಮತ್ತು ಚಿಕ್ಕಕೆರೆಯೂರು ಗ್ರಾಪಂ ಸಹಭಾಗಿತ್ವದಲ್ಲಿ 546ನೇ ಶುದ್ಧಗಂಗಾ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಮನುಷ್ಯ ಅಶುದ್ಧ ನೀರಿನಿಂದ ಅನೇಕ ರೋಗಗಳಿಗೆ ತುತ್ತಾಗುತ್ತಿದ್ದು, ಹೀಗಾಗಿ ಪ್ರತಿಯೊಬ್ಬರೂ ಕುಡಿಯುವ ನೀರು ಶುದ್ಧತೆಯಿಂದ ಕೂಡಿರಬೇಕು ಎಂದರು.

ಲಕ್ಷಾಂತರ ಬಡವರಿಗೆ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಬ್ಯಾಂಕ್‌ನಿಂದ ನೇರವಾಗಿ ಸ್ವಸಹಾಯ ಸಂಘಗಳ ಮೂಲಕ ವಾರ್ಷಿಕ ಶೇ.14 ರಷ್ಟು ಬಡ್ಡಿ ದರದಲ್ಲಿ ಯಾವುದೇ ದಾಖಲೆ, ಆಸ್ತಿ, ಅಡಮಾನಗಳಿಲ್ಲದೆ ಲೋನ್ ಸಿಗುವಂತಾಯಿತು ಎಂದರು.

ಬ್ಯಾಂಕ್ ಬಡ್ಡಿ ದರದಲ್ಲಿ ಯೋಜನೆಗೆ ಬ್ಯಾಂಕ್ ನೀಡುವ ಸೇವಾ ಶುಲ್ಕ ಶೇ.5 ಒಳಗೊಂಡಿರುತ್ತದೆ. ಸಂಸ್ಥೆಗೆ ಬರುವ ಆದಾಯವನ್ನು ಬಡವರ ಮತ್ತು ಸಮುದಾಯ ಅಭಿವೃದ್ಧಿಗಾಗಿ ಹತ್ತು ಹಲವು ಕಾರ್ಯಕ್ರಮಗಳಿಗೆ ವಿನಿಯೋಗ ಮಾಡಲಾಗುತ್ತಿದೆ. ಅದೇ ರೀತಿ ನಿಮ್ಮ ಚಿಕ್ಕಕೆರೆಯೂರು ಗ್ರಾಮದಲ್ಲಿ ಶುದ್ಧಗಂಗಾ ಘಟಕ ನಿರ್ಮಿಸಲಾಗಿದೆ. ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು. ಅಕ್ರಮ ಸಕ್ರಮ ಸಮಿತಿ ಸದಸ್ಯ ಕೆಂಡಗಣ್ಣೇಗೌಡ ಮಾತನಾಡಿದರು.

ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೈಸೂರು ಜಿಲ್ಲಾ ಹಿರಿಯ ನಿರ್ದೇಶಕ ವಿ.ವಿಜಯ ಕುಮಾರ್ ನಾಗನಾಳ, ಯೋಜನಾಧಿಕಾರಿ ವಿ. ಭಾಸ್ಕರ್, ಕೃಷಿ ಮೇಲ್ವಿಚಾರಕ ಬಿ.ಜೆ. ರಾಜು, ವಲಯ ಮೇಲ್ವಿಚಾರಕಿ ಪವಿತ್ರ, ಶುದ್ಧಗಂಗಾ ಘಟಕದ ಮೇಲ್ವಿಚಾರಕ ಸುನಿಲ್, ಪಿಡಿಓ ಪ್ರಕಾಶ್, ಗ್ರಾಪಂ ಅಧ್ಯಕ್ಷ ಶಂಕರ್, ಸದಸ್ಯರಾದ ಮಹೇಶ್, ಚಲುವರಾಜು, ರಮೇಶ್, ಸಣ್ಣಸ್ವಾಮಿ ನಾಯಕ, ಬಾಬು ಜಗ ಜೀವನ್ ರಾಂ ಸಮಿತಿ ಅಧ್ಯಕ್ಷ ನಾಗರಾಜು, ಗ್ರಾಪಂ ಮಾಜಿ ಅಧ್ಯಕ್ಷ ರವಿ, ಸೇವಾ ಪ್ರತಿನಿಧಿ ರೇಖಾ, ಪವಿತ್ರ, ಶೈಲೇಂದ್ರ, ಮಹೇಶ್ ಉಪಸ್ಥಿತರಿದ್ದರು.

ಹೃದಯ, ಕ್ಯಾನ್ಸರ್ ಕಾಯಿಲೆ ಪತ್ತೆ ಹಚ್ಚುವ ಕಾರ್ಯಕ್ಕೆ ಚಾಲನೆ



ಕಾರ್ಯಕ್ರಮಕ್ಕೆ ಡಾ.ಅಭಿಲಾಷ್ ಚಾಲನೆ ನೀಡಿದರು.

ತಿ.ನರಸೀಪುರ ಫೆ.20– ವೋಲ್ವೊ ವೆಲ್‌ನೆಸ್ ಆನ್ ವ್ಹೀಲ್ ಕಮ್ಯೂನಿಟಿ ಕ್ಲಿನಿಕ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ನಾರಾಯಣ ಆಸ್ಪತ್ರೆ ವತಿಯಿಂದ ಉಚಿತ ಹೃದಯ ಸಂಬಂಧಿ ಹಾಗೂ ಕ್ಯಾನ್ಸರ್ ಕಾಯಿಲೆ ಪತ್ತೆ ಹಚ್ಚುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕ್ಯಾಂಪ್ ವ್ಯವಸ್ಥಾಪಕ ದೇವರಾಜು ನಾಯಕ್.ಜೆ.ಎಂ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಹೃದಯ ಸಂಬಂಧಿ ಹಾಗೂ ಕ್ಯಾನ್ಸರ್ ಕಾಯಿಲೆ ಪತ್ತೆ ಹಚ್ಚುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈಗಾಗಲೇ 8 ಜಿಲ್ಲೆಗಳಲ್ಲಿ ಉಚಿತ ಕಾರ್ಯಕ್ರಮ ಹಮ್ಮಿಕೊಂಡಿದ್ದು, ತಾಲೂಕು ಮಟ್ಟದಲ್ಲಿ ಇದೇ ಮೊದಲ ಬಾರಿಗೆ ತಿ.ನರಸೀಪುರದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಸಲಾಗುತ್ತಿದೆ ಎಂದರು. ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಅಭಿಲಾಷ್ ಮಾತನಾಡಿ, ಸಾರ್ವಜನಿಕರು ಇಂತಹ ಉಚಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಸದುಪಯೋಗ ಪಡೆದುಕೊಳ್ಳುವಂತೆ ಸಲಹೆ ನೀಡಿದರು. ಡಾ.ನಾಗೇಶ್ ರಾವ್, ಡಾ.ವೆಂಕಟೇಶ್, ಡಾ.ರಮ್ಯ, ಡಾ.ನಂದಿನಿ, ಇತರರಿದ್ದರು.

ಕೆ.ಆರ್.ನಗರ ಪಿಎಲ್‌ಡಿ ಬ್ಯಾಂಕ್ ಚುನಾವಣೆ

ಅಧ್ಯಕ್ಷೆ ಪುಷ್ಪಲತಾ, ಉಪಾಧ್ಯಕ್ಷರಾಗಿ ಪ್ರದೀಪ್ ಕೃಷ್ಣೇಗೌಡ ಆಯ್ಕೆ


ಅಧ್ಯಕ್ಷೆ ಪುಷ್ಪಲತಾ, ಉಪಾಧ್ಯಕ್ಷ ಪ್ರದೀಪ್ ಕೃಷ್ಣೇಗೌಡರನ್ನು ನಿರ್ದೇಶಕರು ಅಭಿನಂದಿಸಿದರು.

ಕೆ.ಆರ್.ನಗರ, ಫೆ.20– ತಾಲೂಕು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷೆಯಾಗಿ ಕಾಂಗ್ರೆಸ್ ಬೆಂಬಲಿತ ಸದಸ್ಯೆ ಪುಷ್ಪಲತಾ ಮತ್ತು ಉಪಾಧ್ಯಕ್ಷರಾಗಿ ಪ್ರದೀಪ್ ಕೃಷ್ಣೇಗೌಡ ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣದ ಸಿ.ಎಂ.ರಸ್ತೆಯಲ್ಲಿರುವ ಬ್ಯಾಂಕ್‌ನ ಆಡಳಿತ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಹುಣಸೂರು ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕಿ ಅನುಸೂಯ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ಚುನಾವಣಾ ಸಭೆಯಲ್ಲಿ ನಿರ್ದೇಶಕರಾದ ಎಸ್.ಎಂ.ಸೋಮಣ್ಣ, ಮಂಗಳ ಪ್ರಸಾದ್, ಎಂ.ಎಸ್.ಹರಿಚಿದಂಬರ, ಡಿ.ಆರ್.ರಾಹುಲ್, ಬಿ.ಎಸ್.ಚಂದ್ರಹಾಸ, ಕುಳ್ಳಬೋರೇಗೌಡ, ಕೆ.ಟಿ.ಚಂದ್ರೇಗೌಡ, ಕಲಾವತಿ, ಇಂದ್ರೇಶ್, ಮಹೇಶ್, ಗಾಯತ್ರಮ್ಮ, ದೊಡ್ಡಯ್ಯ, ರಮೇಶ್‌ನಾಯಕ, ಕಾರ್ಯದರ್ಶಿ ನವೀನ್‌ಕುಮಾರ್ ಇದ್ದರು.

ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ ಪ್ರಕಟಗೊಳ್ಳುತ್ತಿದ್ದಂತೆ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು, ಪಟಾಕಿ ಸಿಡಿಸಿ ಸಿಹಿ ವಿತರಿಸಿ ಸಂಭ್ರಮಾಚರಣೆ ನಡೆಸಿದರಲ್ಲದೆ ಶಾಸಕ ಡಿ.ರವಿಶಂಕರ್ ಮತ್ತು ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಅವರಿಗೆ ಜೈಕಾರ ಕೂಗಿ ವಿಜಯೋತ್ಸವ ಆಚರಿಸಿದರು.

ನೂತನ ಅಧ್ಯಕ್ಷೆ ಮತ್ತು ಉಪಾಧ್ಯಕ್ಷರನ್ನು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ಉದಯಶಂಕರ್, ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ. ರಮೇಶ್, ವಕ್ತಾರ ಸೈಯದ್ ಜಾಬೀರ್, ಕೆಪಿಸಿಸಿ ಸದಸ್ಯ ಸಿ.ಪಿ.ರಮೇಶ್, ಅರ್ಜುನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ದಿಲೀಪ್ ಗೌಡ ಮತ್ತಿತರರು ಅಭಿನಂದಿಸಿದರು.

ಅನಧಿಕೃತ ತಂಬಾಕು ಬೆಳೆಗಾರರಿಗೆ

ಶೀಘ್ರ ಲೈಸೆನ್ಸ್, ಅಧಿಕೃತ ಕಾರ್ಡ್ ನೀಡಲು ಕೇಂದ್ರ ಒಪ್ಪಿಗೆ | ಸಂಸದ ಯದುವೀರ್


ಕಟ್ಟೆಮಳಲವಾಡಿ ತಂಬಾಕು ಮಾರುಕಟ್ಟೆಗೆ ಸಂಸದ ಯದುವೀರ್ ಭೇಟಿ ನೀಡಿ ಪರಿಶೀಲಿಸಿದರು.

ಹುಣಸೂರು, ಫೆ.20– ಅನಧಿಕೃತ ತಂಬಾಕು ಬೆಳೆಗಾರರಿಗೆ ಶೀಘ್ರ ಲೈಸೆನ್ಸ್ ಮತ್ತು ಅಧಿಕೃತ ಕಾರ್ಡ್ ನೀಡಲು ಕೇಂದ್ರ ಸರ್ಕಾರ ಒಪ್ಪಿದ್ದು, ನಿಮ್ಮ ಬಹು ದಿನಗಳ ಬೇಡಕೆ ಈಡೇರಿದೆ. ಇದಕ್ಕಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆ ಸಚಿವ ಪಿಯೂಷ್ ಗೋಯಲ್ ಅವರಿಗೆ ನಿಮ್ಮ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ಸಂಸದ ಯದುವೀರ್ ತಿಳಿಸಿದರು.

ತಾಲೂಕಿನ ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಗೆ ಭೇಟಿ ನೀಡಿ ಮಾತನಾಡಿದ ಅವರು, ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ನಿಮ್ಮ ಬೇಡಿಕೆ ಇಂದು ಈಡೇರಿದೆ. ನಿಮಗೆ ಅಧಿಕೃತ ಕಾರ್ಡ್‌ಗಳನ್ನು ನೀಡಲು ಕೇಂದ್ರ ಸಚಿವರು ಆದೇಶಿಸಿದ್ದಾರೆ. ಮುಂದಿನ ವರ್ಷದಿಂದ ನೀವು ಅಧಿಕೃತ ತಂಬಾಕು ಬೆಳೆಗಾರರಾಗುತ್ತೀರಿ. ಈ ಬಾರಿ ಬೆಳೆದಿರುವ ತಂಬಾಕನ್ನು ಯಾವುದೇ ಅಡ್ಡಿ ಇಲ್ಲದೇ ಮಾರಾಟ ಮಾಡಬಹುದು ಎಂದರು.

ತಂಬಾಕು ಬೆಳೆಗಾರರ ಹಿತ ದೃಷ್ಟಿಯಿಂದ ಬಹಳಷ್ಟು ಕೆಲಸಗಳು ಆಗಬೇಕಿದೆ. ರೈತರು ತಂಬಾಕು ಬೆಳೆಗೆ ಒಂದಕ್ಕೆ ಅವಲಂಬಿತರಾಗದೇ ಬೇರೆ ಬೇರೆ ಆದಾಯಗಳನ್ನು ಕಂಡುಕೊಳ್ಳಲು ಒಂದು ಸಂಶೋಧನೆ ಆಗಬೇಕಿದೆ. ಅಲ್ಲದೇ ತಂಬಾಕು ಬೆಳೆ ಹದಕ್ಕಾಗಿ ಉಪಯೋಗಿಸುವ ಸೌದೆಗೆ ಬದಲಾಗಿ ಪರ್ಯಾಯ ವ್ಯವಸ್ಥೆಯೂ ಆಗಬೇಕು. ಈ ನಿಟ್ಟಿನಲ್ಲಿ ಅಧ್ಯಯನ ಸಹ ಆಗಬೇಕು. ಈ ಬಗ್ಗೆ ಉನ್ನತ ಮಟ್ಟದಲ್ಲಿ ಚರ್ಚೆಯಾಗಿ ಒಂದು ಪೈಲೈಟ್ ಪ್ರಾಜೆಕ್ಟ್ ಯೋಜನೆ ರೂಪಿಸಲು ತೀರ್ಮಾನಿಸಲಾಗಿದೆ ಎಂದರು.

ತಂಬಾಕು ವಾಣಿಜ್ಯ ಬೆಳೆ ಎಂದು ಕೇಂದ್ರ ಸರ್ಕಾರದ ಫಸಲ್ ಭೀಮಾ ಯೋಜನೆಗೆ ಸೇರಿರಲಿಲ್ಲ. ಈ ಬಗ್ಗೆ ಅಧ್ಯಯನ ಸಮಿತಿ ರಚನೆ ಮಾಡಿದ್ದು, ಸಮಿತಿ ತೀರ್ಮಾನಿಸುತ್ತದೆ ಎಂದು ಭಾವಿಸಿದ್ದೇವೆ. ಫಸಲ್ ಭೀಮಾ ಯೋಜನೆಯಲ್ಲಿ ನಿಮ್ಮನ್ನು ಸೇರಿಸುವ ಭರವಸೆ ಇದೆ ಎಂದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ತಂಬಾಕು ಆರೋಗ್ಯಕ್ಕೆ ಹಾನಿಕರ ಬೆಳೆ ಎಂದು ಅದನ್ನು ಹಂತ ಹಂತವಾಗಿ ಕಡಿಮೆಗೊಳಿಸಬೇಕು ಎಂದು ಚರ್ಚೆಯಾಗುತ್ತಿರುವ ಸಂದರ್ಭ ನೀವು ಹೆಚ್ಚು ಉತ್ಪಾದನೆಗೆ ಅವಕಾಶ ನೀಡಿ ಎಂದರೆ ಕಷ್ಟಸಾಧ್ಯ. ಆದರೆ ಮೇಲ್ಮಟ್ಟದಲ್ಲಿ ಚರ್ಚಿಸಿ ರೈತರಿಗೆ ಒಳ್ಳೆಯದಾಗುವ ರೀತಿ ಕ್ರಮ ಕೈಗೊಳ್ಳಲು ಪ್ರಯತ್ನಿಸುತ್ತೇನೆ ಎಂದರು.

ರೈತ ಮುಖಂಡರು ಮಾತನಾಡಿ, ಈ ಹಿಂದೆ ಸಿ.ಹೆಚ್. ವಿಜಯಶಂಕರ್ ಹಾಗೂ ಎ.ಹೆಚ್.ವಿಶ್ವನಾಥ್ ಅವರು ನಮಗೆ ಪಾಸ್ ಹಾಗೂ ಕಾರ್ಡ್‌ಗಳನ್ನು ಕೊಡಿಸಿದರು. ಆದರೆ ಮಾಜಿ ಸಂಸದ ಪ್ರತಾಪ್ ಸಿಂಹ ತಂಬಾಕು ರೈತರಿಗೆ ಪಾಸ್ ಕೊಡಿಸುತ್ತೇನೆ ಎಂದು 2 ಬಾರಿ ಹೇಳಿ ಏನೂ ಮಾಡದೇ ಹೋದರು. ನೀವಾದರೂ ನಮಗೆ ಒಳಿತು ಮಾಡಿ. ಅಲ್ಲದೇ ರೈತರಿಗೆ ರಸಗೊಬ್ಬರ ನೀಡಲು ಈ ತಿಂಗಳ ಕೊನೆವರೆಗೂ ಅವಕಾಶ ಕೊಡಿಸಿ ಎಂದರು.

ತಾಲೂಕಿನಲ್ಲಿ 57 ಸಾವಿರ ಅಧಿಕೃತ ತಂಬಾಕು ಬೆಳೆಗಾರರಿದ್ದು, ಇವರಿಂದ ಇದುವರೆಗೂ 57.71 ಮಿಲಿಯನ್ ಮೆಟ್ರಿಕ್ ಟನ್ ತಂಬಾಕು ಖರೀದಿಸಲಾಗಿದೆ. ಇದುವರೆಗೂ ಅತೀ ಕಡಿಮೆ 170 ರೂ., ಅತೀ ಹೆಚ್ಚು 336 ರೂ. ಸರಾಸರಿ ಬೆಲೆ 274 ರೂ. ಸಿಕ್ಕಿದಂತಾಗಿದೆ. ತಾಲೂಕಿನಲ್ಲಿ 20 ಸಾವಿರ ಅನಧಿಕೃತ ತಂಬಾಕು ಬೆಳೆಗಾರರಿದ್ದು, ಅವರಿಂದ 1.5 ಮಿಲಿಯನ್ ಮೆಟ್ರಿಕ್ ಟನ್ ತಂಬಾಕು ಟನ್ ಬರುವ ನಿರೀಕ್ಷೆ ಇದೆ. ಈ ವರ್ಷ ತಂಬಾಕು ಮಂಡಳಿ 99 ಮಿಲಿಯನ್ ಮೆಟ್ರಿಕ್ ಟನ್ ತಂಬಾಕು ಟನ್ ಉತ್ಪಾದನೆಗೆ ಅವಕಾಶ ನೀಡಿದ್ದು, ರೈತರು 110 ಮಿ.ಮೆ.ಟನ್ ತಂಬಾಕು ಉತ್ಪಾದನೆಗೆ ಅವಕಾಶ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಇದರಿಂದ ರೈತರು ಹೆಚ್ಚುವರಿಯಾಗಿ ಬೆಳೆದಿರುವ ತಂಬಾಕನ್ನು ದಂಡ ಸಮೇತ ಖರೀದಿಸಲು ಮಂಡಳಿ ಅವಕಾಶ ಕಲ್ಪಿಸಲಿದೆ ಎಂದು ರೈತ ಮುಖಂಡರು ತಿಳಿಸಿದರು.

ಈ ವೇಳೆ ಬಿಜೆಪಿ ಅಧ್ಯಕ್ಷ ಕಾಂತರಾಜು, ರೈತ ಮೋರ್ಚಾ ಅಧ್ಯಕ್ಷ ಪ್ರಸನ್ನ, ಪ್ರಧಾನ ಕಾರ್ಯದರ್ಶಿ ಸತೀಶ್, ನಾಗರಾಜ್ ಮಲ್ಲಾಡಿ, ವಕೀಲರಾದ ಎಸ್.ಬಿ. ಮೂರ್ತಿ, ಶ್ರೀನಿವಾಸ್, ಮುಸ್ತಫ ಈರಯ್ಯ, ಚಂದ್ರೇಗೌಡ, ಶಿವಶಂಕರ್, ಹರೀಶ್, ರೈತ ಮುಖಂಡರು ಉಪಸ್ಥಿತರಿದ್ದರು.

ನಾಳೆ 322ನೇ ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು: ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಆಶ್ರಯದಲ್ಲಿ ಪ್ರತಿ ತಿಂಗಳ ಕೊನೆಯ ಶನಿವಾರದಂದು ನಡೆಯುವ ಶಿವಾನುಭವ ದಾಸೋಹ ಮಾಲಿಕೆಯ 322ನೇ ಕಾರ್ಯಕ್ರಮವನ್ನು ಶ್ರೀಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಫೆ.22ರಂದು ಸಂಜೆ 6ಕ್ಕೆ ಮೈಸೂರಿನ ಶ್ರೀರಾಂಪುರ 2ನೇ ಹಂತ, ಅರವಿಂದ ನಗರದ ಎಸ್‌ಬಿಎಂ ಕಾಲೋನಿಯ ಶಿವ ದೇವಾಲಯದ ಶಿವ ಭವನದಲ್ಲಿ ಏರ್ಪಡಿಸಲಾಗಿದೆ. ವಾಗ್ಮಿಗಳೂ ಆದ ಸಂಸ್ಕೃತಿ ಚಿಂತಕ ಡಾ.ಜ್ಯೋತಿ ಶಂಕರ್ ಅವರು ದ್ವಾದಶ ಜ್ಯೋತಿರ್ಲಿಂಗಗಳ ಕುರಿತು ಉಪನ್ಯಾಸ ನೀಡಲಿದ್ದಾರೆ.

ಸರ್ವಜ್ಞರ ವಚನಗಳಿಂದ ಜೀವನದಲ್ಲಿ ಏಳ್ಗೆ ಹೊಂದಬಹುದು

• ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಮತ
• ಮೈಸೂರಲ್ಲಿ ಸಂತ ಕವಿ ಸರ್ವಜ್ಞರ ಜಯಂತಿ ಆಚರಣೆ



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪುಷ್ಪ ನಮನ ಸಲ್ಲಿಸಿದರು.

ಮೈಸೂರು, ಫೆ.20(ಎಂಟಿವೈ)– ಸರ್ವಜ್ಞರ ಇತಿಹಾಸ ಹಾಗೂ ಅವರ ವಚನಗಳನ್ನು ಸಮರ್ಪಕವಾಗಿ ತಿಳಿದುಕೊಂಡರೆ ಜೀವನದಲ್ಲಿ ಏಳಿಗೆ ಸಾಧಿಸಬಹುದು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ಸಂತ ಕವಿ ಸರ್ವಜ್ಞ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ವಜ್ಞರು ಸಹಸ್ರಾರು ವಚನಗಳನ್ನು ರಚಿಸಿದ್ದು, ಅವರ ವಚನಗಳಲ್ಲಿ ಇರುವ ಸಾರವನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಾಧನೆ ಮಾಡುವುದಕ್ಕೆ ವಯಸ್ಸು ಮುಖ್ಯವಲ್ಲ. ಸಾಧನೆ ಮಾಡುವುದರ್ಕ್ಕೆ ಛಲ, ಮನಸ್ಸು ಹಾಗೂ ಆಸಕ್ತಿ ಇರಬೇಕು. ಅದನ್ನು ಸರ್ವಜ್ಞ ಅವರನ್ನು ನೋಡಿ ಎಲ್ಲರೂ ಕಲಿಯಬೇಕು ಎಂದರು.

ಸರ್ವಜ್ಞ ಸರ್ಕಲ್: ಸರ್ವಜ್ಞನ ಇತಿಹಾಸವನ್ನು ಎಲ್ಲರೂ ಓದಿ ತಿಳಿದುಕೊಳ್ಳಬೇಕು. ಅವರು ನೀಡಿರುವ ಕೊಡುಗೆ ಅಪಾರ. ಸರ್ವಜ್ಞನ ತ್ರಿಪದಿಗಳು ಸರಳತೆ ಹಾಗೂ ಪ್ರಾಸಬದ್ಧತೆಯಿಂದ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿವೆ. ನೈತಿಕ, ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳನ್ನು ಸರ್ವಜ್ಞ ತಮ್ಮ ತ್ರಿಪದಿಯಲ್ಲಿ ಸೇರಿಸಿದ್ದಾರೆ. ಮೈಸೂರಿನಲ್ಲಿ ಸರ್ವಜ್ಞ ಸರ್ಕಲ್ ಮತ್ತು ಬಡಾವಣೆ ನಿರ್ಮಾಣ ಮಾಡುವಂತೆ ಸದನದಲ್ಲಿ ಪ್ರಸ್ತಾಪಿಸುತ್ತೇನೆ ಎಂದು ಹೇಳಿದರು.

ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿ, ಸರ್ವಜ್ಞ ಸರ್ವವ್ಯಾಪಿ ಎಂಬುದು ಸರ್ವ ಸತ್ಯ. ಅವರ ಒಂದು ಅಂಶವನ್ನಾದರೂ ಅಳವಡಿಸಿಕೊಂಡು ಸಾಧನೆ ಮಾಡಬೇಕು. ಸರ್ವವ್ಯಾಪಿಯಾಗಿ ಎಲ್ಲದರ ಬಗ್ಗೆಯೂ ಸರ್ವಜ್ಞ ತಿಳಿದು ಬರೆದಿದ್ದಾರೆ. ಸಮಾಜದ ಅಂಕುಡೊಂಕುಗಳನ್ನು ಹೇಳುವ ಮೂಲಕ ಮೂಢನಂಬಿಕೆಯನ್ನು ತೊಡೆದುಹಾಕಿ ಸಮಾಜದಲ್ಲಿ ಅರಿವು ಮೂಡಿಸಿದ್ದಾರೆ. ಸರ್ವಜ್ಞ ಎಂಬ ಮಾತು ಎಲ್ಲರ ಬಾಯಲ್ಲಿ ಬರುವಂತಹ ವಿಚಾರವಾಗಿದೆ. ಇವರು ಶಿಕ್ಷಣದ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಇವರು ಶಿಕ್ಷಣಕ್ಕೆ ಕೊಟ್ಟಿರುವಂತಹ ಕೊಡುಗೆ ಅಪಾರವಾದದ್ದು, ಸಾರ್ವಜನಿಕರ ಸೇವೆಯಲ್ಲಿ ಅವರನ್ನು ಅವರು ತೊಡಗಿಸಿಕೊಂಡಿದ್ದಾರೆ ಎಂದರೆ ಅದು ಅವರು ಪಡೆದಂತಹ ಶಿಕ್ಷಣ, ಸಂಸ್ಕಾರ ಇವೆಲ್ಲವೂ ಸಹಕಾರ ಆಗುತ್ತದೆ. ಅದಕ್ಕಾಗಿ ಪ್ರತಿಯೊಬ್ಬರು ಶಿಕ್ಷಕರಾಗಬೇಕು ಎಂಬ ಕರೆಯನ್ನು ನಮಗೆ ಕೊಟ್ಟಿದ್ದಾರೆ. ಅದನ್ನು ಉಪಯೋಗ ಮಾಡಿಕೊಳ್ಳಿ ಎಂದು ತಿಳಿಸಿದರು.

ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಡಾ.ಸಿ.ರೇಣುಕಾಂಬ ಮಾತನಾಡಿ, ಕನ್ನಡ ವಾಗ್ದೇವಿ ತನ್ನ ಬಾಹುಗಳಿಂದ ಅನೇಕ ವ್ಯಕ್ತಿಗಳನ್ನು ರೂಪಿಸಿದ್ದಾರೆ. ಅಂತಹ ವಾಗ್ದೇವಿಯ ಪುತ್ರರಾಗಿರುವವರಲ್ಲಿ ಸರ್ವಜ್ಞರು ಒಬ್ಬರು. ಸರ್ವಜ್ಞ ಎಂದರೆ ದೇವರು. ಎಲ್ಲವನ್ನೂ ತಿಳಿದ ವ್ಯಕ್ತಿಯನ್ನು ದೇವರು ಎಂದು ಕರೆಯುತ್ತೇವೆ. ಇಂತಹ ರೀತಿಯ ನಾಮಾಂಕಿತ ಪ್ರಪಂಚದ ಯಾವುದೇ ರಾಷ್ಟ್ರದ ಕವಿಗಳಿಗೆ ಸಿಕ್ಕಿಲ್ಲ. ನಮ್ಮ ಸರ್ವಜ್ಞ ಪಡೆದುಕೊಂಡಿದ್ದಾರೆ. ಇದು ಸಮಾಜದಿಂದ ದೊರಕಿರುವಂತಹ ಬಿರುದು. ಇಡೀ ಪ್ರಪಂಚದಲ್ಲಿಯೇ ಅಮರ ಕವಿ. ಕನ್ನಡ ಭಾಷೆ ಹಾಗೂ ಆಡುಭಾಷೆಗೆ ಇವರ ಕೊಡುಗೆ ಅಪಾರವಾಗಿದೆ. ಇವರು ಜನತಾ ಕವಿಯಾಗಿದ್ದರು. ಜನರ ಮಧ್ಯೆಯಲ್ಲಿಯೇ ಇದ್ದು ಕನ್ನಡವನ್ನು ಉತ್ತುಂಗಕ್ಕೆ ಏರಿಸಿದ ಕವಿ ಸರ್ವಜ್ಞ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುಂಬಾರ ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಆರ್ ಸೋಮಶೇಖರ್, ಲೋಕೋಪಯೋಗಿ ಇಲಾಖೆಯ ನಿವೃತ್ತ ಮುಖ್ಯ ಅಭಿಯಂತರ ಶ್ರೀನಿವಾಸ್, ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಡಾ.ಡಿ.ಎಸ್.ಕೃಷ್ಣ ಪ್ರಸಾದ್, ಶಾಲಿವಾಹನ ವಿವಿಧೋದ್ದೇಶ ಕೈಗಾರಿಕಾ ಸಂಘದ ಮಂಜುನಾಥ, ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಅಧ್ಯಕ್ಷ ಕೆ.ಶಿವರಾಮ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ತಂಡೇಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸನಮ್ ತೇರಿ ಕಸಮ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ನನಗೂ ಲವ್ವಾಗಿದೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ನಿಲವುಕು ಎನಮೇಲ್ ಎನ್ನಡಿ ಕೋಪಂ(ತ)	4 ಪ್ರದರ್ಶನಗಳು
ಸಂಗಂ	
ಛಾವಾ (ಹಿ)	4 ಪ್ರದರ್ಶನಗಳು
ಲಿಡೋ	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಮ್ಯಾಕ್ಸ್ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೇಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇ–ಆಸ್ತಿ ತಂತ್ರಾಂಶ ಮೂಲಕ ಆಸ್ತಿ ನಮೂನೆ ನೀಡಲು ಸೂಚನೆ

ಮೈಸೂರು,ಫೆ.20– ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯೊಳಗೆ ಬರುವ ಸರ್ಕಾರಿ ಜಾಗ, ಅರೆಸರ್ಕಾರಿ, ಸ್ಥಳೀಯ ಸಂಸ್ಥೆಗಳ ಒಡೆತನದಲ್ಲಿರುವ ಸ್ವತ್ತುಗಳನ್ನು ಹೊರತುಪಡಿಸಿ ಇನ್ನುಳಿದ ಕಟ್ಟಡಗಳ, ನಿವೇಶನಗಳ ಮಾಲೀಕರು ತಮ್ಮ ತಮ್ಮ ಆಸ್ತಿಗಳಿಗೆ ಸಂಬಂಧಿಸಿದ ಪೂರಕ ನೋಂದಾಯಿತ ದಾಖಲೆ ಪತ್ರಗಳು, ಸ್ವತ್ತಿನ ಛಾಯಾಚಿತ್ರ ಮಾಲೀಕರ ಫೋಟೋ, ನಮೂನೆ–15(ಇ.ಅ)/ ಕೆಇಬಿ ಬಿಲ್, ಕುಡಿಯುವ ನೀರಿನ ಬಿಲ್, ಕಟ್ಟಡ ಪರವಾನಗಿ ಮತ್ತು ಅನುಮೋದಿತ ನಕ್ಷೆ, ಏಕ ನಿವೇಶನ ವಿನ್ಯಾಸ ಅನುಮೋದನೆ ಅಥವಾ ಅನುಮೋದಿತ ಬಡಾವಣೆ ನಕ್ಷೆ, ಅಲಿನೇಷನ್ ನಕಲು ಪ್ರತಿ, RTC, ಮ್ಯುಟೇಶನ್ ನಕಲು ಪ್ರತಿ, ಮಾಲೀಕರ ಆಧಾರ್ ಕಾರ್ಡ್ ಪ್ರತಿ, ಮಾಲೀಕರ ಪಾನ್ ಕಾರ್ಡ್ ಪ್ರತಿ ಅಥವಾ ಚುನಾವಣಾ ಗುರುತಿನ ಚೀಟಿ ಹಾಗೂ ಇತರೆ ಅವಶ್ಯಕ ದಾಖಲೆಗಳನ್ನು ಪಟ್ಟಣ ಪಂಚಾಯಿತಿ ಕಚೇರಿಗೆ ಸಲ್ಲಿಸಿ ಸ್ವತ್ತಿಗೆ ಸಂಬಂಧಪಟ್ಟ ಆಸ್ತಿ ತೆರಿಗೆಯನ್ನು ಪಾವತಿಸಿ, ಆಸ್ತಿಯನ್ನು ಗಣಕೀಕರಿಸಿಕೊಂಡು ನಮೂನೆ–3/ ನಮೂನೆ–3 A ಗಳನ್ನು ಪಡೆದುಕೊಂಡು ನೋಂದಾಯಿತ ಕಚೇರಿಯಲ್ಲಿ ಕ್ರಯಪತ್ರ, ದಾನಪತ್ರ, ವಿಭಾಗ ಪತ್ರ, ಹಕ್ಕು ಖುಲಾಸೆ ಹಾಗೂ ಇತರೆ ದಾಖಲೆ ಪತ್ರಗಳನ್ನು ನೋಂದಣಿ ಮಾಡಿಸಿಕೊಳ್ಳಬೇಕಿದೆ.

ಅಲ್ಲದೆ ಸರ್ಕಾರದ ಅಧಿಸೂಚನೆಯಂತೆ ಗಣಕೀಕೃತ ನಮೂನೆ–3 ಮತ್ತು ನಮೂನೆ–3ಎ ಅನ್ನು ಪಡೆದುಕೊಳ್ಳಬೇಕಿದೆ. ತಪ್ಪಿದಲ್ಲಿ ಸಂಬಂಧಪಟ್ಟ ಆಸ್ತಿ ಮಾಲೀಕರಿಗೆ ನಿಯಮ 10ಎ ರಂತೆ ನಿಯಮಾನುಸಾರ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು, ಕಂದಾಯಾಧಿಕಾರಿ, ಕಂದಾಯ ಶಾಖೆಯ ಸಿಬ್ಬಂದಿಯವರನ್ನು ಸಂಪರ್ಕಿಸಬಹುದು ಎಂದು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಡುಕುತೊರೆಯಲ್ಲಿ ಸ್ವಚ್ಛತಾ ಅಭಿಯಾನ, 600 ಕೆಜಿ ಪ್ಲಾಸ್ಟಿಕ್ ಸಂಗ್ರಹ



ಮುಡುಕುತೊರೆ ಸ್ವಚ್ಛತಾ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ನಿರ್ಮೂಲನಾ ಅಭಿಯಾನದಲ್ಲಿ ಭಾಗಿಯಾದವರು

ಮೈಸೂರು, ಫೆ.20–ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಚೇರಿ ನಗರ ಮತ್ತು ಗ್ರಾಮಾಂತರ, ಜಿಲ್ಲಾಡಳಿತ, ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಮೈಸೂರು, ಗ್ರಾಮ ಪಂಚಾಯಿತಿ, ಬಿ. ಶೆಟ್ಟಹಳ್ಳಿ, ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಲಕಾಡು, ಎಸ್.ಜೆ.ಸಿ.ಇ ಹಾಗೂ ವಿವಿಧ ಕಾರ್ಖಾನೆಗಳ ಸಹಯೋಗದೊಂದಿಗೆ ತಿ.ನರಸೀಪುರ ತಾಲೂಕು ಮುಡುಕುತೊರೆ ಶ್ರೀ ಭ್ರಮರಾಂಭ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಸ್ವಚ್ಛತಾ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ನಿರ್ಮೂಲನಾ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಕಾವೇರಿ ನದಿ, ದೇವಸ್ಥಾನ ಆವರಣ, ಬೆಟ್ಟದ ಮೆಟ್ಟಿಲು, ಪಾರ್ಕಿಂಗ್ ಸ್ಥಳ ಹಾಗೂ ಬೆಟ್ಟದ ರಸ್ತೆಗಳಲ್ಲಿ ಸ್ವಚ್ಛತಾ ಕಾರ್ಯದ ಜೊತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು. 250 ವಿದ್ಯಾರ್ಥಿಗಳು, ಸುಮಾರು 600 ಕೆಜಿಯಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಿ, ಕಾರ್ಖಾನೆಗೆ ವಿತರಿಸಿದರು. ಈ ಸಂದರ್ಭದಲ್ಲಿ ಕೆಎಸ್ ಪಿಸಿಬಿ ಹಿರಿಯ ಪರಿಸರ ಅಧಿಕಾರಿ ಎಸ್. ರಾಜಶೇಖರ, ಪರಿಸರ ಅಧಿಕಾರಿ ಗಳಾದ ವಿ.ಸುನಿಲ್, ವಿ.ಎಸ್. ಕುಮಾರ್, ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಕೆ. ಶ್ರೀನಿವಾಸ್, ಎಂಐಟಿಯ ಪ್ರೊಫೆಸರ್ ಚೇತನ್, ಎಸ್‌ಜೆಇಸಿಯ ಚಂದ್ರಶೇಖರ, ಕೆಎಸ್‌ಪಿಸಿಬಿಯ ಡಿಇಒ ಹರಿಪ್ರಸಾದ್, ನೂಬಿಯಾ, ನೇತ್ರಾವತಿ, ಜಯಲಕ್ಷ್ಮಿ, ಪಿಡಿಒ ಕೆಂಪೇಗೌಡ, ಕಾರ್ಖಾನೆಯ ಸಿಬ್ಬಂದಿಗಳು, ಇತರರು ಸ್ವಚ್ಛತಾ ಹಾಗೂ ಪ್ಲಾಸ್ಟಿಕ್ ತ್ಯಾಜ್ಯವಸ್ತುಗಳನ್ನು ಬಳಸದಂತೆ ಸಾರ್ವಜನಿಕರಿಗೆ ಅರಿವು ಮೂಡಿಸಿದರು.

ಫೆ.25ರಂದು ಕೇಂದ್ರ ಸಚಿವರ ಭೇಟಿ: ಮೇಕೆದಾಟು, ಮಹದಾಯಿ ಸೇರಿ ನೀರಾವರಿ ಯೋಜನೆಗಳಿಗೆ ಅನುಮತಿ ಪ್ರಸ್ತಾವನೆ ಸಲ್ಲಿಕೆ

ಬೆಂಗಳೂರು, ಫೆ.20– ಮೇಕೆದಾಟು, ಮಹದಾಯಿ ಮತ್ತು ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆ ಚರ್ಚಿಸಲು ಇದೇ 25 ರಂದು ಕೇಂದ್ರ ಜಲಶಕ್ತಿ ಸಚಿವರನ್ನು ಜಲ ಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿಯಾಗಲಿದ್ದಾರೆ.

ಈ ಭೇಟಿಯ ಸಂದರ್ಭದಲ್ಲಿ ರಾಜ್ಯದಲ್ಲಿ ನನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳಿಗೆ ಕೇಂದ್ರ ಸರಕಾರದ ಒಪ್ಪಿಗೆ ಮತ್ತು ಕೇಂದ್ರ ಸರಕಾರ ಘೋಷಣೆ ಮಾಡಿರುವ ನೀರಾವರಿ ಯೋಜನೆಗಳಿಗೆ ಅನುದಾನ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.



ರಾಜಸ್ಥಾನದ ಉದಯಪುರದಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯ ಏರ್ಪಡಿಸಿದ್ದ ಅಖಿಲ ಭಾರತ ನೀರಾವರಿ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಭೇಟಿಗೆ ವಿನಂತಿಸಿ ಸಮಯಾವಕಾಶ ಅಂತಿಮಗೊಳಿಸಿದ್ದಾಗಿ ಹೇಳಿದ್ದಾರೆ.

ದೆಹಲಿಯಲ್ಲಿ ಇದೇ ಫೆ.25 ರಂದು ಕೇಂದ್ರ ಜಲಶಕ್ತಿ ಸಚಿವರು ಭೇಟಿಗೆ ಕಾಲಾವಕಾಶ ಕೊಟ್ಟಿದ್ದಾರೆ. ಈ ಸಂದರ್ಭವನ್ನು ಸದುಪಯೋಗಪಡಿಸಿಕೊಂಡು ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ. ಮೇಕೆದಾಟು ಸೇರಿದಂತೆ ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡುವ ವಿಶ್ವಾಸವಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಕೇಂದ್ರ ಜಲಶಕ್ತಿ ಸಚಿವರ ಭೇಟಿ ವೇಳೆ ಈ ಹಿಂದೆ ಘೋಷಿಸಲಾಗಿರುವ ಅನುದಾನ ಹಾಗೂ ಮಹದಾಯಿ, ಮೇಕೆದಾಟು ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗಳ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.20– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಫೆ.22 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ತೊಣಚಿಕೊಪ್ಪಲು, ಹರಿಹರ ಹೋಟೆಲ್, ಅಮ್ಮ ಕಾಂಪ್ಲೆಕ್ಸ್, ನ್ಯೂ ಕಾಂತರಾಜ ಅರಸ್ ರಸ್ತೆ ಆರ್.ಟಿ.ಟಿ.ಸಿ ಕಾಂಪ್ಲೆಕ್ಸ್, ಅರವಿಂದನಗರ, ಕುವೆಂಪುನಗರ ಎಂ.ಬ್ಲಾಕ್, ಎನ್. ಬ್ಲಾಕ್, ಕೆ ಬ್ಲಾಕ್, ಕುವೆಂಪುನಗರ ಕೆ.ಹೆಚ್.ಬಿ ಕಾಲೋನಿ, ಅನಿಕೇತನ ರಸ್ತೆ, ಪಡುವಣ ರಸ್ತೆ, ಸರಸ್ವತಿಪುರಂ 1 ರಿಂದ 4ನೇ ಮುಖ್ಯರಸ್ತೆ, ವಿಶ್ವಮಾನವಜೋಡಿ ರಸ್ತೆ, ಪಂಚಮಂತ್ರ ರಸ್ತೆ, ಎಂ.ಬ್ಲಾಕ್ ಲೈಬ್ರರಿ, ಪಾಂಡುರಂಗದೇವಸ್ಥಾನ, ವಿವೇಕಾನಂದ ವೃತ್ತ, ವಿವೇಕಾನಂದನಗರ, ಇ.ಡಬ್ಲ್ಯೂ.ಎಸ್ ಗಣಪತಿ ದೇವಸ್ಥಾನ, ಎಂ.ಎಲ್.ಎ ವಿಶ್ವನಾಥ್ ಮನೆ ಸುತ್ತಮುತ್ತ, ಕೆನರಾ ಬ್ಯಾಂಕ್, ಬಿ.ಜಿ.ಎಸ್ ಬಾಲ ಜಗನ್ನಾಥ ಶಾಲೆ, ಎಸ್.ಬಿ.ಎಂ ಕಾಲೋನಿ, ಶಿವ ಟೆಂಪಲ್, ಸೂರ್ಯ ಲೇಔಟ್, ನಿಮಿಷಾಂಬ ಲೇಔಟ್, ಕಂದಾಯನಗರ 3ನೇ ಹಂತ, ಗಿರಿಯಪ್ಪ ನಿಂಗೇಗೌಡ ಲೇಔಟ್, ಟೆಂಪಲ್ ಬೆಲ್ ಲೇಔಟ್, ಮಹಾಲಿಂಗೇಶ್ವರ ದೇವಸ್ಥಾನ, ಕಬಿನಿ ಲೇಔಟ್, ಎಸ್.ಎಂ.ಎಸ್ ಸ್ಕೂಲ್ ಲೇಔಟ್, ಕಂದಾಯ ಲೇಔಟ್, ಹಂಸ ಲೇಔಟ್ 1ನೇ ಹಂತ, ಗಗನ ಶೇಖರ ಲೇಔಟ್, ಹುಲಿನಾರಾಯಣಪ್ಪ ಲೇಔಟ್, ಭವ್ಯ ಭಾರತಿ ಲೇಔಟ್, ಎಂ.ಡಿ.ಸಿ.ಸಿ ಬ್ಯಾಂಕ್ ಎಂಪ್ಲಾಯಿಸ್ ಲೇಔಟ್, ಟಿ.ಕೆ.ಸ್ಟುಡಿಯೋ ಲೇಔಟ್, ಕಂದಾಯ ಲೇಔಟ್ 2ನೇ ಹಂತ, ತಪೋವನ, ಅನ್ನಪೂರ್ಣ ಲೇಔಟ್, ಎಂ.ಡಿ.ಸಿ.ಸಿ ಲೇಔಟ್, ಶ್ರೀರಾಂಪುರ, ಪ್ರೀತಿ ಲೇಔಟ್, ಡಿ.ವಿ.ಜಿ ಲೇಔಟ್, ಟಿ.ಕೆ ರಾಮ್ ಲೇಔಟ್, ಚಿದಾನಂದ ಮತ್ತು ರಕ್ಷಾ ಲೇಔಟ್, ಆರ್.ಕೆ.ನಗರ ಕೆ ಬ್ಲಾಕ್, ವಾಸು ಲೇಔಟ್, ಮುಡಾ ಎಂಪ್ಲಾಯಿಸ್ ಲೇಔಟ್, ಮಾಧವ ಪಾರ್ಕ್, ಇ ಮತ್ತು ಎಫ್ ಬ್ಲಾಕ್, ಜನತಾ ನಗರ, ಶಾರದಾದೇವಿನಗರ, ನಿವೇದಿತಾನಗರ, ಬಸವೇಶ್ವರನಗರ, ಗಂಗೋತ್ರಿ ಹುಡ್ಕೋ ಲೇಔಟ್, ಸಬ್‌ರಿಜಿಸ್ಟ್ರಾರ್ ಆಫೀಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಕಲಾಭಿಮಾನಿಗಳ ಮನಸೂರೆಗೊಂಡ 'ನಾದ ನೃತ್ಯ' ಪ್ರದರ್ಶನ

ಮನಮೋಹಕ ಭರತನಾಟ್ಯ ಸೊಗಸಿಗೆ ಮನಸೋತ ಪ್ರೇಕ್ಷಕರು

• ನೃತ್ಯದಲ್ಲಿ ವಿಷ್ಣುವಿನ ದಶಾವತಾರ ಅನಾವರಣ • ನಾಟ್ಯದಲ್ಲಿ ಗಣೇಶ, ಶಿವ, ರಾಜರಾಜೇಶ್ವರಿ ಆರಾಧಿಸಿ ಭಕ್ತಿಯ ಸಿಂಚನ





ಮೈಸೂರಿನ ಗಾನಭಾರತಿಯ ರಮಾ ಗೋವಿಂದಾ ಕಲಾವೇದಿಕೆಯಲ್ಲಿ ಗುರುವಾರ ವಿದುಷಿ ಶ್ರೀಲಕ್ಷ್ಮಿ ಕುಮಾರ್ ಅವರ ಶಿಷ್ಯ ವೃಂದ ಭರತನಾಟ್ಯ ಪ್ರದರ್ಶನ ನೀಡಿತು. ಮತ್ತೊಂದು ಚಿತ್ರದಲ್ಲಿ ಕಾರ್ಯಕ್ರಮ ಉದ್ಘಾಟಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಫೆ.20(ಪಿಎಂ)– ಪುಷ್ಪಾಂಜಲಿ, ಶಿವಸ್ತುತಿ ಹಾಗೂ ದಶಾವತಾರ ಇತ್ಯಾದಿ ಭರತನಾಟ್ಯ ಸಂಯೋಜನೆಯ ಸೊಗಸಿಗೆ ಪ್ರೇಕ್ಷಕರು ಮನಸೋತರು. ಗೆಜ್ಜೆ ನಾದಕ್ಕೆ ಹೆಜ್ಜೆ ಹಾಕಿದ ಕಲಾವಿದೆಯರು ವೇದಿಕೆಯಲ್ಲಿ ದೃಶ್ಯಕಾವ್ಯವನ್ನೇ ಮೂಡಿಸಿದರು.

ಮೈಸೂರಿನ ಕುವೆಂಪುನಗರದ ಗಾನಭಾರತಿಯ ರಮಾ ಗೋವಿಂದಾ ಕಲಾವೇದಿಕೆಯಲ್ಲಿ ಸಂಸ್ಕೃತಿ ಟ್ರಸ್ಟ್ ಮೈಸೂರು ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ 'ನಾದ ನೃತ್ಯ' ಭರತನಾಟ್ಯ ಪ್ರದರ್ಶನ ಕಾರ್ಯಕ್ರಮದಲ್ಲಿ ಶ್ರೀ ಉಮಾಮಹೇಶ್ವರಿ ನೃತ್ಯ ಕಲಾಕ್ಷೇತ್ರ ಟ್ರಸ್ಟ್‌ನ ವಿದುಷಿ ಶ್ರೀಲಕ್ಷ್ಮಿ ಕುಮಾರ್ ಅವರ ಶಿಷ್ಯ ವೃಂದದ ನಾಟ್ಯ ವೈಭವ ನೆರೆದವರ ಮನಸೂರೆಗೊಂಡಿತು.

ಮಧುರೈ ಆರ್.ಮುರಳೀಧರನ್ ರಚಿತ ಕೃತಿಗೆ 'ಸರಸ್ವತಿ' ರಾಗ ಹಾಗೂ 'ಆದಿ' ತಾಳದಲ್ಲಿ 'ಪುಷ್ಪಾಂಜಲಿ' ನೃತ್ಯ ಪ್ರದರ್ಶನ ನೀಡಲಾಯಿತು. ಕಲಾವಿದೆಯರಾದ ಎಂ.ಡಿ.ಲೇಖನಾ, ಆಸಿನಿ ಲೋಕೇಶ್, ಎ.ಎಸ್.ಧೃತಿ, ಎನ್.ಐಶ್ವರ್ಯ, ಪಿ.ಶ್ರೀಯಾಧಿತಾ ಹಾಗೂ ಕೆ.ಹೆಚ್.ಕೀರ್ತನಾ ತಮ್ಮ ಮನಮೋಹಕ ಭಾವಭಂಗಿಯ ನೃತ್ಯದೊಂದಿಗೆ ನೋಡುಗರಲ್ಲಿ ಪುಳಕವಿಟ್ಟರು.

ಬಳಿಕ ವಿಘ್ನ ವಿನಾಶಕ ಗಣಪತಿ ಆರಾಧಿಸುವ ಗಾನಕ್ಕೆ ಶ್ರೀಲಕ್ಷ್ಮೀಕುಮಾರ್ ಅವರ ಮತ್ತೊಬ್ಬ ಶಿಷ್ಯೆ ಜೆ.ಜ್ಞಾನೇಶ್ವರಿ ಹೆಜ್ಜೆ ಹಾಕಿ ಸಭಿಕರಲ್ಲಿ ಭಕ್ತಿಭಾವ ಮೂಡಿಸಿದರು. ದ್ವಾರಕಿ ಕೃಷ್ಣಸ್ವಾಮಿ ರಚನೆಯ ಕೃತಿಗೆ 'ನಾಟ' ರಾಗ ಹಾಗೂ 'ಆದಿ' ತಾಳದಲ್ಲಿ 'ಆನಂದ ನರ್ತನ' ನೃತ್ಯ ಸಂಯೋಜನೆಗೆ ಹೆಜ್ಜೆ ಹಾಕಿ ಗಜಮುಖನ ಗುಣಗಾನ ಮಾಡಿದರು.

ನಂತರ 'ಶಿವಸ್ತುತಿ' ನೃತ್ಯ ಸಂಯೋಜನೆಗೆ ವೇದಿಕೆ ತೆರೆದುಕೊಂಡಿತು. ಶ್ರೀ ಕಾರ್ತಿಕ ಹೆಬ್ಬಾರ್ ರಚಿತ ಕೃತಿಗೆ 'ಸುಮನಸ ರಂಜನಿ' ರಾಗ ಹಾಗೂ 'ಆದಿ' ತಾಳದಲ್ಲಿ ನಾಟ್ಯ ಪ್ರದರ್ಶಿಸಿದ ಕಲಾವಿದೆಯರು, ಶಿವನ ಆರಾಧನೆಯೊಂದಿಗೆ ಭಕ್ತಿಯ ಪರಾಕಾಷ್ಠೆ ಮೆರೆದರು. ಎಂ.ಡಿ.ಲೇಖನಾ, ಆಸಿನಿ ಲೋಕೇಶ್, ಸುಧೀಕ್ಷಾ, ಎ.ಎಸ್.ಧೃತಿ, ಎನ್.ಐಶ್ವರ್ಯ, ಪಿ.ಶ್ರೀಯಾಧಿತಾ, ಕೆ.ಹೆಚ್.ಕೀರ್ತನಾ ಹಾಗೂ ಹರ್ಷಿತಾ ಈ ಸಂಯೋಜನೆಗೆ ನೃತ್ಯ ಪ್ರದರ್ಶಿಸಿ ಶಿವನ ಸ್ಮರಣೆ ಮಾಡಿದರು.

ಬಳಿಕ ಇದೇ ನೃತ್ಯ ಕಲಾವಿದೆಯರ ತಂಡ 'ದಶಾವತಾರ' ಪ್ರಸ್ತುತಿ ಮೂಲಕ ವಿಷ್ಣುವಿನ ಎಲ್ಲಾ ಅವತಾರಗಳನ್ನು ಪ್ರತಿಬಿಂಬಿಸಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿತು. ಪುರಂದರದಾಸರ ರಚನೆಯ 'ಬಾರೇ ಗೋಪಮ್ಮ...' ಗೀತೆಯ ಮೂಲಕ 'ರಾಗ ಮಾಲಿಕೆ' ರಾಗ ಹಾಗೂ 'ಆದಿ' ತಾಳದಲ್ಲಿ ಬಾಲಕೃಷ್ಣನ ತುಂಟಾಟದ ಚಿತ್ರಣವನ್ನು ಸೊಗಸಾಗಿ ಅನಾವರಣಗೊಳಿಸಲಾಯಿತು.

ಇದಾದ ನಂತರ ಮೈಸೂರಿನವರೇ ಆದ ಸದಾಶಿವರಾಯರು ರಚಿಸಿರುವ ದೇವಿಯ ಕುರಿತ 'ಓ ರಾಜರಾಜೇಶ್ವರಿ' ಕೃತಿಗೆ ಹೆಜ್ಜೆ ಹಾಕಿ ಸಭಿಕರು ಭಕ್ತಿಯಲ್ಲಿ ತೇಲುವಂತೆ ಮಾಡಿದರು. ಅಂತಿಮವಾಗಿ ಕೇರಳದ ಜಾನಪದ ಗೀತೆಗೆ ನೃತ್ಯ ಪ್ರದರ್ಶಿಸಿ ಸಭಿಕರಲ್ಲಿ ಭಕ್ತಿಭಾವ ಮೂಡಿಸಲಾಯಿತು.

ಅಲ್ಲದೆ, ಶ್ರೀ ದುರ್ಗಾ ನೃತ್ಯ ಅಕಾಡೆಮಿಯ ವಿದುಷಿ ಶ್ರೀವಿದ್ಯಾರಾವ್ ಅವರ ಶಿಷ್ಯವೃಂದ ಹಾಗೂ ಸಂಗೀತ ವಿವಿಯ ಭರತನಾಟ್ಯ ವಿಭಾಗದ ವಿದ್ಯಾರ್ಥಿಗಳ ತಂಡದಿಂದ ಮೂಡಿಬಂದ ನೃತ್ಯ ಸೊಗಸಿಗೆ ಸಭಿಕರು ಮೈಮರೆತು ಸಂಭ್ರಮಿಸಿದರು. ಇದಕ್ಕೂ ಮುನ್ನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಹಾಗೂ ನೃತ್ಯಗಿರಿ ನಿರ್ದೇಶಕಿ ಡಾ.ಕೃಪಾ ಫಡ್ಕೆ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಸಂಸ್ಕೃತಿ ಪ್ರದರ್ಶಕ ಕಲೆಗಳ ಅಕಾಡೆಮಿಯ ಸಂಸ್ಥಾಪಕ ಟ್ರಸ್ಟಿ ಛಾಯಾ, ವ್ಯವಸ್ಥಾಪಕ ಟ್ರಸ್ಟಿ ಡಾ.ಭುವನೇಶ್ವರಿ ಮತ್ತಿತರರು ಹಾಜರಿದ್ದರು.

ಫೆ.23, ಆರೋಗ್ಯ ಉಚಿತ ತಪಾಸಣೆ, ಔಷಧಿ ವಿತರಣೆ ಕಾರ್ಯಕ್ರಮ

ಮೈಸೂರು, ಫೆ.20– ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ವತಿಯಿಂದ ಫೆ.23ರಂದು ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೂ ಮೈಸೂರು–ಬನ್ನೂರು ರಸ್ತೆಯ ಹಾರೋಹಳ್ಳಿ ಬಳಿ ಇರುವ ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ.

ನುರಿತ ವೈದ್ಯರು ಎಲ್ಲಾ ರೀತಿಯ ಆರೋಗ್ಯ ತಪಾಸಣೆ ನಡೆಸಿ, ಉಚಿತ ಔಷಧಿಗಳನ್ನು ವಿತರಿಸುವರು. ಮೈಸೂರು ನಗರ ಮತ್ತು ತಾಲೂಕಿನ ಸುತ್ತ–ಮುತ್ತಲಿನ ನಿವಾಸಿಗಳು ಇದರ ಸದುಪಯೋಗಪಡಿಸಿಕೊಳ್ಳುವಂತೆ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸವಿತಾ ಗಣೇಶ್(ಮೊ.8197902468) ಮತ್ತು ಟ್ರಸ್ಟ್ ಅಧ್ಯಕ್ಷ ವಿಜಯಕುಮಾರ್ ಮೊ.(9945607981) ಅವರುಗಳನ್ನು ಸಂಪರ್ಕಿಸಲು ಟ್ರಸ್ಟ್ ಮನವಿ ಮಾಡಿದೆ.

ಐಸಿಸಿ ಚಾಂಪಿಯನ್ ಟ್ರೋಫಿ–2025

ಬಾಂಗ್ಲಾ ವಿರುದ್ಧ ಜಯ; ಭಾರತ ಶುಭಾರಂಭ



ದುಬೈ, ಫೆ.20– ಮೊಹಮ್ಮದ್ ಶಮಿ ಅವರ ಮಾರಕ ಬೌಲಿಂಗ್ ಮತ್ತು ಉಪನಾಯಕ ಶುಭಮನ್ ಗಿಲ್ ಅವರ ಜವಾಬ್ದಾರಿಯುತ ಶತಕದ ನೆರವಿನಿಂದ ಭಾರತ ಬಾಂಗ್ಲಾದೇಶವನ್ನು ಮಣಿಸಿ ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಭರ್ಜರಿ ಶುಭಾರಂಭ ಮಾಡಿದೆ.

ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಬಾಂಗ್ಲಾದೇಶ ನೀಡಿದ ಸುಲಭ ಗುರಿ ಬೆನ್ನತ್ತಿದ ಭಾರತ ಕೇವಲ 46.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 231 ರನ್ ಗಳಿಸಿ ಜಯದ ನಗೆ ಬೀರಿತು.

ಗೆಲ್ಲಲು 229 ರನ್‌ಗಳ ಗುರಿ ಪಡೆದ ಭಾರತ ತಂಡಕ್ಕೆ ನಾಯಕ ರೋಹಿತ್ ಶರ್ಮಾ ಮತ್ತು ಉಪನಾಯಕ ಶುಭಮನ್ ಗಿಲ್ ಉತ್ತಮ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ ಇವರಿಬ್ಬರೂ ಕೇವಲ 9.5 ಓವರ್‌ಗಳಲ್ಲಿ 69 ರನ್‌ಗಳ ಜೊತೆಯಾಟವಾಡಿದರು. ರೋಹಿತ್ ಶರ್ಮಾ ಕೇವಲ 36 ಎಸೆತಗಳಲ್ಲಿ 7 ಬೌಂಡರಿ ಒಳಗೊಂಡ 41 ರನ್ ಗಳಿಸಿ ಔಟಾದರು. ನಂತರ ಕ್ರೀಸ್‌ಗೆ ಬಂದ ವಿರಾಟ್ ಕೊಹ್ಲಿ 1 ಬೌಂಡರಿ ಒಳಗೊಂಡ 22 ರನ್ ಗಳಿಸಿ ವಿಕೆಟ್ ಒಪ್ಪಿಸಿ ಬಹು ಬೇಗ ಹೊರ ನಡೆದರು. ಬಳಿಕ ಬಂದ ಶ್ರೇಯಸ್ ಅಯ್ಯರ್ 15, ಅಕ್ಷರ್ ಪಟೇಲ್ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಗಿಲ್ ಭರ್ಜರಿ ಶತಕ: ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಮತ್ತೊಂದೆಡೆ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನ ನೀಡಿದ ಶುಭ್‌ಮನ್ ಗಿಲ್ ವೃತ್ತಿ ಜೀವನದ 7ನೇ ಶತಕ ಸಿಡಿಸಿ ಸಂಭ್ರಮಿಸಿದರು. ಪಂದ್ಯದಲ್ಲಿ 129 ಎಸೆತಗಳನ್ನು ಎದುರಿಸಿದ ಶುಭಮನ್ ಗಿಲ್ ಅವರು 9 ಬೌಂಡರಿ ಮತ್ತು 2 ಸಿಕ್ಸರ್ ಒಳಗೊಂಡ ಅಜೇಯ 101 ರನ್ ಗಳಿಸಿದರು. ಅವರಿಗೆ ಉತ್ತಮ ಸಾಥ್ ನೀಡಿದ ಕೆ.ಎಲ್.ರಾಹುಲ್ ಅವರು 47 ಎಸೆತಗಳಿಂದ 41 ರನ್ ಗಳಿಸಿ ತಂಡವನ್ನು ವಿಜಯದ ದಡ ಸೇರಿಸಿದರು. ಇವರಿಬ್ಬರು 5ನೇ ವಿಕೆಟ್‌ಗೆ ಮುರಿಯದ 87 ರನ್ ಗಳಿಸಿದರು. ಬಾಂಗ್ಲಾದೇಶದಿಂದ ಒಂದು ಜೀವದಾನ ಪಡೆದ ರಾಹುಲ್ ಮತ್ತೆ ಜಾಗರೂಕತೆಯಿಂದ ಆಡಿದ್ದರಿಂದ ವಿಕೆಟ್ ಪಡೆಯುವ ಎದುರಾಳಿ ತಂಡದ ಯಾವ ಪ್ರಯತ್ನವೂ ಯಶಸ್ವಿಯಾಗಲಿಲ್ಲ.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ಉತ್ತಮ ಆರಂಭ ಪಡೆಯುವಲ್ಲಿ ವಿಫಲವಾಯಿತು. ತಂಡದ ಮೊತ್ತ 35 ರನ್ ಆಗುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ತನ್ವೀದ್ ಹೃದಯ್ ಮತ್ತು ಜಕರ್ ಅಲಿಶ್ 154 ರನ್ ಜೊತೆಯಾಟ ವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಜಕರ್ ಅಲಿ 68 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದ ತನ್ವೀದ್ ಹೃದಯ್ 2 ಸಿಕ್ಸರ್, 6 ಬೌಂಡರಿ ಒಳಗೊಂಡ 100 ರನ್ ಗಳಿಸಿ ಔಟಾದರು. ರಿಶಾದ್ ಹೊಸೈನ್ 18 ರನ್ ಗಳಿಸಿದರು. ಭಾರತದ ಪರ ಮೊಹಮ್ಮದ್ ಶಮಿ 5, ಹರ್ಷಿತ್ ರಾಣಾ 3, ಅಕ್ಷರ್ ಪಟೇಲ್ 2 ವಿಕೆಟ್ ಗಳಿಸಿದರು.

ಮೊಹಮ್ಮದ್ ಶಮಿ ವಿಶ್ವದಾಖಲೆ

ದುಬೈ: ಭಾರತದ ವೇಗದ ಬೌಲರ್ ಮೊಹಮ್ಮದ್ ಶಮಿ ಏಕದಿನ ಕ್ರಿಕೆಟ್‌ನಲ್ಲಿ ವೇಗವಾಗಿ 200 ವಿಕೆಟ್ ಪಡೆದು ವಿಶ್ವದಾಖಲೆ ನಿರ್ಮಿಸಿದ್ದಾರೆ.



ಬಾಂಗ್ಲಾ ವಿರುದ್ಧ 104ನೇ ಏಕದಿನ ಪಂದ್ಯವಾಡಿದ ಶಮಿ 5 ವಿಕೆಟ್ ಪಡೆಯುವ ಮೂಲಕ 200 ವಿಕೆಟ್‌ಗಳ ಸಾಧನೆ ಮಾಡಿದರು. ಇದಕ್ಕಾಗಿ ಅವರು 5126 ಎಸೆತಗಳನ್ನು ತೆಗೆದುಕೊಂಡಿದ್ದಾರೆ. ಈ ಹಿಂದೆ ಮಿಚೆಲ್ ಸ್ಟಾರ್ಕ್ ಅವರು ಈ ಮೈಲಿಗಲ್ಲು ತಲುಪಲು 102 ಪಂದ್ಯಗಳಲ್ಲಿ 5240 ಚೆಂಡುಗಳನ್ನು ಎಸೆದಿದ್ದು ಈ ಹಿಂದಿನ ವಿಶ್ವದಾಖಲೆಯಾಗಿತ್ತು. ಇದರೊಂದಿಗೆ ಭಾರತದ ಪರ ವೇಗವಾಗಿ 200 ವಿಕೆಟ್‌ಗಳ ದಾಖಲೆ ಹೊಂದಿದ್ದ ಅಜಿತ್ ಅಗರ್ಕರ್ ದಾಖಲೆ ಹಿಂದಕ್ಕೆ ಹಾಕಿದ್ದು, ಈ ಹಿಂದೆ ಅಜಿತ್ ಅಗರ್ಕರ್ ಅವರು 133 ಪಂದ್ಯಗಳಿಂದ 200 ವಿಕೆಟ್ ಮೈಲಿಗಲ್ಲನ್ನು ಸಾಧಿಸಿದ್ದರು. ಜಹೀರ್ ಖಾನ್ ಅವರು 144 ಪಂದ್ಯ, ಅನಿಲ್ ಕುಂಬ್ಳೆ 147 ಪಂದ್ಯ, ಜಾವಗಲ್ ಶ್ರೀನಾಥ್ 147 ಪಂದ್ಯ ಮತ್ತು ಕಪಿಲ್ ದೇವ್ ಅವರು 166 ಪಂದ್ಯಗಳಲ್ಲಿ ಈ ಸಾಧನೆ ಮೆರೆದಿದ್ದರು. ಈಗ ಶಮಿ ಅವರು ಇವರೆಲ್ಲರ ಸಾಧನೆಯನ್ನು ಮೀರಿ ನಿಂತಿದ್ದಾರೆ.

ಐಸಿಸಿ ಟೂರ್ನಿಗಳಲ್ಲೂ ಹೆಚ್ಚು ವಿಕೆಟ್: ಐಸಿಸಿ ಟೂರ್ನಿಗಳಲ್ಲಿ ಅತೀ ಹೆಚ್ಚು ವಿಕೆಟ್ ಪಡೆದ ದಾಖಲೆಯನ್ನು ಸಹ ಮೊಹಮ್ಮದ್ ಶಮಿ ಅವರು ತಮ್ಮ ಹೆಸರಿಗೆ ಬರೆಸಿಕೊಂಡಿದ್ದಾರೆ. ಏಕದಿನ ವಿಶ್ವಕಪ್‌ನಲ್ಲಿ 55, ಟಿ20 ವಿಶ್ವಕಪ್‌ನಲ್ಲಿ 14 ಮತ್ತು ಚಾಂಪಿಯನ್ ಟ್ರೋಫಿಯಲ್ಲಿ 5 ವಿಕೆಟ್‌ಗಳನ್ನು ಪಡೆದಿರುವ ಶಮಿ ಅವರ ಒಟ್ಟಾರೆ ಐಸಿಸಿ ಟೂರ್ನಿಗಳ ವಿಕೆಟ್ ಸಾಧನೆ ಇದೀಗ 72ಕ್ಕೂ ಹೆಚ್ಚಾಗಿದೆ. ಈ ಹಿಂದೆ 3 ಟೂರ್ನಿಗಳಲ್ಲಿ ಜಹೀರ್ ಖಾನ್ ಅವರು 71 ವಿಕೆಟ್‌ಗಳನ್ನು ಗಳಿಸಿದ್ದು ಭಾರತದ ಪರ ದಾಖಲೆಯಾಗಿತ್ತು.

ಎಂಎಲ್‌ಸಿ ಚುನಾವಣೆ ಮರು ಮತ ಎಣಿಕೆಗೆ ಹೈಕೋರ್ಟ್ ಆದೇಶ

● ಪರಿಷತ್ ಉಪ ಸಭಾಪತಿ ಪ್ರಾಣೇಶ್‌ಗೆ ಸಂಕಷ್ಟ ● 3 ವರ್ಷಗಳ ಬಳಿಕ ಮರು ಮತ ಎಣಿಕೆ ನಡೆಯುತ್ತಿರುವ ಅಪರೂಪದ ಪ್ರಕರಣ







ಪ್ರಾಣೇಶ್ ಗಾಯತ್ರಿ

ಚಿಕ್ಕಮಗಳೂರು, ಫೆ.20– ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ 2021ರಲ್ಲಿ ನಡೆದಿದ್ದ ಚುನಾವಣೆಯ ಮರು ಮತ ಎಣಿಕೆಗೆ ಹೈಕೋರ್ಟ್ ಆದೇಶ ನೀಡಿದ್ದು, ಜಿಲ್ಲಾಡಳಿತ ಸಿದ್ಧತೆ ನಡೆಸಿದೆ.

ಈ ಚುನಾವಣೆಯಲ್ಲಿ ಪ್ರಸ್ತುತ ವಿಧಾನ ಪರಿಷತ್ ಉಪ ಸಭಾಪತಿಯಾಗಿರುವ ಎಂ.ಕೆ. ಪ್ರಾಣೇಶ್ ವಿರುದ್ಧ ಕೇವಲ 6 ಮತಗಳ ಅಂತರದಿಂದ ಪರಾಭವ ಗೊಂಡಿದ್ದ ವಿಧಾನ ಪರಿಷತ್ ಮಾಜಿ ಸದಸ್ಯೆ ಗಾಯತ್ರಿ ಶಾಂತೇಗೌಡ ಅವರು ಮರು ಮತ ಎಣಿಕೆ ನಡೆಸುವಂತೆ ಹೈಕೋರ್ಟ್ ಮೆಟ್ಟಿಲೇರಿದ್ದರು.

ಜೆಡಿಎಸ್ ಅಭ್ಯರ್ಥಿ ಇಲ್ಲದ ಕಾರಣ ಬಿಜೆಪಿ–ಕಾಂಗ್ರೆಸ್ ನಡುವೆ ಈ ಚುನಾವಣೆಯಲ್ಲಿ ನೇರ ಹಣಾಹಣಿ ಏರ್ಪಟ್ಟಿತ್ತು. 2021ರ ಡಿಸೆಂಬರ್ 14ರಂದು ಮತ ಎಣಿಕೆ ನಡೆದಿದ್ದು, ಚಲಾವಣೆಗೊಂಡಿದ್ದ 2410 ಮತಗಳಲ್ಲಿ 39 ಅಸಿಂಧುವಾಗಿ ದ್ದವು. ಬಾಕಿ 2371 ಮತಗಳಲ್ಲಿ ಬಿಜೆಪಿಯ ಎಂ.ಕೆ. ಪ್ರಾಣೇಶ್ 1188 ಮತ ಪಡೆದು ಜಯ ಗಳಿಸಿದ್ದರು. ಕಾಂಗ್ರೆಸ್‌ನ ಗಾಯತ್ರಿ ಶಾಂತೇಗೌಡ 1182 ಮತ ಗಳಿಸಿದ್ದರು. ಮತ ಎಣಿಕೆಯಲ್ಲಿ ಗೊಂದಲವಿದೆ ಎಂದು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು.

ಮತಗಳ ಮರು ಎಣಿಕೆ ಮಾಡುವಂತೆ ಗಾಯತ್ರಿ ಶಾಂತೇಗೌಡ ಅವರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಯಾಗಿದ್ದ ಕೆ.ಎನ್.ರಮೇಶ್ ಅವರಿಗೆ ಮನವಿ ಸಲ್ಲಿಸಿದ್ದರು. ಆದರೆ, ಮನವಿ ತಿರಸ್ಕರಿಸಿ ಚುನಾವಣಾ ಆಯೋಗದ ಸೂಚನೆಯಂತೆ ಫಲಿತಾಂಶ ಪ್ರಕಟಿಸಿದ್ದರು.

ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ಮೂಡಿಗೆರೆ ಪಟ್ಟಣ ಪಂಚಾಯಿತಿಗಳ ಒಟ್ಟು 12 ನಾಮ ನಿರ್ದೇಶಿತ ಸದಸ್ಯರು ಈ ಚುನಾವಣೆಯಲ್ಲಿ ಮತದಾನ ಮಾಡಿದ್ದರು. ಅವರಿಗೆ ಮತದಾನ ಮಾಡಲು ಅವಕಾಶ ಇಲ್ಲ ಎಂದು ಗಾಯತ್ರಿ ಶಾಂತೇಗೌಡ ನ್ಯಾಯಾಲಯದ ಮೆಟ್ಟಿಲೇರಿದ್ದರು. ಆ ಸದಸ್ಯರ ಮತಗಳನ್ನು ಪ್ರತ್ಯೇಕವಾಗಿ ಇರಿಸಿ ಮರು ಎಣಿಕೆ ಮಾಡಿ ವರದಿ ಕಳಿಸುವಂತೆ ಜಿಲ್ಲಾಧಿಕಾರಿಗೆ ಹೈಕೋರ್ಟ್ ಸೂಚನೆ ನೀಡಿತ್ತು.

ಮತಪತ್ರಗಳು ಖಜಾನೆಯಲ್ಲಿದ್ದು, ಮರು ಮತ ಎಣಿಕೆ ನಡೆಸಿ ಯಾರಿಗೆ ಎಷ್ಟು ಮತಗಳು ಬಂದಿವೆ ಎಂಬುದನ್ನು ಜಿಲ್ಲಾಡಳಿತ ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಿದೆ. ಈ ಆಧಾರದ ಮೇಲೆ ನ್ಯಾಯಾಲಯ ವಿಜೇತ ಅಭ್ಯರ್ಥಿ ಯಾರು ಎಂಬ ಬಗ್ಗೆ ಆದೇಶ ಹೊರಡಿಸಲಿದೆ.

ಮರು ಮತ ಎಣಿಕೆಗೆ ನ್ಯಾಯಾಲಯ ಆದೇಶ ನೀಡಿದ್ದು, ಎಣಿಕೆ ಕಾರ್ಯವನ್ನು ಹೇಗೆ ನಡೆಸಬೇಕು ಎಂಬ ಬಗ್ಗೆ ಚುನಾವಣಾ ಆಯೋಗದ ಮಾರ್ಗಸೂಚಿ ಬಂದಿಲ್ಲ. 3 ವರ್ಷಗಳ ಬಳಿಕ ನ್ಯಾಯಾಲಯದ ನಿರ್ದೇಶನದಂತೆ ಮರು ಮತ ಎಣಿಕೆ ನಡೆಯುತ್ತಿರುವ ಅಪರೂಪದ ಪ್ರಕರಣ ಇದಾಗಿದ್ದು, ಆಯೋಗದ ಮಾರ್ಗದರ್ಶನ ಮುಖ್ಯ. ಮಾರ್ಗಸೂಚಿ ಬಂದ ತಕ್ಷಣ ಎಲ್ಲಾ ಅಭ್ಯರ್ಥಿಗಳಿಗೆ ನೋಟಿಸ್ ಜಾರಿ ಮಾಡಿ ಪ್ರಕ್ರಿಯೆ ಆರಂಭಿಸಲಾಗುತ್ತದೆ. ವಾರದಲ್ಲಿ ಈ ಪ್ರಕ್ರಿಯೆ ಪೂರ್ಣಗೊಂಡು ನ್ಯಾಯಾಲಯಕ್ಕೆ ವರದಿ ಸಲ್ಲಿಕೆಯಾಗಲಿದೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಇಡಿ ಸಮನ್ಸ್ ರದ್ದು ಕೋರಿ ಸಿದ್ದರಾಮಯ್ಯ ಪತ್ನಿ ಅರ್ಜಿ; ತೀರ್ಪು ಕಾಯ್ದಿರಿಸಿದ ಹೈಕೋರ್ಟ್



ಪಾರ್ವತಿ



ಭೈರತಿ ಸುರೇಶ್

ಬೆಂಗಳೂರು, ಫೆ.20– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದ ಜಾರಿ ನಿರ್ದೇಶನಾಲಯ (ಇಡಿ)ದ ಸಮನ್ಸ್ ರದ್ದುಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಮತ್ತು ಸಚಿವ ಬೈರತಿ ಸುರೇಶ್ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಗುರುವಾರ ಆದೇಶ ಕಾಯ್ದಿರಿಸಿದೆ.

ಜನವರಿ 27 ರಂದು ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಪಾರ್ವತಿ ಮತ್ತು ಸಚಿವ ಬೈರತಿ ಸುರೇಶ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಇಡಿ ನೀಡಿದ್ದ ನೋಟಿಸ್‌ಗೆ ಹೈಕೋರ್ಟ್ ತಡೆ ನೀಡಿತ್ತು.

ವಿಚಾರಣೆಯ ಸಮಯದಲ್ಲಿ ಪಾರ್ವತಿ ಪರ ವಾದ ಮಂಡಿಸಿದ ಹಿರಿಯ ವಕೀಲ ಸಂದೇಶ್ ಜೆ ಚೌಟ ಅವರು, ಈಗಾಗಲೇ ಪ್ರಶ್ನಾರ್ಹ ನಿವೇಶನಗಳನ್ನು ಮರಳಿಸಲಾಗಿದೆ. ಸೈಟ್‌ಗಳನ್ನು ಮರಳಿಸಿರುವುದರಿಂದ ಇಡಿಗೆ ತನಿಖೆ ನಡೆಸುವ ಅಧಿಕಾರ ಇಲ್ಲ. ಅಪರಾಧದಿಂದ ಗಳಿಸಿದ ಸಂಪತ್ತಿದ್ದರೆ ಮಾತ್ರ ಇಡಿ ತನಿಖೆ ನಡೆಸಬಹುದು. ಆದರೆ ಸೈಟ್‌ಗಳನ್ನು ಮರಳಿಸಿದ ನಂತರ ಇಡಿ ತನಿಖೆ ಆರಂಭಿಸಿದೆ ಅಪರಾಧದಿಂದ ಗಳಿಸಿದ ಹಣ ಚಟುವಟಿಕೆಗೆ ಬಳಕೆಯಾಗಬೇಕು. ಇಲ್ಲವಾದರೆ ಪಿಎಂಎಲ್‌ಎ ಕಾಯ್ದೆಯ ಅಂಶಗಳು ಅನ್ವಯವಾಗುವುದಿಲ್ಲವೆಂದು ವಾದಿಸಿದರು.

ಪಾರ್ವತಿ ಅವರು ಅಕ್ಟೋಬರ್ 1, 2024 ರಂದು ವಿವಾದಿತ ಸೈಟ್‌ಗಳನ್ನು ಹಿಂದಿರುಗಿಸಿದ್ದಾರೆ. ಮುಡಾದ 14 ಸೈಟ್‌ಗಳಲ್ಲದೇ 1708 ಸೈಟ್‌ಗಳ ಬಗ್ಗೆಯೂ ತನಿಖೆ ನಡೆಸುತ್ತಿದೆ. ಈಗಾಗಲೇ 160 ಸೈಟ್ ಗಳನ್ನು ಇಡಿ ತಾತ್ಕಾಲಿಕವಾಗಿ ಜಪ್ತಿ ಮಾಡಿದೆ. ತನ್ನ ಕಾರ್ಯವ್ಯಾಪ್ತಿ ಮೀರಿ ಇಡಿ ಪರ್ಯಾಯ ತನಿಖೆ ನಡೆಸುತ್ತಿದೆ. ಇಡಿ ತಾತ್ಕಾಲಿಕ ಜಪ್ತಿ ಆದೇಶದಲ್ಲಿ ಹಲವು ಅಂಶಗಳನ್ನು ಪ್ರಸ್ತಾಪಿಸಿದೆ ಭೂಸ್ವಾಧೀನ, ಭೂಪರಿ ವರ್ತನೆ ಇತ್ಯಾದಿಗಳ ಬಗ್ಗೆಯೂ ತನಿಖೆ ನಡೆಸಿದೆ. ಲೋಕಾಯುಕ್ತ ಪೊಲೀಸರ ತನಿಖಾ ವ್ಯಾಪ್ತಿಯಲ್ಲಿ ಇಡಿ ಪ್ರವೇಶಿಸಿದೆ. ಮುಡಾಗೆ ಹಿಂತಿರುಗಿಸಿರುವ 14 ಸೈಟ್‌ಗಳನ್ನು ಇಡಿ ಜಪ್ತಿ ಮಾಡಿಲ್ಲ. ಆದರೆ ಇತರೆ 160 ಸೈಟ್‌ಗಳನ್ನು ಇಡಿ ಜಪ್ತಿ ಮಾಡಿದೆ. ಈಗಾಗಲೇ ಲೋಕಾಯುಕ್ತ ಪೊಲೀಸರು ಬಿ ರಿಪೋರ್ಟ್ ಸಲ್ಲಿಸಿದ್ದಾರೆ. ತನಿಖೆಯಲ್ಲಿ ಯಾವುದೇ ಅಕ್ರಮ ಕಂಡು ಬಂದಿಲ್ಲವೆಂದು ವರದಿ ಸಲ್ಲಿಸಿದ್ದಾರೆ ಎಂದು ಸಿಎಂ ಪತ್ನಿ ಪಾರ್ವತಿ ಪರ ಸಂದೇಶ್ ಚೌಟ ವಾದ ಮಂಡಿಸಿದ್ದರು.

ಲೋಕಾಯುಕ್ತರು ಎಫ್‌ಐಆರ್ ದಾಖಲಿಸಿದ 4 ದಿನಗಳಲ್ಲೇ ಇಡಿ ಇಸಿಐಆರ್ ದಾಖಲಿಸಿದೆ. ಲೋಕಾಯುಕ್ತ ಪೊಲೀಸರ ತನಿಖೆಯನ್ನೇ ಇಡಿ ಪುನರಾವರ್ತಿಸುತ್ತಿದೆ ಎಂದು ವಾದಿಸಿ ಇಡಿ ತನಿಖಾ ವ್ಯಾಪ್ತಿಯನ್ನು ಅವರು ಪ್ರಶ್ನಿಸಿದರು. ಪ್ರತಿವಾದ ಮಂಡಿಸಿದ ಇಡಿ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ್ ಕಾಮತ್ ಅವರು, ನಡೆಯುತ್ತಿರುವ ಇಡಿ ತನಿಖೆಯನ್ನು ಸಮರ್ಥಿಸಿಕೊಂಡರು. ಮುಡಾ ನಿವೇಶನ ಹಂಚಿಕೆ ಹಗರಣವು ಕೆಲವು ವಹಿವಾಟುಗಳಿಗೆ ಸೀಮಿತವಾಗಿಲ್ಲ, ಬದಲಾಗಿ ವ್ಯವಸ್ಥಿತ ಉಲ್ಲಂಘನೆಗಳನ್ನು ಸೂಚಿಸುತ್ತದೆ ಎಂದು ವಾದಿಸಿದರು. ರಾಜಕಾರಣಿಗಳು ಮತ್ತು ಪ್ರಮುಖ ಅಧಿಕಾರಿಗಳ ಸಂಬಂಧಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿರುವ ಮಾದರಿಯನ್ನು ಇಡಿ ಬಹಿರಂಗಪಡಿಸಿದೆ ಎಂದು ಕಾಮತ್ ಹೇಳಿದರು.

ಈ ಪ್ರಕರಣವು ಭ್ರಷ್ಟಾಚಾರ ತಡೆ ಕಾಯ್ದೆಯಡಿ ಭ್ರಷ್ಟಾಚಾರವನ್ನು ಒಳಗೊಂಡಿದೆ. ತನಿಖೆಯು ಕೇವಲ 14 ನಿವೇಶನಗಳ ಬಗ್ಗೆ ಅಲ್ಲ. ಮುಡಾದ ಅಕ್ರಮಗಳ ಬಗ್ಗೆ ಇಡಿ ತನಿಖೆ ನಡೆಸುತ್ತಿದೆ. ಮುಡಾ ಮಾಜಿ ಆಯುಕ್ತರ ಸಂಬಂಧಿಗಳಿಗೆ ಹಲವು ಸೈಟ್ ಹಂಚಲಾಗಿದೆ ಎಂದರು. ವಿಚಾರಣೆಯ ಸಮಯದಲ್ಲಿ ಹೈಕೋರ್ಟ್ ಇಡಿಯ ತನಿಖೆಯು ನಿಜವಾಗಿಯೂ ಹಣ ವರ್ಗಾವಣೆಯನ್ನು ಒಳಗೊಂಡಿದೆಯೇ ಅಥವಾ ಲೋಕಾಯುಕ್ತದ ಬಿ–ರಿಪೋರ್ಟ್‌ನಿಂದ ಈಗಾಗಲೇ ಮುಚ್ಚಲ್ಪಟ್ಟ ಆರಂಭಿಕ ಭ್ರಷ್ಟಾಚಾರ ತನಿಖೆಯ ವಿಸ್ತರಣೆಯಾಗಿದೆಯೇ ಎಂದು ಪರಿಶೀಲಿಸಿತು.

ಈ ಪ್ರಕರಣದಲ್ಲಿ ಅಪರಾಧದ ಆದಾಯ ಎಲ್ಲಿದೆ? ಇಲ್ಲಿ ನಿವೇಶನ ಖರೀದಿ ಅಥವಾ ಮಾರಾಟವಾಗಿಲ್ಲ. ಭೂ ಬಳಕೆಗೆ ಬದಲಾಗಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಅಪರಾಧದ ಆದಾಯವು ಈ ಪ್ರಕ್ರಿಯೆಯಿಂದ ಹೊರಹೊಮ್ಮಿದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂದು ನ್ಯಾಯಾಲಯ ಹೇಳಿತು.

ಆದಾಗ್ಯೂ, ಲೋಕಾಯುಕ್ತ ತನ್ನ ಪ್ರಕರಣವನ್ನು ಮುಕ್ತಾಯಗೊಳಿಸಿದ್ದರೂ ಸ್ವತಂತ್ರ ತನಿಖೆ ನಡೆಸುವ ಅಧಿಕಾರ ಇಡಿಗೆ ಇದೆ ಎಂದು ಕಾಮತ್ ಸಮರ್ಥಿಸಿಕೊಂಡರು. ವಾದ, ಪ್ರತಿವಾದ ಆಲಿಸಿದ ಹೈಕೋರ್ಟ್ ತನ್ನ ತೀರ್ಪನ್ನು ಕಾಯ್ದಿರಿಸಿದ್ದು, ಲೋಕಾಯುಕ್ತ ಪ್ರಕರಣದ ಮುಂದಿನ ವಿಚಾರಣೆಯನ್ನು ಫೆಬ್ರವರಿ 24 ಕ್ಕೆ ನಿಗದಿಪಡಿಸಲಾಗಿದೆ.

ಪುಣೆಯಲ್ಲಿ ಹಿರಿಯ ನಾಗರಿಕರಿಗೆ ಎಟಿಎಂಗಳಲ್ಲಿ ವಂಚನೆ; ಮೈಸೂರು ವ್ಯಕ್ತಿ ಬಂಧನ

● 21 ಜನರ ಎಟಿಎಂ ಕದ್ದು 17.9 ಲಕ್ಷ ರೂ. ಲಪಟಾಯಿಸಿದ್ದ ಭೂಪ ● ಪ್ರಿಯತಮೆಗೆ ಉಡುಗೊರೆ ನೀಡಲು ಈ ಕದ್ದ ಹಣ ವಿನಿಯೋಗ ● ಮೈಸೂರಿನ ನೇತಾಜಿನಗರದ ಮನೆಯಿಂದ ಬಂಧಿಸಿ ಕರೆದೊಯ್ದ ಪುಣೆ ಪೊಲೀಸರು.



ಹೃದಯವಂತ ಖದೀಮ!

ಪೊಲೀಸರ ಪ್ರಾಥಮಿಕ ತನಿಖೆ ವೇಳೆ ಆರೋಪಿ ರಾಜೀವ್ ಪ್ರಹ್ಲಾದ್ ಕುಲಕರ್ಣಿಯ ಹೃದಯವಂತಿಕೆ ಅನಾವರಣಗೊಂಡಿದೆ. ಅವಿವಾಹಿತನಾಗಿದ್ದ ಈತ ಮೈಸೂರಿನ ಗೆಳತಿ ಹಾಗೂ ಆಕೆಯ ಪತಿಯೊಂದಿಗೆ ವಾಸವಿದ್ದ. ಕರ್ನಾಟಕ, ಮಹಾರಾಷ್ಟ್ರ ಇನ್ನಿತರ ರಾಜ್ಯಗಳಲ್ಲಿ ಎಟಿಎಂನಲ್ಲಿ ಹಿರಿಯ ನಾಗರಿಕರ ವಂಚಿಸಿ, ದೋಚುತ್ತಿದ್ದ ಹಣದಲ್ಲಿ ಪ್ರಿಯತಮೆಗೆ ಸ್ಕೂಟರ್, ಕಾರು ಇನ್ನಿತರ ಉಡುಗೊರೆ ಕೊಡಿಸುವುದರ ಜೊತೆಗೆ ಆಕೆಯ ಪತಿಯ ಹೃದಯ ಚಿಕಿತ್ಸೆ ಹಾಗೂ ತನ್ನ ಗೆಳೆಯನ ಚಿಕಿತ್ಸೆಗೂ ವೆಚ್ಚ ಮಾಡಿರುವುದಾಗಿ ತಿಳಿದುಬಂದಿದೆ. ಮರಾಠಿ ಅರ್ಥವಾಗುವುದಿಲ್ಲ ಎಂದು ಆರೋಪಿ ತಿಳಿಸಿದ್ದರಿಂದ ಪೊಲೀಸರು ಮುಂದಿನ ತನಿಖೆಗಾಗಿ ಕನ್ನಡದ ಅನುವಾದಕರೊಬ್ಬರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದಾರೆ.

ಮೈಸೂರು, ಫೆ.20(ಎಂಟಿವೈ)– ಪ್ರಿಯತಮೆಗೆ ಉಡುಗೊರೆ ಕೊಡಿಸುವ ಸಲುವಾಗಿ ಎಟಿಎಂಗೆ ಬರುವ ಹಿರಿಯ ನಾಗರಿಕರನ್ನು ವಂಚಿಸಿ, ಹಣ ದೋಚುತ್ತಿದ್ದ ಮೈಸೂರಿನ ವ್ಯಕ್ತಿಯೊಬ್ಬನನ್ನು ಪುಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ನೇತಾಜಿನಗರದ ನಿವಾಸಿ ರಾಜೀವ್ ಪ್ರಹ್ಲಾದ್ ಕುಲಕರ್ಣಿ(52) ಎಂಬುವವರನ್ನು ಬಂಧಿಸಿ, ಕರೆದೊಯ್ದಿದ್ದಾರೆ. ಈ ವೇಳೆ ಆತನ ಮನೆಯಲ್ಲಿದ್ದ ವಿವಿಧ ಬ್ಯಾಂಕ್‌ಗಳ 166 ಎಟಿಎಂ ಕಾರ್ಡ್‌ಗಳು ಹಾಗೂ ಸುಮಾರು 14 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಮೂಲಕ 2022ರಿಂದ ಪುಣೆಯಲ್ಲಿ ನಡೆಯುತ್ತಿದ್ದ ಎಟಿಎಂ ವಂಚನೆ ಪ್ರಕರಣವನ್ನು ಭೇದಿಸಿದ್ದಾರೆ.

ಏನಿದು ಪ್ರಕರಣ?: ಪುಣೆಯ ವಿಕ್ರಮಬಾಗ್ ಪೊಲೀಸ್ ಠಾಣಾ ವ್ಯಾಪ್ತಿಯ ನವಿಪೇಟೆ ಗಂಜಾವೆ ಚೌಕ್‌ನಲ್ಲಿರುವ ಎಟಿಎಂ ಕೇಂದ್ರವೊಂದರಲ್ಲಿ ಫೆ.2ರಂದು ಹಿರಿಯ ನಾಗರಿಕರೊಬ್ಬರು ಹಣ ಡ್ರಾ ಮಾಡಲು ಬಂದಿದ್ದರು. ಆ ವೇಳೆ ಎಟಿಎಂ ಕೇಂದ್ರದೊಳಗೆ ಹೋದ ರಾಜೀವ್ ಪ್ರಹ್ಲಾದ್ ಕುಲಕರ್ಣಿ, ಹಣ ಬಿಡಿಸಿಕೊಳ್ಳಲು ಹಿರಿಯ ವ್ಯಕ್ತಿಗೆ ಸಹಾಯ ಮಾಡುವ ನೆಪದಲ್ಲಿ ಎಟಿಎಂ ಕಾರ್ಡ್ ಬದಲಿಸಿದ. ಅದನ್ನು ತನ್ನದೇ ಕಾರ್ಡ್ ಎಂದು ತಿಳಿದ ಹಿರಿಯ ವ್ಯಕ್ತಿ, ಎಟಿಎಂಗೆ ಕಾರ್ಡ್ ಹಾಕಿ ಪಿನ್ ನಂಬರ್ ನಮೂದಿಸಿದರು. ಆದರೆ ಹಣ ಬರುತ್ತಿಲ್ಲವೆಂದು ಅಲ್ಲಿಂದ ತೆರಳಿದರು. ಬಳಿಕ ಪಿನ್ ನಂಬರ್ ತಿಳಿದುಕೊಂಡಿದ್ದ ವಂಚಕ ರಾಜೀವ್ ಪ್ರಹ್ಲಾದ್, ತಾನು ಎಗರಿಸಿದ್ದ ಎಟಿಎಂ ಕಾರ್ಡ್ ಬಳಸಿ, 22 ಸಾವಿರ ರೂ. ಡ್ರಾ ಮಾಡಿಕೊಂಡು ಅಲ್ಲಿಂದ ಪರಾರಿಯಾಗಿದ್ದ.

ಈ ಸಂಬಂಧ ವಂಚನೆಗೊಳಗಾಗಿದ್ದ ಹಿರಿಯ ವ್ಯಕ್ತಿ, ವಿಕ್ರಮ್‌ಬಾಗ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು, ತಂಡ ರಚಿಸಿಕೊಂಡು ತನಿಖೆ ಆರಂಭಿಸಿದ್ದರು. ಸಿಬ್ಬಂದಿ ಮಯೂರ್ ಬೋಸ್ಲೆ ಹಾಗೂ ಆಶಿಶ್ ಖರತ್ ಎಟಿಎಂ ಕೇಂದ್ರದ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಎಟಿಎಂನಲ್ಲಿ ಹಿರಿಯ ನಾಗರಿಕರ ಯಾಮಾರಿಸಿ, ಹಣ ದೋಚುತ್ತಿದ್ದ ಜಾಲದ ಬಗ್ಗೆ ತಿಳಿಯಿತು. ನಂತರ ತನಿಖೆ ಚುರುಕುಗೊಳಿಸಿ, ಆರೋಪಿ ಮೈಸೂರಿನಲ್ಲಿರುವುದನ್ನು ಪತ್ತೆ ಮಾಡಿ, ಬಂಧಿಸಿದ್ದಾರೆ.

ಹಲವು ಪ್ರಕರಣಗಳಲ್ಲಿ ಭಾಗಿ: ಬಂಧಿತ ರಾಜೀವ್ ಪ್ರಹ್ಲಾದ್ ಕುಲಕರ್ಣಿ ಅವಿವಾಹಿತನಾಗಿದ್ದು, ತನ್ನ ಪ್ರಿಯತಮೆಗೆ ಬೆಲೆಬಾಳುವ ಉಡುಗೊರೆ ನೀಡುವ ಸಲುವಾಗಿ ಈ ರೀತಿಯ ದುಷ್ಕೃತ್ಯಕ್ಕಿಳಿದಿದ್ದ ಎನ್ನಲಾಗಿದೆ. 2022ರಿಂದಲೂ ಎಟಿಎಂಗಳಲ್ಲಿ ಹಣ ಡ್ರಾ ಮಾಡಲು ಬರುವ ಹಿರಿಯ ನಾಗರಿಕರಿಗೆ ನೆರವು ನೀಡುವ ನೆಪದಲ್ಲಿ ವಂಚಿಸುತ್ತಿದ್ದ. ಈವರೆಗೆ 100ಕ್ಕೂ ಹೆಚ್ಚು ಮಂದಿಗೆ ವಂಚಿಸಿದ್ದು, ಸುಮಾರು 18 ಲಕ್ಷ ರೂ. ವಂಚಿಸಿರುವುದು ಮಾತ್ರ ಬೆಳಕಿಗೆ ಬಂದಿದೆ. ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 16 ಪ್ರಕರಣಗಳು ಈತನ ವಿರುದ್ಧ ದಾಖಲಾಗಿದೆ. ವಂಚನೆಗೊಳಗಾದವರೆಲ್ಲಾ ದೂರು ನೀಡುವ ಸಾಧ್ಯತೆ ಇದೆ ಎಂದು ಸಿಬ್ಬಂದಿ ಸಂದೀಪ್ ಸಿಂಧ್ ಗಿಲ್ ತಿಳಿಸಿದ್ದಾರೆ.

ಫೆ.23, ಉಚಿತ ಆರೋಗ್ಯ ತಪಾಸಣೆ, ಔಷಧಿ ವಿತರಣೆ ಕಾರ್ಯಕ್ರಮ

ಮೈಸೂರು, ಫೆ.20– ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ವತಿಯಿಂದ ಫೆ.23ರಂದು ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೂ ಮೈಸೂರು–ಬನ್ನೂರು ರಸ್ತೆಯ ಹಾರೋಹಳ್ಳಿ ಬಳಿ ಇರುವ ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ನುರಿತ ವೈದ್ಯರು ಎಲ್ಲಾ ರೀತಿಯ ಆರೋಗ್ಯ ತಪಾಸಣೆ ನಡೆಸಿ, ಉಚಿತ ಔಷಧಿಗಳನ್ನು ವಿತರಿಸುವರು. ಮೈಸೂರು ನಗರ ಮತ್ತು ತಾಲೂಕಿನ ಸುತ್ತ–ಮುತ್ತಲಿನ ನಿವಾಸಿಗಳು ಇದರ ಸದುಪಯೋಗಪಡಿಸಿಕೊಳ್ಳುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸವಿತಾ ಗಣೇಶ್(ಮೊ.8197902468) ಮತ್ತು ಟ್ರಸ್ಟ್ ಅಧ್ಯಕ್ಷ ವಿಜಯಕುಮಾರ್ ಮೊ.(9945607981) ಅವರುಗಳನ್ನು ಸಂಪರ್ಕಿಸಲು ಟ್ರಸ್ಟ್ ಮನವಿ ಮಾಡಿದೆ.